# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 29 ಗುರುವಾರ 2022

ಸಂಪುಟ: 43 | ಸಂಚಿಕೆ: 164 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4





ಶ್ರೀರಂಗಪಟ್ಟಣ ಸಮೀಪದ ಕಿರಂಗೂರು ಬನ್ನಿಮಂಟಪದಲ್ಲಿ ಜಂಬೂಸವಾರಿಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ಸಚಿವ ಕೆ.ಸಿ.ನಾರಾಯಣಗೌಡ, ಶಾಸಕ ರವೀಂದ್ರ ಶ್ರೀಕಂಠಯ್ಯ, ಜಿಲ್ಲಾಧಿಕಾರಿ ಎಸ್.ಅಶ್ವಥಿ, ಎಸ್‌ಪಿ ಎನ್.ಯತೀಶ್, ಪಾಂಡವಪುರ ಉಪವಿಭಾಗಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಪುರಸಭೆ ಅಧ್ಯಕ್ಷೆ ನಿರ್ಮಲಾ, ಉಪಾಧ್ಯಕ್ಷ ಕೃಷ್ಣಪ್ಪ ಸೇರಿದಂತೆ ಜಿಲ್ಲಾಡಳಿತ, ತಾಲೂಕು ಆಡಳಿತ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ಉಪಸ್ಥಿತರಿದ್ದರು. [ಪೂರ್ಣ ವಿವರ ಪುಟ-6]

# ಪಿಎಫ್‌ಐ ಐದು ವರ್ಷ ನಿಷೇಧ


## ಭಯೋತ್ಪಾದಕರೊಂದಿಗೆ ಸಂಪರ್ಕದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಮಹತ್ವದ ಆದೇಶ

ನವದೆಹಲಿ, ಸೆ.28– ದೇಶವಿರೋಧಿ ಚಟುವಟಿಕೆ ಆರೋಪದ ಹಿನ್ನೆಲೆಯಲ್ಲಿ ದೇಶದಾದ್ಯಂತ ಐದು ವರ್ಷಗಳ ಕಾಲ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯನ್ನು ನಿಷೇಧ ಮಾಡಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.




ಈ ಕುರಿತು ಕೇಂದ್ರ ಗೃಹ ಇಲಾಖೆ ಆದೇಶ ಹೊರಡಿಸಿದ್ದು, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಮತ್ತು ಅದರ ಸಹವರ್ತಿಗಳು ಅಥವಾ ಅಂಗಸಂಸ್ಥೆಗಳನ್ನು ತತ್‌ಕ್ಷಣದಿಂದಲೇ ಜಾರಿಗೆ ಬರುವಂತೆ ದೇಶದಾದ್ಯಂತ ಐದು ವರ್ಷಗಳ ಕಾಲ ನಿಷೇಧಿಸಲಾಗಿದ್ದು, ಇದು ಕಾನೂನು ಬಾಹಿರ ಸಂಘಟನೆ ಎಂದು ಘೋಷಣೆ ಮಾಡಿದೆ. ಪಿಎಫ್‌ಐ ನಿಷೇಧಕ್ಕೆ ಕೇಂದ್ರ ಸರ್ಕಾರವು ▶ 5ನೇ ಪುಟಕ್ಕೆ

### ದೇಶ ವಿರೋಧಿ ಕುಕೃತ್ಯ ನಡೆಸುವವರಿಗೆ ಇದು ಸಂದೇಶ



**ಬೆಂಗಳೂರು:** ಪಿಎಫ್‌ಐ ಸಂಘಟನೆ ಮೇಲಿಂದ ಮೇಲೆ ದೇಶದಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸುತ್ತಾ ಬಂದಿದೆ. ತನ್ನ ಹಲವಾರು ರೂಪಾಂತರಗಳ ಫಲಶ್ರುತಿಯೇ ಪಿಎಫ್‌ಐ, ಪಿ.ಎಫ್.ಐ ಮತ್ತದರ ಸಂಘ ಸಂಸ್ಥೆಗಳು ನಿಷೇಧಿತ ಸಿಮಿ ಸಂಘಟನೆಯ ಮುಂದುವರೆದ ಅವತಾರಗಳಾಗಿದ್ದವು. ದೇಶದಲ್ಲಿ ಹಲವಾರು ವಿಧ್ವಂಸಕ ಚಟುವಟಿಕೆಯಲ್ಲಿ ಪಾಲ್ಗೊಂಡ ಬಗ್ಗೆ ಅನೇಕ ಸಾಕ್ಷ್ಯಾಧಾರಗಳು ಲಭಿಸಿದ್ದವು. ಈಗ ಆ ಸಂಘಟನೆಗಳನ್ನು ನಿಷೇಧಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಮಂತ್ರಿ ಅಮಿತ್ ಶಾ ಅವರು ಸೂಕ್ತ ನಿರ್ಧಾರ ಕೈಗೊಂಡಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೇಂದ್ರದ ನಿರ್ಧಾರವನ್ನು ಸ್ವಾಗತಿಸಿದ್ದಾರೆ.

### ಪಿಎಫ್‌ಐ ವೆಬ್‌ಸೈಟ್, ಸಾಮಾಜಿಕ ಮಾಧ್ಯಮಗಳ ಖಾತೆ ನಿರ್ಬಂಧ

ದೇಶಾದ್ಯಂತ ಎನ್‌ಐಎ ದಾಳಿ ಹಿಂದೆಯೇ ದೇಶದಲ್ಲಿ ಪ್ಯಾಪುಲರ್ ಫ್ರಂಟ್ ಆಫ್ ಇಂಡಿಯಾ ನಿಷೇಧ ಮಾಡಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದ ಬೆನ್ನಲ್ಲೇ ಇದೀಗ ಅವುಗಳ ಅಂಗಸಂಸ್ಥೆಗಳ ವೆಬ್‌ಸೈಟ್, ಸಾಮಾಜಿಕ ಮಾಧ್ಯಮ ಖಾತೆಗಳನ್ನ ನಿರ್ಬಂಧಿಸುವಂತೆ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ.

ಪಿಎಫ್‌ಐ ಮತ್ತು ಅದರ ಅಂಗಸಂಸ್ಥೆಗಳ ಅಧಿಕೃತ ವೆಬ್‌ಸೈಟ್‌ಗಳು, ಟ್ವಿಟರ್, ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಖಾತೆಗಳು, ಯೂಟ್ಯೂಬ್ ಚಾನೆಲ್‌ಗಳನ್ನು ಕೇಂದ್ರ ಸರ್ಕಾರ ನಿಷೇಧಿಸಿದೆ. PFI, ರಿಹಬ್ ಇಂಡಿಯಾ ಫೌಂಡೇಶನ್, ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ, ಆಲ್ ಇಂಡಿಯಾ ಇಮಾಮ್ಸ್ ಕೌನ್ಸಿಲ್ (ಎಐಐಸಿ), ನ್ಯಾಷನಲ್ ಕಾನ್ಫೆಡರೇಶನ್ ಆಫ್ ಹ್ಯೂಮನ್ ರೈಟ್ಸ್ ಆರ್ಗನೈಸೇಶನ್ (ಎನ್‌ಸಿಎಚ್‌ಆರ್‌ಒ), ನ್ಯಾಷನಲ್ ವುಮೆನ್ಸ್ ಫ್ರಂಟ್, ಜೂನಿಯರ್ ಫ್ರಂಟ್, ಎಂಪವರ್ ಇಂಡಿಯಾ ಫೌಂಡೇಶನ್ ಮತ್ತು ರೆಹಬ್ ಫೌಂಡೇಶನ್ (ಕೇರಳ) ಅನ್ನು ಶಾಶ್ವತವಾಗಿ ನಿರ್ಬಂಧಿಸಲಾಗಿದೆ ಮತ್ತು ಅವರು ಪೋಸ್ಟ್ ಮಾಡಿದ ವಿಷಯಗಳನ್ನು ತೆಗೆದುಹಾಕಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

PFI, RIF, AIIC ವೆಬ್‌ಸೈಟ್‌ಗಳನ್ನು ಈಗಾಗಲೇ ನಿರ್ಬಂಧಿಸಲಾಗಿದೆ. ಇನ್ನುಳಿದವು ಕೇಂದ್ರ ಏಜೆನ್ಸಿಗಳ ಉಲ್ಲೇಖದ ಆಧಾರದ ಮೇಲೆ ದೂರಸಂಪರ್ಕ ಇಲಾಖೆ ಆದೇಶದ ಮೇರೆಗೆ ಪ್ರಕ್ರಿಯೆಯಲ್ಲಿವೆ ಎಂದು ವಾಹಿನಿಗಳು ವರದಿ ಮಾಡಿವೆ. ಫೇಸ್‌ಬುಕ್ ಮತ್ತು ಟ್ವಿಟರ್ ಸೇರಿದಂತೆ ಸಾಮಾಜಿಕ ಮಾಧ್ಯಮ ಕಂಪನಿಗಳಿಗೆ ತಮ್ಮ ಖಾತೆಗಳನ್ನು ಅಥವಾ ಈಗ ಭಯೋತ್ಪಾದಕ ಸಂಘಟನೆಯಾಗಿರುವ ▶ 5ನೇ ಪುಟಕ್ಕೆ

### ಪಿಎಫ್‌ಐ ಕಚೇರಿಗಳ ಬಂದ್ ಮಾಡಲು ಆದೇಶ

#### ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ

ಬೆಂಗಳೂರು, ಸೆ. 28– ಪಿಎಫ್‌ಐ ಸಂಘಟನೆಯನ್ನು ಕೇಂದ್ರ ಸರ್ಕಾರ ನಿಷೇಧಿಸಿರುವ ಹಿನ್ನೆಲೆಯಲ್ಲಿ ದೇಶಾದ್ಯಂತ ಇರುವ ಪಿಎಫ್‌ಐ ಹಾಗೂ ಅದರ ಅಂಗಸಂಸ್ಥೆಗಳ ಕಚೇರಿಗಳನ್ನು ಸೀಜ್ ಮಾಡುವಂತೆ ಎನ್‌ಐಎ ವರದಿ ನೀಡಿದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಸೂಚನೆಯಂತೆ ರಾಜ್ಯ ಸರ್ಕಾರವು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಪಿಎಫ್‌ಐ ಸಂಘಟನೆಗಳ ಕಚೇರಿಗಳನ್ನು ಬಂದ್ ಮಾಡುವಂತೆ ಸುತ್ತೋಲೆ ರವಾನಿಸಿದೆ. ತಹಸೀಲ್ದಾರ್ ನೇತೃತ್ವದಲ್ಲಿ ಪೊಲೀಸ್ ಅಧಿಕಾರಿಗಳ ಸಹಕಾರ ಪಡೆದು ಪಿಎಫ್‌ಐ ಹಾಗೂ ಅದರ ಅಂಗಸಂಸ್ಥೆಗಳ ಕಚೇರಿಗಳನ್ನು ಬಂದ್ ಮಾಡಬೇಕು. ಅದಕ್ಕೂ ಮುನ್ನ ಕಚೇರಿಗಳನ್ನು ಸಂಪೂರ್ಣವಾಗಿ ಪರಿಶೀಲಿಸಿ ಅಲ್ಲಿರುವ ನಗದು ▶ 5ನೇ ಪುಟಕ್ಕೆ

### ಆರೆಸ್ಸೆಸ್ ಮೇಲೂ ಕ್ರಮ ಕೈಗೊಳ್ಳಿ



**ಬೆಂಗಳೂರು:** ಸಮಾಜದಲ್ಲಿ ಅಶಾಂತಿ ಉಂಟು ಮಾಡುವವರ ವಿರುದ್ಧ ಕ್ರಮ ಕೈಗೊಂಡರೆ ನಮ್ಮ ವಿರೋಧ ಇಲ್ಲ. ಯಾವುದೇ ಸಂಘಟನೆ ಯಾದರೂ ನಿಷೇಧಿಸಬೇಕು. ಆರೆಸ್ಸೆಸ್‌ನವರೂ ಸಮಾಜದಲ್ಲಿ ಶಾಂತಿ ಹಾಳು ಮಾಡುತ್ತಿದ್ದಾರೆ. ಅವರ ಮೇಲೂ ಕ್ರಮ ತೆಗೆದುಕೊಳ್ಳಬೇಕು ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ. ಯಾರು ಸಮಾಜಕ್ಕೆ ಕಂಟಕಪ್ರಾಯರಾಗಿದ್ದಾರೋ ಅವರ ವಿರುದ್ಧ ಕ್ರಮ ತೆಗೆದುಕೊಂಡರೆ ನಮ್ಮ ಅಭ್ಯಂತರವಿಲ್ಲ. ಶಾಂತಿ ಹಾಳು ಮಾಡುತ್ತಿದ್ದವರ ಮೇಲೆ ಕ್ರಮ ಜರುಗಿಸಲಿ. ನಾನು ಆಗಲೂ ಹೇಳುತ್ತಿದ್ದೆ. ಈಗಲೂ ಹೇಳುತ್ತಿದ್ದೇನೆ. ದ್ವೇಷದ ರಾಜಕಾರಣ ಮಾಡಿದರೆ ಕ್ರಮ ಜರುಗಿಸಲಿ ಎಂದರು.

### ಸಂಘಟನೆಯನ್ನೇ ವಿಸರ್ಜಿಸಿದ ಪಿಎಫ್‌ಐ

**ಮಹತ್ವದ ಬೆಳವಣಿಗೆಯಲ್ಲಿ ಕಾನೂನುಬಾಹಿರ ಚಟುವಟಿಕೆಗಳ ಹಿನ್ನೆಲೆ ಕೇಂದ್ರ ಸರ್ಕಾರದಿಂದ 5 ವರ್ಷಗಳ ಕಾಲ ನಿಷೇಧಕ್ಕೊಳಗಾಗಿರುವ PFI ಸಂಘಟನೆ ಇದೀಗ ತನ್ನನ್ನು ತಾನೇ ವಿಸರ್ಜಿಸಿದೆ. ಪಿಎಫ್‌ಐನ ಕೇರಳ ರಾಜ್ಯ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಸತ್ತಾರ್ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯನ್ನು ವಿಸರ್ಜಿಸಿರುವುದಾಗಿ ಮಾಹಿತಿ ನೀಡಿದ್ದಾರೆ.**

### ಕೇಂದ್ರ ಸರ್ಕಾರಿ ನೌಕರರ ತುಟ್ಟಿಭತ್ಯೆ ಶೇ.4ರಷ್ಟು ಹೆಚ್ಚಳ

**ನವದೆಹಲಿ:** ಮಹತ್ವದ ಬೆಳವಣಿಗೆಯಲ್ಲಿ ಕೇಂದ್ರ ಸರ್ಕಾರಿ ನೌಕರರ ತುಟ್ಟಿ ಭತ್ಯೆ (ಡಿಎ) ಅನ್ನು ಶೇ.4ರಷ್ಟು ಹೆಚ್ಚಿಸುವ ಪ್ರಸ್ತಾವನೆಗೆ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಈ ಕುರಿತು ಸಚಿವ ಸಂಪುಟ ಸಭೆಯ ಬಳಿಕ ಮಾಹಿತಿ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದು, ಕೇಂದ್ರ ಸರ್ಕಾರಿ ನೌಕರರ ತುಟ್ಟಿ ಭತ್ಯೆ (ಡಿಎ) ಹಾಗೂ ತುಟ್ಟಿ ಪರಿಹಾರವನ್ನು ಶೇ.4ರಷ್ಟು ಹೆಚ್ಚಿಸುವ ಪ್ರಸ್ತಾವನೆಗೆ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ. ಇದು 2022ರ ಜುಲೈ 1ರಿಂದಲೇ ಪೂರ್ವಾನ್ವಯವಾಗಲಿದೆ ಎಂದು ಹೇಳಿದ್ದಾರೆ.

### ಈಗ ದಸರಾ ಗೋಲ್ಡ್ ಕಾರ್ಡ್ ಲಭ್ಯ

- ಆನ್‌ಲೈನ್‌ನಲ್ಲಿ ಖರೀದಿಸುವ ಅವಕಾಶ
- ಒಬ್ಬರಿಗೆ ಎರಡು ಕಾರ್ಡ್ ಖರೀದಿ ಮಿತಿ

ಮೈಸೂರು,ಸೆ.28(ಆರ್‌ಕೆ)–ಮೈಸೂರು ಜಿಲ್ಲಾಡಳಿತವು ದಸರಾ 2022ರ ಗೋಲ್ಡ್ ಕಾರ್ಡ್ ಬಿಡುಗಡೆ ಮಾಡಿದೆ. ಆನ್‌ಲೈನ್ ಮೂಲಕ 4,999 ರೂ. ಬೆಲೆಯ ಗೋಲ್ಡ್ ಕಾರ್ಡ್ ಅನ್ನು www.mysoredasara.gov.in ವೆಬ್‌ಸೈಟ್‌ನಲ್ಲಿ ಖರೀದಿಸಬಹುದಾಗಿದ್ದು, ಒಬ್ಬರು 2 ಗೋಲ್ಡ್ ಕಾರ್ಡ್ ಮಾತ್ರ ಪಡೆಯಲು ಅವಕಾಶ ವಿದೆ. ಒಮ್ಮೆ ಆನ್‌ಲೈನ್‌ನಲ್ಲಿ ಹಣ ಪಾವತಿಸಿದ ನಂತರ ಪ್ರವಾಸಿಗರು ನಾಳೆ(ಸೆ.29) ಬೆಳಗ್ಗೆ 11ರಿಂದ ಸಂಜೆ 5.30 ಗಂಟೆವರೆಗೆ ಬುಕ್ ಮಾಡುವಾಗ ಸ್ವೀಕೃತಿಯಾಗುವ ಇ–ಮೇಲ್ ಪ್ರತಿ ಹಾಗೂ ಯಾವುದಾದರೊಂದು ಗುರುತಿನ ಪ್ರೂಫ್ ಹಾಜರುಪಡಿಸಿ ಮೈಸೂರಿನ ಮಯೂರ ಹೊಯ್ಸಳ ಹೋಟೆಲ್ ಆವರಣದಲ್ಲಿರುವ ಪ್ರವಾಸೋದ್ಯಮ ಇಲಾಖೆ ಕಚೇರಿಯಲ್ಲಿ ಗೋಲ್ಡ್ ಕಾರ್ಡ್‌ಗಳನ್ನು ಪಡೆದುಕೊಳ್ಳಬಹುದು. ಗೋಲ್ಡ್ ಕಾರ್ಡ್‌ನಲ್ಲಿ ಜಂಬೂಸವಾರಿ ಮೆರವಣಿಗೆ, ಬನ್ನಿಮಂಟಪದ ಪಂಜಿನ ಕವಾಯತು ವೀಕ್ಷಿಸಬಹುದಾಗಿದ್ದು, ಮೈಸೂರು ಅರಮನೆ, ಮೃಗಾಲಯ, ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ದಸರಾ ಫಲಪುಷ್ಪ ಪ್ರದರ್ಶನ, ವಸ್ತುಪ್ರದರ್ಶನ, ಸೆಂಟ್ ಫಿಲೋಮಿನಾ ಚರ್ಚ್, ರೈಲ್ವೇ ಮ್ಯೂಸಿಯಂ ಹಾಗೂ ಕೃಷ್ಣರಾಜಸಾಗರ (ಕೆಆರ್‌ಎಸ್) ಬೃಂದಾವನಗಳಿಗೆ ಒಮ್ಮೆ ಮಾತ್ರ ಪ್ರವೇಶಾವಕಾಶ ನೀಡಲಾಗುವುದು.

### ಡಿ.ಕೆ.ಶಿವಕುಮಾರ್ ಆಸ್ತಿ ಪರಿಶೀಲಿಸಿದ ಸಿಬಿಐ



ರಾಮನಗರ,ಸೆ.28–ಎಂಟು ಸಿಬಿಐ ಅಧಿಕಾರಿಗಳ ತಂಡ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ ಅವರ ಕನಕಪುರ, ದೊಡ್ಡ ಆಲಹಳ್ಳಿ, ಸಂತೆ ಕೋಡಿಹಳ್ಳಿ ನಿವಾಸಗಳಿಗೆ ಭೇಟಿ ನೀಡಿದೆ. ಅಧಿಕಾರಿಗಳು ಡಿಕೆಶಿ ಅವರ ಆಸ್ತಿ ಬಗ್ಗೆ ಮಾಹಿತಿ ಪಡೆದಿದ್ದಾರೆ. ಸುಮಾರು 1 ಗಂಟೆ ಕಾಲ ಡಿಕೆ ಶಿವಕುಮಾರ್ ನಿವಾಸದಲ್ಲಿದ್ದು, ನಂತರ ಮನೆ, ಜಮೀನು ಮತ್ತಿತರ ಸ್ಥಳಗಳಿಗೆ ತೆರಳಿ ಪರಿಶೀಲನೆ ಮಾಡಿದ್ದಾರೆ. ಈ ವೇಳೆ ಕನಕಪುರ ತಹಶೀಲ್ದಾರ್ ವಿಶ್ವನಾಥ್, ಪೊಲೀಸರು ಸ್ಥಳದಲ್ಲಿದ್ದರು.

> **“ನನ್ನ ಮೇಲೆ ಜಾಸ್ತಿ ಪ್ರೀತಿ ಇರೋದಕ್ಕೆ ಪದೇ ಪದೆ ಬರ್ತಿದ್ದಾರೆ, ಏನು ಮಾಡೋದು. ಕನಕಪುರ ಮನೆ, ತೋಟದ ಮನೆ ಎಲ್ಲಾ ಆಸ್ತಿ ಪರಿಶೀಲನೆ ನಡೆಸಿದ್ದಾರೆ. ಒಂದು ರೀತಿ ಹಿಂಸೆ ಆಗುತ್ತಿದೆ.**
> **–ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ**

**ಪ್ರಕರಣದ ಹಿನ್ನೆಲೆ:** ಎರಡು ವರ್ಷಗಳ ಹಿಂದೆ, ಅಂದರೆ ಅಕ್ಟೋಬರ್ 2020ರಲ್ಲಿ ಡಿಕೆಶಿ ವಿರುದ್ಧ ಸಿಬಿಐ ಆದಾಯ ಮೀರಿದ ಆಸ್ತಿಗಳಿಕೆ ಪ್ರಕರಣ ದಾಖಲಿಸಿತ್ತು. ಡಿ.ಕೆ.ಶಿವಕುಮಾರ್ ಮತ್ತು ಅವರ ಕುಟುಂಬದ ಸದಸ್ಯರು ▶ 5ನೇ ಪುಟಕ್ಕೆ

### ಸಿಇಟಿ ಪರಿಷ್ಕೃತ ರ್‍ಯಾಂಕ್ ಪಟ್ಟಿ ಅ.1ರಂದು ಪ್ರಕಟ

**ಬೆಂಗಳೂರು:** ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)–2022 ಪರಿಷ್ಕೃತ ರ್‍ಯಾಂಕ್ ಪಟ್ಟಿಯ ಫಲಿತಾಂಶವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅ.1ಕ್ಕೆ ಮುಂದೂಡಿದೆ. ಸೆ.29ರಂದು ಪಟ್ಟಿ ಪ್ರಕಟವಾಗಬೇಕಿತ್ತಾದರೂ ತಾಂತ್ರಿಕ ಕೆಲಸಗಳು ನಡೆಯಬೇಕಿರುವ ಹಿನ್ನೆಲೆಯಲ್ಲಿ ಕಾರಣಾಂತರಗಳಿಂದ ಮುಂದೂಡಲಾಗಿದೆ ಎಂದು ಕೆಇಎ ಮೂಲಗಳು ತಿಳಿಸಿವೆ. ಪರಿಷ್ಕೃತ ರ್‍ಯಾಂಕ್ ಪಟ್ಟಿಗಾಗಿ ಸುಮಾರು 2 ಲಕ್ಷ ವಿದ್ಯಾರ್ಥಿಗಳು ಕಾಯುತ್ತಿದ್ದಾರೆ. ಈ ಮೊದಲು ಪರಿಷ್ಕೃತ ರ್‍ಯಾಂಕಿಂಗ್ ಪಟ್ಟಿಯನ್ನು ಸೆ.29ರಂದು ಬಿಡುಗಡೆ ಮಾಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥನಾರಾಯಣ ತಿಳಿಸಿದ್ದರು. ಈ ಪರಿಷ್ಕೃತ ರ್‍ಯಾಂಕ್ ಪಟ್ಟಿ ಎಂಜಿನಿಯರಿಂಗ್ ಕೋರ್ಸ್‌ಗೆ ಮಾತ್ರ ಅನ್ವಯವಾಗಲಿದ್ದು, ಉಳಿದ ಕೋರ್ಸ್‌ಗಳಾದ ಬಿ.ಎಸ್ಸಿ ಕೃಷಿ, ಪಶು ಸಂಗೋಪನೆ, ಫಾರ್ಮ, ಯೋಗ ಕೋರ್ಸ್‌ಗಳಿಗೆ ಅನ್ವಯಿಸಲ್ಲ.

# ದಸರಾ ಅದ್ದೂರಿ ಮನರಂಜನೆ
# ಯುವ ದಸರಾ ಅಪ್ಪುಗೆ ಅರ್ಪಣೆ

- ಮೊದಲ ದಿನದ ಕಾರ್ಯಕ್ರಮದಲ್ಲಿ ಅಪ್ಪು ಅಭಿನಯದ ಹಾಡುಗಳ ರಸಗಾನ
- ಮೆಗಾ ಇವೆಂಟ್ 'ಯುವ ದಸರಾ'ಗೆ ಅಶ್ವಿನಿ ಪುನೀತ್ ರಾಜ್‌ಕುಮಾರ್ ಚಾಲನೆ



ಮೈಸೂರು, ಸೆ.28(ಎಂಕೆ)– ವಿಶ್ವ ಪ್ರಸಿದ್ಧ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅತ್ಯಂತ ಅದ್ದೂರಿ ಮನರಂಜನಾ ಕಾರ್ಯಕ್ರಮವೆಂದೇ ಪರಿಗಣಿತ 'ಯುವ ದಸರಾ–2022' ಪವರ್‌ಸ್ಟಾರ್ 'ಡಾ.ಪುನೀತ್ ರಾಜ್‌ಕುಮಾರ್' ಅವರ ನೆನಪಿನೊಂದಿಗೆ ಬುಧವಾರ ವೈಭವದ ಚಾಲನೆ ಪಡೆದುಕೊಂಡಿತು.

ಜನಸಾಗರವೇ ತುಂಬಿದ್ದ ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಬೆಳಕಿನ ಚಿತ್ತಾರದ ನಡುವೆ, ಸಿಡಿಲಬ್ಬರದ ಧ್ವನಿವರ್ಧಕಗಳ ಆರ್ಭಟ ಹಾಗೂ ವರ್ಣಮಯ ಬೃಹತ್ ವೇದಿಕೆಯಲ್ಲಿ ಡಾ.ಪುನೀತ್ ರಾಜ್‌ಕುಮಾರ್ ಅವರ ಪತ್ನಿ ಶ್ರೀಮತಿ ಅಶ್ವಿನಿ ಪುನೀತ್ ರಾಜ್‌ಕುಮಾರ್, ಖ್ಯಾತ ನಟ ರಾಘವೇಂದ್ರ ರಾಜ್‌ಕುಮಾರ್, ಯುವ ನಟರಾದ ವಿನಯ್ ರಾಜ್‌ಕುಮಾರ್, ಧೀರನ್ ರಾಮ್‌ಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಮೇಯರ್ ಶಿವಕುಮಾರ್, ಶಾಸಕ ಎಲ್.ನಾಗೇಂದ್ರ, ಸಂಸದ ಪ್ರತಾಪ್‌ಸಿಂಹ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸೇರಿದಂತೆ ಹಲವಾರು ಗಣ್ಯರು, ಸಂಗೀತ ದಿಗ್ಗಜರು ದೀಪ ಬೆಳಗಿಸುವ ಮೂಲಕ 'ಯುವ ದಸರಾ'ಗೆ ಚಾಲನೆ ನೀಡಿದರು. ಬಳಿಕ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಭಾವಪೂರ್ಣವಾಗಿ ಸ್ಮರಿಸಲಾಯಿತು. ▶ 6ನೇ ಪುಟಕ್ಕೆ

### ಕಣ್ಣೀರಿಟ್ಟ ಅಶ್ವಿನಿ



'ಯುವ ದಸರಾ' ಉದ್ಘಾಟನೆ ಬಳಿಕ ಡಾ.ಪುನೀತ್ ರಾಜ್‌ಕುಮಾರ್ ಕಡೆಯ ಚಿತ್ರ 'ಗಂಧದ ಗುಡಿ' ಸಿನಿಮಾ ಟೀಸರ್ ಪ್ರದರ್ಶಿಸಲಾಯಿತು. ಈ ವೇಳೆ ವೇದಿಕೆ ಮುಂಭಾಗದಲ್ಲಿ ಕುಳಿತಿದ್ದ ಅಶ್ವಿನಿ ಪುನೀತ್ ರಾಜ್‌ಕುಮಾರ್, ಪರದೆಯಲ್ಲಿ ಪುನೀತ್ ರಾಜ್‌ಕುಮಾರ್ ಅವರ ದೃಶ್ಯ ಬಿಂಬಿತವಾಗುತ್ತಿದ್ದಂತೆ ಭಾವುಕರಾಗಿ ಕಣ್ಣೀರು ಹಾಕಿದರು. ನಟ ರಾಘವೇಂದ್ರ ರಾಜ್‌ಕುಮಾರ್, ವಿನಯ್ ರಾಜ್‌ಕುಮಾರ್, ಧೀರನ್ ರಾಮ್‌ಕುಮಾರ್ ಕೂಡ ಭಾವುಕರಾದರು. ಈ ವೇಳೆ ಇಡೀ ಜನ ಸಮೂಹವೇ ಸ್ತಬ್ಧವಾಗಿತ್ತು ಟೀಸರ್ ಮುಗಿದ ಕೂಡಲೇ 'ಯುವ ದಸರಾ' ವೇದಿಕೆಯಲ್ಲಿ 'ಅಪ್ಪು ಅಪ್ಪು' ಘೋಷಣೆ ಮುಗಿಲು ಮುಟ್ಟಿತ್ತು.



Promotional Feature



ಕಳೆದ ಶನಿವಾರ ಕೊಡಗಿನ ಗೋಣಿಕೊಪ್ಪದಲ್ಲಿ ನಡೆದ ರೋಚಕ ಕಿಡ್ಸ್ ಬೈಕ್ ರೇಸ್‌ನಲ್ಲಿ ಮೈಸೂರಿನ ಹೆಸರಾಂತ ಮೆಕ್ಯಾನಿಕ್, ಫಸ್ಟ್ ಕಾರ್ ಕೇರ್‌ನ ಇಮ್ರಾನ್ ಅವರ ಮಗ ಅಮ್ರಾನ್ (ಮಧ್ಯದಲ್ಲಿರುವವನು) ಪ್ರಥಮ ಸ್ಥಾನ ಗಳಿಸಿದ್ದಾನೆ. ಈಗಾಗಲೇ ಅನೇಕ ರೇಸ್‌ನಲ್ಲಿ ಅಮ್ರಾನ್ ಬಹುಮಾನ ಗೆದ್ದಿದ್ದಾನೆ.

## ನಾಳೆ ಅರಸನಕೆರೆಯಲ್ಲಿ ವಿಶ್ವಕರ್ಮ ಜಯಂತಿ



ಮೈಸೂರು,ಸೆ.28(ಪಿಎಂ)– ತಾಲೂಕಿನ ಜಯಪುರ ಹೋಬಳಿಯ ಅರಸನಕೆರೆ ಗ್ರಾಮದ ಶ್ರೀ ವಿಶ್ವಕರ್ಮ ಲಕ್ಷ್ಮೀದೇವಿ ಕಾಳಿಕಾಂಭ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಗ್ರಾಮದಲ್ಲಿ ಸೆಪ್ಟೆಂಬರ್ 30ರಂದು ಐದನೇ ವರ್ಷದ ಗ್ರಾಮ ಮಟ್ಟದ ಶ್ರೀ ವಿಶ್ವಕರ್ಮ ಜಯಂತ್ಯೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎ.ಎನ್.ಸಿದ್ದಪ್ಪಾಜಿ ವಿಶ್ವಕರ್ಮ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 2ಕ್ಕೆ ಗ್ರಾಮದಲ್ಲಿ ಸಿದ್ದಪ್ಪಾಜಿ ಕಂಡಾಯ ಉತ್ಸವ ನಡೆಯಲಿದೆ. ಬಳಿಕ ನಡೆಯುವ ಸಭಾ ಕಾರ್ಯಕ್ರಮದಲ್ಲಿ ಜಯಂತ್ಯೋತ್ಸವಕ್ಕೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರೂ ಆದ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ ಚಾಲನೆ ನೀಡಲಿದ್ದು, ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಅತಿಥಿಗಳಾಗಿ ನಗರಪಾಲಿಕೆ ಸದಸ್ಯರಾದ ರಮಣಿ (ರಮೇಶ್), ಛಾಯಾದೇವಿ, ಜಿಪಂ ಮಾಜಿ ಸದಸ್ಯೆ ರೂಪ ಲೋಕೇಶ್, ಜಯಪುರದ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಸಹಾಯಕ ವ್ಯವಸ್ಥಾಪಕ ಡಿ.ಆರ್.ರಕ್ಷಿತ್, ಮಾರ್ಬಳ್ಳಿ ಗ್ರಾಪಂ ಅಧ್ಯಕ್ಷ ದೇವರಾಜು ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ಸಮುದಾಯದ ಇಬ್ಬರು ಹಿರಿಯರನ್ನು ಸನ್ಮಾನಿಸಲಾಗುವುದು ಎಂದರು. ವಿಶ್ವಕರ್ಮ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆಗೊಳಿಸಲು ಎಂಎಲ್‌ಸಿ ಕೆ.ಪಿ.ನಂಜುಂಡಿ ಹೋರಾಟದ ರೂಪರೇಷೆ ಸಿದ್ಧಪಡಿಸುತ್ತಿದ್ದು, ಸಮುದಾಯ ಅವರಿಗೆ ಬೆಂಬಲ ನೀಡಬೇಕು ಎಂದು ಕೋರಿದರಲ್ಲದೆ, ರಾಜ್ಯಾದ್ಯಂತ ಬೇಡಿಕೆಗೆ ಅನುಗುಣವಾಗಿ ವಿಶ್ವಕರ್ಮ ಸಮುದಾಯ ಭವನಗಳನ್ನು ನಿರ್ಮಿಸಲು ಸರ್ಕಾರ ಕ್ರಮ ವಹಿಸಬೇಕೆಂದು ಮನವಿ ಮಾಡಿದರು. ಸಂಘದ ಉಪಾಧ್ಯಕ್ಷರಾದ ಸಿದ್ದಪ್ಪಾಜಿ, ರಾಜಾಚಾರಿ, ಸಹ ಕಾರ್ಯದರ್ಶಿ ಕುಮಾರ್, ಸಂಚಾಲಕ ಎಸ್.ರವಿ ಗೋಷ್ಠಿಯಲ್ಲಿದ್ದರು.

## ದಸರಾ ಕವಿಗೋಷ್ಠಿಗೆ ಬೆಮೆಲ್ ರಮೇಶ್ ಶೆಟ್ಟಿ ಆಯ್ಕೆ



ಮೈಸೂರು,ಸೆ.28–ಮೈಸೂರು ದಸರಾ ಕವಿಗೋಷ್ಠಿಗೆ ಯುವ ಕವಿ, ಗ್ರಾಮೀಣ ಪ್ರತಿಭೆ, ಬಿಇಎಂಎಲ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ರಮೇಶ್ ಶೆಟ್ಟಿ ಆಯ್ಕೆಯಾಗಿದ್ದಾರೆ. ಅ.1ರ ಶನಿವಾರದಂದು ಬೆಳಗ್ಗೆ 10.30ಕ್ಕೆ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಕವಿಗೋಷ್ಠಿ ನಡೆಯಲಿದೆ. ರಮೇಶ್ ಶೆಟ್ಟಿ, ಪ್ರಸ್ತುತ ಬಿಇಎಂಎಲ್ ಕನ್ನಡ ಸಂಘದ ಖಜಾಂಚಿ, ಹಲವಾರು ಸಂಘ ಸಂಸ್ಥೆಗಳಲ್ಲಿ ಅಧ್ಯಕ್ಷರಾಗಿ, ಉಸ್ತುವಾರಿ ಅಧ್ಯಕ್ಷರಾಗಿ, ನಿರ್ದೇಶಕರಾಗಿ ಗುರುತಿಸಿಕೊಂಡಿದ್ದಾರೆ.

## ವಸತಿನಿಲಯ ಹೆಚ್ಚುವರಿ ಕಟ್ಟಡಕ್ಕೆ ಇಂದು ಗುದ್ದಲಿಪೂಜೆ

ಮೈಸೂರು, ಸೆ.28– ನಾಳೆ (ಸೆ.29) ಬೆಳಗ್ಗೆ 10 ಗಂಟೆಗೆ ಮೈಸೂರಿನ ವಿಜಯನಗರ 3ನೇ ಹಂತ, ಸಿ.ಎ.ಸೈಟ್ ನಂ.17ರಲ್ಲಿ ಸಿದ್ದರಾಮಯ್ಯನವರ ಬಾಲಕಿಯರ ವಸತಿ ನಿಲಯಕ್ಕೆ ಹೆಚ್ಚುವರಿ ಕಟ್ಟಡ ಹಾಗೂ ಐ.ಎ.ಎಸ್, ಕೆ.ಎ.ಎಸ್. ಕೋಚಿಂಗ್ ಸೆಂಟರ್ ನಿರ್ಮಾಣಕ್ಕೆ ವಿಪಕ್ಷ ನಾಯಕ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸುವರು. ಶ್ರೀ ಶಿವಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

# ಭಾರತ ಐಕ್ಯತಾ ಯಾತ್ರೆಗೆ ನಾಗರಿಕ ಸಮಾಜ ಮೈಸೂರು ಸಂಘಟನೆ ಬೆಂಬಲ

### ಅ.3ರಂದು ಮೈಸೂರಲ್ಲಿ ನಡೆಯುವ ಯಾತ್ರೆಯಲ್ಲಿ ಭಾಗವಹಿಸಲು ನಿರ್ಧಾರ



ಮೈಸೂರು,ಸೆ.28(ಪಿಎಂ)– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ ಐಕ್ಯತಾ ಯಾತ್ರೆಗೆ (ಭಾರತ್ ಜೋಡೋ) ಬೆಂಬಲ ಸೂಚಿಸಿರುವ ನಾಗರಿಕ ಸಮಾಜ ಮೈಸೂರು ಸಂಘಟನೆ, ಅ.3ರಂದು ಮೈಸೂರಿನಲ್ಲಿ ನಡೆಯುವ ಐಕ್ಯತಾ ಯಾತ್ರೆಯಲ್ಲಿ ಪಾಲ್ಗೊಳ್ಳಲು ನಿರ್ಧರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಈ ವಿಷಯ ತಿಳಿಸಿದ ಸಂಘಟನೆ ಮುಖಂಡ ಹಾಗೂ ಸಮಾಜವಾದಿ ಪ.ಮಲ್ಲೇಶ್, ಭಾರತವನ್ನು ಒಗ್ಗೂಡಿಸುವಲ್ಲಿ ಭಾರತ್ ಜೋಡೋ ಮಹತ್ವದ ಹೆಜ್ಜೆಯಾಗಿ ಕಾಣಿಸುತ್ತಿರುವ ಹಿನ್ನೆಲೆಯಲ್ಲಿ ನಾಗರಿಕ ಸಮಾಜ ಎಂಬ ಹೆಸರಿನಲ್ಲಿ ಸಂಘಟನೆಯಾಗಿ ಬೆಂಬಲ ನೀಡಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

ಧರ್ಮದ ಹೆಸರಿನಲ್ಲಿ ರಾಜಕಾರಣ ಮಾಡಲಾಗುತ್ತಿದ್ದು, ಜಾತಿ–ಜಾತಿಗಳ ನಡುವೆ ದ್ವೇಷ ಹುಟ್ಟಿಸಲಾಗುತ್ತಿದೆ. ಸಾಮಾನ್ಯ ಜನತೆಯಲ್ಲಿ ಆರ್ಥಿಕ ಸಬಲೀಕರಣ ಇಲ್ಲವಾಗುತ್ತಿತ್ತು. ದೇಶದ ಸಂಪತ್ತು ಕೆಲವರಲ್ಲಿ ಮಾತ್ರವೇ ಕ್ರೋಢೀಕೃತವಾಗುತ್ತಿದೆ. ಇಂತಹ ಸನ್ನಿವೇಶದಲ್ಲಿ ಈ ಯಾತ್ರೆ ಬದಲಾವಣೆಯ ಸೂಚನೆಯಾಗಿ ಕಾಣಿಸುತ್ತಿದೆ. ನಮಗೆ ಯಾವುದೇ ರಾಜಕೀಯ ಪಕ್ಷ ಮುಖ್ಯವಲ್ಲ. ಒಡೆದು ಹೋಗುತ್ತಿರುವ ಭಾರತವನ್ನು ಒಂದೂಗೂಡಿಸುವ ನಿಟ್ಟಿನಲ್ಲಿ ಯಾತ್ರೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಅವರೊಂದಿಗೆ ಹೆಜ್ಜೆ ಹಾಕಲು ಹೊರಟಿದ್ದೇವೆ ಎಂದರು.

ಹಿರಿಯ ಪತ್ರಕರ್ತ ಜಿ.ಪಿ.ಬಸವರಾಜು ಮಾತನಾಡಿ, ದೇಶದಲ್ಲಿ ಜಾತಿ–ಧರ್ಮದ ಆಧಾರದಲ್ಲಿ ಸಾಮರಸ್ಯಕ್ಕೆ ಧಕ್ಕೆ ಉಂಟು ಮಾಡಿರುವ ಸನ್ನಿವೇಶದಲ್ಲಿ ಯಾತ್ರೆಗೆ ಬೆಂಬಲ ಸೂಚಿಸುವ ಅಗತ್ಯ ಖಂಡಿತವಾಗಿಯೂ ಇದೆ. ಬೆಂಬಲ ನೀಡುವ ಸಂಬಂಧ ಪೂರ್ವಭಾವಿ ಸಭೆ ನಡೆಸಲಾಯಿತು.

ಮೈಸೂರಿನ ಕಲಾವಿದರು, ಬರಹಗಾರರು, ಚಿಂತಕರು, ಸಾಮಾಜಿಕ ಕಾರ್ಯಕರ್ತರು, ಪ್ರಗತಿಪರ ಹೋರಾಟಗಾರರು, ವಿದ್ಯಾರ್ಥಿಗಳು, ಯುವ ಜನರು ಹಾಗೂ ಮಹಿಳೆಯರು ಸಂಪೂರ್ಣ ಬೆಂಬಲ ಸೂಚಿಸಲು ಸಭೆಯಲ್ಲಿ ಸಹಮತ ವ್ಯಕ್ತಪಡಿಸಿದ್ದಾರೆ ಎಂದರು.

ಯಾತ್ರೆಗೆ ಬೆಂಬಲ ನೀಡಿದ್ದೇವೆ ಎಂಬ ಮಾತ್ರಕ್ಕೆ ಕಾಂಗ್ರೆಸ್ ಪಕ್ಷದ ತತ್ವ–ಸಿದ್ಧಾಂತ ಒಪ್ಪಿದ್ದೇವೆ ಎಂದಲ್ಲ. ಭಾರತ ಒಗ್ಗೂಡಿಸಲು ಇದು ಅಗತ್ಯ ಎಂಬ ನಿಟ್ಟಿನಲ್ಲಿ ಬೆಂಬಲ ನೀಡಲಾಗಿದೆ. ಬಹುಮುಖಿ ಭಾರತದ ಜೋಡಣೆಗೆ ಮಾತ್ರ ನಮ್ಮ ಬೆಂಬಲ ಸೀಮಿತವಾಗಲಿದೆ ಎಂದರು. ಸಂಘಟನೆ ಮುಖಂಡರಾದ ಉಗ್ರನರಸಿಂಹೇಗೌಡ, ಅಭಿರುಚಿ ಗಣೇಶ್, ರಾಜ್ಯ ಸಂಶೋಧಕರ ಸಂಘದ ಅಧ್ಯಕ್ಷ ಮರಿದೇವಯ್ಯ, ಮೈಸೂರು ವಿವಿ ಸಂಶೋಧಕರ ಸಂಘದ ಅಧ್ಯಕ್ಷ ನಟರಾಜ್ ಶಿವಣ್ಣ, ಪದಾಧಿಕಾರಿ ಎಂ.ಎಸ್.ಪ್ರದೀಪ್‌ಕುಮಾರ್ ಗೋಷ್ಠಿಯಲ್ಲಿದ್ದರು.

## ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಸೆ.28–2022ನೇ ಸಾಲಿನಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.90 ಮತ್ತು ಅದಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿರುವ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ–1, 2ಎ, 3ಎ, ಹಾಗೂ 3ಬಿ ಗಳಿಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಂದ ಡಿ.ದೇವರಾಜ ಅರಸು ಪ್ರತಿಭಾ ಪುರಸ್ಕಾರಕ್ಕಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಆನ್–ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಮಾಹಿತಿಗಾಗಿ https://bcwd:kar nataka.gov.in ಅಥವಾ ಸಹಾಯವಾಣಿ: 8050770004 (ಸಮಯ ಬೆಳಿಗ್ಗೆ 10.00 ರಿಂದ ಸಂಜೆ 5.30ರವರೆಗೆ ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ) ಅನ್ನು ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಿಂಧುಗೆ ಪಿಹೆಚ್.ಡಿ



ಮೈಸೂರು,ಸೆ.28–ಡಾ.ಜಮುನಾ ಪ್ರಕಾಶ್ ಅವರ ಮಾರ್ಗದರ್ಶನದಲ್ಲಿ ಸಿಂಧು ಎ. ದಿವಾಕರ್ ಆಹಾರ ವಿಜ್ಞಾನ ಮತ್ತು ಪೋಷಣೆ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧ'ವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಮೈಸೂರಿನ ಚಾಮರಾಜ ಕ್ಷೇತ್ರ ವ್ಯಾಪ್ತಿಯ ಯಾದವಗಿರಿ ಗಿರಿದರ್ಶಿನಿ ಪಾರ್ಕ್ ಸುತ್ತ, ಮೇದರ್ ಬ್ಲಾಕ್ ಮತ್ತು ಯಾದವಗಿರಿಯ ವಿವಿಧ ರಸ್ತೆಗಳನ್ನು 2 ಕೋಟಿ ರೂ. ಅನುದಾನದಲ್ಲಿ ಅಭಿವೃದ್ಧಿಪಡಿಸುವ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಚಾಲನೆ ನೀಡಿದರು. ಈ ವೇಳೆ ಪಾಲಿಕೆ ಸದಸ್ಯರಾದ ರವೀಂದ್ರ, ಚಿಕ್ಕವೆಂಕಟು, ಮಾಜಿ ಸದಸ್ಯ ಗುರು ವಿನಾಯಕ, ನಗರ ಉಪಾಧ್ಯಕ್ಷ ಎಸ್.ಕೆ.ದಿನೇಶ್, ಆಶ್ರಯ ಸಮಿತಿ ಸದಸ್ಯ ಮಹೇಶ್, ಪ್ರಧಾನ ಕಾರ್ಯದರ್ಶಿ ಪುನೀತ್, ದಿನೇಶ್‌ಗೌಡ, ಕಿರಣ್ ಬೋಳಾರ್, ಷಣ್ಮುಗಮ್, ನಾಗೇಶ್, ಮುರುಗೇಶ್, ಹರೀಶ್, ರೂಪ, ಕವಿತಾ ಇನ್ನಿತರರಿದ್ದರು.

## ಭಗತ್‌ಸಿಂಗ್‌ರ 115ನೇ ಜಯಂತಿ ಆಚರಣೆ



ಮೈಸೂರು,ಸೆ.28–ಸಮಾನಮನಸ್ಕ ಬಳಗದ ವತಿಯಿಂದ ಅಪ್ರತಿಮ ದೇಶಭಕ್ತ ಭಗತ್‌ಸಿಂಗ್‌ರವರ 115ನೇ ಜಯಂತಿಯನ್ನು ಗಾಂಧಿ ವೃತ್ತದಲ್ಲಿ ಆಚರಿಸಲಾಯಿತು.

ವಿದ್ಯಾವಿಕಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಕವೀಶ್‌ಗೌಡ ಪುಷ್ಪನಮನ ಸಲ್ಲಿಸಿ ಮಾತನಾಡಿ, ಭಗತ್‌ಸಿಂಗ್ ಅವರ ಹೆಸರು ಅಜರಾಮರವಾಗಿದ್ದು, ಪ್ರಧಾನಿ ಮೋದಿ ಅವರು ಚಂಡೀಗಢ ವಿಮಾನ ನಿಲ್ದಾಣಕ್ಕೆ ಭಗತ್‌ಸಿಂಗ್‌ರ ಹೆಸರನ್ನು ನಾಮಕರಣ ಮಾಡಿ ಚಿರಸ್ಥಾಯಿಯಾಗಿಸಿದ್ದಾರೆ ಎಂದರು.

ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ ಮಾತನಾಡಿ, 23 ವರ್ಷದ ಕ್ರಾಂತಿಕಾರಿ ಯುವ ಶಕ್ತಿ ಭಗತ್‌ಸಿಂಗ್ ಅವರು 'ಇನ್‌ಕ್ವಿಲಾಬ್ ಜಿಂದಾಬಾದ್ ಘೋಷಣೆ ಮೂಲಕ ದೇಶಾದ್ಯಂತ ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹಚ್ಚಿದ ಅಪ್ರತಿಮ ದೇಶಭಕ್ತ. 1924ರಲ್ಲಿ ಅಸೆಂಬ್ಲಿ ನಡೆಯುತ್ತಿದ್ದಾಗ ಭಗತ್‌ಸಿಂಗ್ ಬಿ.ಕೆ ದತ್ ಅವರು ಬಾಂಬ್ ಎಸೆದು ಇನ್‌ಕ್ವಿಲಾಬ್ ಜಿಂದಾಬಾದ್ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಧಿಕ್ಕಾರ ಎಂದು ಕ್ರಾಂತಿಕಾರಿ ಘೋಷಣೆ ಮಾಡಿ ಭರತಖಂಡದಲ್ಲಿ ಯುವಕರನ್ನು ಬ್ರಿಟಿಷರ ವಿರುದ್ಧ ಹೋರಾಡಲು ಬಡಿದೆಬ್ಬಿಸಿದ ದೇಶಭಕ್ತ ಎಂದು ಹೇಳಿದರು.

ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ನಿರ್ದೇಶಕ ಎಸ್.ಅರವಿಂದ್, ಚಾಮರಾಜ ಬಿಜೆಪಿ ಅಧ್ಯಕ್ಷ ಸೋಮಶೇಖರ್ ರಾಜು, ಪಾಲಿಕೆ ಸದಸ್ಯ ಎಂ.ಚಿಕ್ಕವೆಂಕಟು, ಪಡುವಾರಹಳ್ಳಿ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಎಸ್.ಕೃಷ್ಣಕುಮಾರ್, ಬಿ.ಕುಮಾರ್, ಸಂತೋಷ್, ಯುವ ಮುಖಂಡರಾದ ಅಜಯ್ ಶಾಸ್ತ್ರಿ, ವಿಕ್ರಂ ಅಯ್ಯಂಗಾರ್, ಕೇಬಲ್ ಕಿಟ್ಟಿ, ಸುರೇಂದ್ರ, ಅನುಜ್, ಛಲಪತಿ, ರವಿ, ಎಸ್.ಎನ್.ಪ್ರಶಾಂತ್ ಇನ್ನಿತರರಿದ್ದರು.

# ಮೈಸೂರು ಹಾಗೂ ಸುತ್ತಮುತ್ತ ಇಂದು...

### ದಸರಾ ಕಾರ್ಯಕ್ರಮಗಳು



■ **ಪಾರಂಪರಿಕ ಸೈಕಲ್ ಸವಾರಿ :** ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸ್ಥಳ: ಮೈಸೂರು ಪುರಭವನ, ಬೆಳಗ್ಗೆ 7ಕ್ಕೆ.

■ **ಯೋಗಾಸನ ಸ್ಪರ್ಧೆ :** ಉದ್ಘಾಟನೆ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್, ಸ್ಥಳ: ಪಿ. ಕಾಳಿಂಗರಾವ್ ಸಭಾಂಗಣ, ವಸ್ತುಪ್ರದರ್ಶನ ಆವರಣ, ಬೆಳಗ್ಗೆ 9ಕ್ಕೆ

■ **ಮಕ್ಕಳ ದಸರಾ :** ಉದ್ಘಾಟನೆ : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವ ಬಿ.ಸಿ. ನಾಗೇಶ್, ಖ್ಯಾತ ಬಾಲನಟಿ, ಗಿಜ್ಜಿ ಗಿಲಿಗಿಲಿ ಹಾಗೂ ನನ್ನಮ್ಮ ಸೂಪರ್‌ಸ್ಟಾರ್ ಕು. ವಂಶಿಖಾ ಅಂಜನಿ ಕಶ್ಯಪ, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 11.30ಕ್ಕೆ.

■ **ವೈದ್ಯಕೀಯ ವಸ್ತುಪ್ರದರ್ಶನ:** ಸ್ಥಳ: ಮೈಸೂರು ಮೆಡಿಕಲ್ ಕಾಲೇಜು, ಬೆಳಗ್ಗೆ 11ಕ್ಕೆ

■ **ಯುವ ದಸರಾ:** ಸ್ಥಳ: ಮಹಾರಾಜ ಕಾಲೇಜು ಮೈದಾನ, ಸಂಜೆ 6ಕ್ಕೆ.

■ **ಫಲಪುಷ್ಪ ಪ್ರದರ್ಶನ:** ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಫಲಪುಷ್ಪ ಪ್ರದರ್ಶನ, ಸ್ಥಳ: ಅರಮನೆ ಆವರಣ, ಸಂಜೆ 5.30ಕ್ಕೆ

■ **ದೀಪಾಲಂಕಾರ:** ದಸರಾ ವಿದ್ಯುತ್ ದೀಪಾಲಂಕಾರ, ಸ್ಥಳ: ಹಸಿರು ಮಂಟಪ, ನ್ಯೂ ಸಯ್ಯಾಜಿರಾವ್ ರಸ್ತೆ, ಸಂಜೆ 6.30ಕ್ಕೆ.

■ **ಉರ್ದು ಕವಿಗೋಷ್ಠಿ :** ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಶಾಸಕ ತನ್ವೀರ್ ಸೇಠ್, ಮುಖ್ಯ ಅತಿಥಿಗಳು : ಶಾಸಕರಾದ ಎಸ್.ಎ.ರಾಮದಾಸ್, ಡಾ. ಯತೀಂದ್ರ ಸಿದ್ದರಾಮಯ್ಯ, ಸ್ಥಳ: ಕ್ಲಾಸಿಕ್ ಕನ್ವೆನ್ಷನ್ ಹಾಲ್, ಸಂಜೆ 7ಕ್ಕೆ.

■ **ಮೈಸೂರು ಬೊಂಬೆ ರಂಗಮಂದಿರ:** ಬೊಂಬೆ ಆಟ ಪ್ರದರ್ಶನ, ಸ್ಥಳ: ಮೈಸೂರು ಬೊಂಬೆ ರಂಗಮಂದಿರ, ಚಾಮುಂಡಿಬೆಟ್ಟ, ಸಂಜೆ 5ರಿಂದ.

### ಮಕ್ಕಳ ದಸರಾ- ಜಗನ್ಮೋಹನ ಅರಮನೆ

ಬೆಳಗ್ಗೆ 10ರಿಂದ: ಶ್ರೀ ಲಲಿತಾ ಸಂಗೀತ ಶಾಲೆ ವಿದ್ಯಾರ್ಥಿಗಳು ಮತ್ತು ಅತ್ರಿ ಕೌಶಿಕ್ ಮತ್ತು ತಂಡದವರಿಂದ ಸುಗಮ ಸಂಗೀತ

ಬೆಳಗ್ಗೆ 10.50ರಿಂದ: ಪೀಪಲ್ಸ್ ಪಾರ್ಕ್ ಸರ್ಕಾರಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಸಮೂಹ ಗೀತೆ, ಹೆಗ್ಗನಹಳ್ಳಿ ಕೆಪಿಎಸ್ ಸ್ಕೂಲ್‌ನ ಧವನಿ ಅವರಿಂದ ಕಾರ್ಯಕ್ರಮ,

ಬೆಳಗ್ಗೆ 11.30 ರಿಂದ: ಮಕ್ಕಳ ದಸರಾ, ಉದ್ಘಾಟನೆ : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವ ಬಿ.ಸಿ. ನಾಗೇಶ್, ಖ್ಯಾತ ಬಾಲನಟಿ, ಗಿಜ್ಜಿ ಗಿಲಿಗಿಲಿ ಹಾಗೂ ನನ್ನಮ್ಮ ಸೂಪರ್‌ಸ್ಟಾರ್ ಕು. ವಂಶಿಖಾ ಅಂಜನಿ ಕಶ್ಯಪ, ಅಧ್ಯಕ್ಷತೆ : ಶಾಸಕ ಎಲ್.ನಾಗೇಂದ್ರ

ಮ. 12 ರಿಂದ : ವಿವಿಧ ವೇಷಭೂಷಣ ಸ್ಪರ್ಧೆ

ಮ. 12 ರಿಂದ : ಪ್ರಬಂಧ ಮತ್ತು ಆಶುಭಾಷಣ ಸ್ಪರ್ಧೆ, ಸ್ಥಳ: ಮಹಾರಾಣಿ ಟಿಟಿಐ

ಮ. 2ರಿಂದ : ಶ್ರೀ ಸಾಯಿರಂಗ ಶಾಲೆ ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನ

ಮ. 2.15 ರಿಂದ : ಕುಮಾರನ್ಸ್ ಚಿಲ್ಡ್ರನ್ ಸ್ಕೂಲ್‌ನ ಎಸ್. ಸಿಂಚನ ಅವರಿಂದ ಗೀತೆಗಳು

ಮ. 2.30 ರಿಂದ : ಮೈಸೂರಿನ ಸಂಚಲನ ಸಂಸ್ಥೆಯವರಿಂದ ಬೆಟ್ಟದ ಇಲಿಗಳ ಕಥೆ ನಾಟಕ ಪ್ರದರ್ಶನ

ಮ. 3.30 ರಿಂದ : ಮಾವುತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಬಳ್ಳಾರಿ ನಾರಾಯಣ ಶಾಲೆ ಆರ್.ಜಾನವಿಯಿಂದ ಕುಚಿಪುಡಿ ನೃತ್ಯ

ಮ. 4.30 ರಿಂದ : ವೇದಿಕೆ ಕಾರ್ಯಕ್ರಮ, ಬಹುಮಾನ ವಿತರಣೆ

### ಮೈಸೂರು ಅರಮನೆ

ಸಂಜೆ 5.30 ರಿಂದ : ಕರ್ನಾಟಕ ಮತ್ತು ಇಂಗ್ಲಿಷ್ ಬ್ಯಾಂಡ್ ಅವರಿಂದ ಪೊಲೀಸ್ ಬ್ಯಾಂಡ್

ಸಂಜೆ 6 ರಿಂದ : ಧಾರವಾಡದ ಪಂಡಿತ್ ವೆಂಕಟೇಶ್‌ಕುಮಾರ್ ಅವರಿಂದ ವಚನ ಗಾಯನ

ಸಂಜೆ 7 ರಿಂದ : ಬೆಂಗಳೂರಿನ ಮಧುಲಿತ ಮಹೋಪಾತ್ರ ಮತ್ತು ತಂಡದವರಿಂದ ಒಡಿಸ್ಸಿ ನೃತ್ಯ

ರಾ. 8 ರಿಂದ : ಬೆಂಗಳೂರಿನ ಚಕ್ರ ಫೋನಿಕ್ಸ್ ತಂಡ, ಪಂಡಿತ್ ಪ್ರವೀಣ ಡಿ.ರಾವ್ ಅವರಿಂದ ವಿಶ್ವ ಸಂಗೀತ (ಕರ್ನಾಟಕ ವಾದ್ಯ ಸಂಗೀತಗಳ ಸಮ್ಮಿಲನ).

### ಜಗನ್ಮೋಹನ ಅರಮನೆ

ಸಂಜೆ 6 ರಿಂದ : ರಂಗ ಪುತ್ಥಳಿ ಯಶೋಧ ಪಪ್ಪಟ್ರಿ (ಯಶೋಧ ಶಶಿಧರ) ಬೆಂಗಳೂರು ಅವರಿಂದ ಪಪ್ಪಟ್ ಶೋ

ಸಂಜೆ 6.45 ರಿಂದ : ಬೆಳಗಾವಿಯ ಕುಮಾರ ಬಡಿಗೇರ (ವಿಶೇಷಚೇತನ ಕಲಾವಿದ) ಅವರಿಂದ ವಚನ ಗಾಯನ

ರಾ. 7.30 ರಿಂದ : ನೂಪುರ ಭರತನಾಟ್ಯ ಶಾಲೆಯ ಲಲಿತ ಶ್ರೀನಿವಾಸನ್ ಅವರಿಂದ ಭರತನಾಟ್ಯ

ರಾ. 8.30 ರಿಂದ : ಬೆಂಗಳೂರಿನ ಅಭಿಜಿತ್ ಶೆಣೈ ಅವರಿಂದ ಹಿಂದೂಸ್ಥಾನಿ ಸಂಗೀತ

### ಕಲಾಮಂದಿರ



### ಇಂದಿನ ಪಂಚಾಂಗ

**29.09.2022 ಗುರುವಾರ, ಮಳೆ ನಕ್ಷತ್ರ: ಹಸ್ತ 27.09.2022ರಿಂದ 10.10.2022 ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಆಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಚತುರ್ಥಿ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ**

ಸಂಜೆ 6 ರಿಂದ : ಮೈಸೂರಿನ ಹೆಚ್.ಎಸ್. ಲಕ್ಷ್ಮಣ್ ಅವರಿಂದ ನಾದಸ್ವರ ವಾದನ

ಸಂಜೆ 6.45 ರಿಂದ : ಮೈಸೂರಿನ ಚೈತ್ರಾ ಶ್ರೀರಾಮ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ

ರಾ. 7.30ರಿಂದ : ಹುಬ್ಬಳ್ಳಿಯ ನೃತ್ಯೋದಯ ಕಲಾ ಅಕಾಡೆಮಿಯವರಿಂದ ನೃತ್ಯರೂಪಕ

ರಾ. 8.30 ರಿಂದ : ಬೆಂಗಳೂರಿನ ಸಂಗೀತ ಸಂಭ್ರಮ ಅವರಿಂದ ಸಮೂಹ ಗಾಯನ

### ಗಾನಭಾರತಿ

ಸಂಜೆ 6 ರಿಂದ : ಬೆಂಗಳೂರಿನ ಆಶಿಕಾ ಅವರಿಂದ ಭರತನಾಟ್ಯ

ಸಂಜೆ 6.45 ರಿಂದ : ಕಲಬುರ್ಗಿಯ ಮೃತ್ಯುಂಜಯ ಹಿರೇಮಠ್‌ರಿಂದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ

ರಾ. 7.30 ರಿಂದ : ಡಾ.ಬಾಲಕೃಷ್ಣ ಅವರಿಂದ ವೀಣಾ ವಾದನ

ರಾ. 8.30 ರಿಂದ : ಬೆಂಗಳೂರಿನ ನಾಟ್ಯಕಲಾ ಮೈತ್ರಿ ಸ್ಕೂಲ್ ಆಫ್ ಡ್ಯಾನ್ಸ್‌ನ ವಿದುಷಿ ಟಿ.ಕೆ.ಮೈತ್ರಿ ಅವರಿಂದ ಭರತನಾಟ್ಯ

### ಶ್ರೀ ನಾದಬ್ರಹ್ಮ ಸಂಗೀತ ಸಭಾ

ಸಂಜೆ 6 ರಿಂದ : ಮಹದೇವ ನಾಯಕ ಮತ್ತು ತಂಡದಿಂದ ನೀಲಗಾರರ ಪದ

ಸಂಜೆ 6.45 ರಿಂದ : ಬೆಂಗಳೂರಿನ ಕೆ.ಜಿ. ಪದ್ಮನಾಭ ಅವರಿಂದ ಸುಗಮ ಸಂಗೀತ

ರಾ. 7.30 ರಿಂದ : ಮೈಸೂರಿನ ಸುನೀತಾ ಹಿರೇಮಠ್ ಅವರಿಂದ ವಚನ ಗಾಯನ

ರಾ. 8.30 ರಿಂದ : ಬೆಂಗಳೂರಿನ ನಾಟ್ಯೇಶ್ವರ ಡ್ಯಾನ್ಸ್ ಸ್ಕೂಲ್ ವಿದ್ಯಾರ್ಥಿಗಳಿಂದ ನೃತ್ಯರೂಪಕ

### ಚಿಕ್ಕಗಡಿಯಾರ

ಸಂಜೆ 5.30 ರಿಂದ : ಮಂಡ್ಯದ ಸಿದ್ದೇಗೌಡ ಕಲಾಭೈರವೇಶ್ವರ ಪೂಜಾ ಕುಣಿತ ತಂಡದಿಂದ ಪೂಜಾ ಕುಣಿತ, ಹಾವೇರಿ ಮದಲೇಪ್ಪ ವಿ. ಕೊಪ್ಪರಿ ಅವರಿಂದ ಡೊಳ್ಳು ಕುಣಿತ

ಸಂಜೆ 6 ರಿಂದ : ಸ್ಥಳೀಯ ಕಲಾವಿದರಿಂದ ಸೋಬಾನೆ ಪದ

ರಾತ್ರಿ 7 ರಿಂದ : ಮೈಸೂರಿನ ಕಲಾನಿಕೇತನ ಕಲಾಕೇಂದ್ರದ ಪುಟ್ಟಸ್ವಾಮಿ ಅವರಿಂದ ದೇಶಭಕ್ತಿ ಗೀತೆಗಳು

ರಾತ್ರಿ 8 ರಿಂದ : ಬೆಳಗಾವಿಯ ಕಿತ್ತೂರಿನ ಪಂಡಿತ್ ಡಾ. ಎಸ್. ಬಲ್ಲೇಶ್ ಭಜಂತ್ರಿ ಅವರಿಂದ ಶೆಹನಾಯ್ ವಾದನ

### ಪುರಭವನ

ಬೆಳಗ್ಗೆ 10.30 ರಿಂದ : ಧಾರವಾಡದ ಸಂಜೀವ್ ದುಮುಕಿನಾಲ ಅವರಿಂದ ಮಕ್ಕಳ ನಾಟಕ 'ಜಾನ್ಸಿ ಲಕ್ಷ್ಮೀ ಬಾಯಿ'

ಮಧ್ಯಾಹ್ನ 3 ರಿಂದ : ಬಳ್ಳಾರಿಯ ಹಂಡ್ಯಾಳು ಗ್ರಾಮದ ಶ್ರೀ ಮಹದೇವ ತಾತಾ ಕಲಾ ಸಂಘದವರಿಂದ ರಕ್ತರಾತ್ರಿ ಐತಿಹಾಸಿಕ ನಾಟಕ

ಸಂಜೆ 6 ರಿಂದ : ದಾವಣಗೆರೆಯ ಶ್ರೀ ಶೈಲ ಮಲ್ಲಿಕಾರ್ಜುನ ವಿವಿಧ ನಾಟಕ ಕಲಾವಿದರ ಸಂಘದ ಶ್ರೀ ಬಸವನಗೌಡ ಸುಜಿ ಅವರಿಂದ ಧರ್ಮ ದಾರಿ ತಪ್ಪಿತು ನಾಟಕ ಪ್ರದರ್ಶನ

### ಕಿರು ರಂಗಮಂದಿರ, ಕಲಾಮಂದಿರ

ಮ. 2 ರಿಂದ : ಜ್ಞಾನವೀಣೆ ಟ್ರಸ್ಟ್‌ನ ದೇವರಾಜು ಅವರಿಂದ ಜಾನಪದ ಗೀತೆಗಳು

ಮ. 3 ರಿಂದ : ಮೈಸೂರಿನ ಶಶಿ ಕ್ರಿಯೇಷನ್ಸ್ ಅವರಿಂದ ಉರಿಯ ಉಯ್ಯಾಲೆ ನಾಟಕ

ರಾ. 7 ರಿಂದ : ಬೆಂಗಳೂರಿನ ರಂಗ ಸೌರಭ ಕಲಾವಿದರಿಂದ ಕೂಡಲ ಸಂಗಮ ನಾಟಕ

### ಅರಮನೆ ಮಾಳ, ಆರ್.ಪಿ. ರಸ್ತೆ, ನಂಜನಗೂಡು

ಸಂಜೆ 5.30 ರಿಂದ : ಜೆಎಸ್‌ಎಸ್ ಬಾಲಕಿಯರ ಶಾಲೆಯ ವಿದ್ಯಾರ್ಥಿಗಳಿಂದ ಸಮೂಹ ನೃತ್ಯ, ಭಗವದ್ಗೀತೆ ಪಠಣ

ಸಂಜೆ 6 ರಿಂದ : ದೇಬೂರು ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿಗಳಿಂದ 'ಕರುನಾಡ ವೈಭವ' ನೃತ್ಯ ರೂಪಕ

ರಾತ್ರಿ 7 ರಿಂದ : ಮೈಸೂರಿನ ಹೆಚ್.ಎಂ.ಮಹೇಶ್ ಮತ್ತು ತಂಡದಿಂದ ಸುಗಮ ಸಂಗೀತ

ರಾತ್ರಿ 8 ರಿಂದ : ಹಾವೇರಿಯ ವೀರನಗೌಡ ಪಾಟೀಲ್ ಅವರಿಂದ ದೊಡ್ಡಾಟ

### ಕುಸ್ತಿ ಪಂದ್ಯಾವಳಿ, ಶ್ರೀ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣ, ಕರ್ನಾಟಕ ವಸ್ತುಪ್ರದರ್ಶನ ಮೈದಾನ

ಬೆಳಗ್ಗೆ 8 ರಿಂದ : ಪಾಯಿಂಟ್ ಕುಸ್ತಿಗಳು

ಬೆಳಗ್ಗೆ 10 ರಿಂದ : 7ನೇ ರಾಜ್ಯ ಮಟ್ಟದ ಮಹಿಳೆಯರು ಮತ್ತು ಪುರುಷರು ಮತ್ತು 4ನೇ ವಿಶೇಷಚೇತನರ ಕುಸ್ತಿ ಪಂದ್ಯಾವಳಿ ಉದ್ಘಾಟನೆ : ಒಲಂಪಿಕ್ ಪದಕ ವಿಜೇತ ಕುಸ್ತಿಪಟು ಸಾಕ್ಷಿ ಮಲ್ಲಿಕ್

### ಶರನ್ನವರಾತ್ರಿ ಕಾರ್ಯಕ್ರಮ



■ **ತ್ರಯೀನ್ಯಾಸ್:** 26ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಶ್ರೀ ಕೂಷ್ಮಾಂಡದೇವಿ, ಶ್ರೀ ವಿದ್ಯಾ ಶಬರಿದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30ಕ್ಕೆ ಶ್ರೀ ದಶಗಣಪತಿ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ :** ಶ್ರೀ ಶಾರದಾ ಶರನ್ನವರಾತ್ರೋತ್ಸವ, ಸಹಸ್ರ ಮೋದಕ ಗಣಪತಿ ಹೋಮ, ಸಂಜೆ ಲಕ್ಷಾಕುಂಕುಮಾರ್ಚನೆ, ವೈಷ್ಣವೀ ಗರುಡವಾಹಿನಿ ಅಲಂಕಾರ, ಸ್ಥಳ: ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ:** ನವರಾತ್ರಿ ವೈಭವ, ವೈಷ್ಣವಿ ಗರುಡ ವಾಹಿನಿ ಅಲಂಕಾರ, ಸ್ಥಳ: ದೇವಸ್ಥಾನದ ಆವರಣ, ಸಂಜೆ 6ರಿಂದ.

■ **ಶ್ರೀ ಶಾರದ ಪ್ರತಿಷ್ಠಾನ ಟ್ರಸ್ಟ್:** ಶರನ್ನವರಾತ್ರಿ ಸಂಗೀತೋತ್ಸವ, ವಿದ್ವಾನ್ ಮಾಧವ ಭಟ್ ಚೆನ್ನಿಗ ಅವರಿಂದ ಮುಖವೀಣಾ ವಾದನ (ಶಿಳ್ಳು ವಾದನ), ಸ್ಥಳ: ಶ್ರೀ ರಾಮ ಮಂದಿರ, ಸಂಜೆ 6 ಗಂಟೆಗೆ.

■ **ಶ್ರೀ ಕಾಲ ಭೈರವೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ಪಾರ್ವತಿ ಅಮ್ಮನವರಿಗೆ ನವರಾತ್ರಿ ಪ್ರಯುಕ್ತ ವಿಶೇಷ ಅಲಂಕಾರ ಪೂಜಾ ಮಹೋತ್ಸವ, ಅನ್ನಪೂರ್ಣೇಶ್ವರಿ ಅಲಂಕಾರ, ಸಂಜೆ 7 ಗಂಟೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದೇವಿ ನವರಾತ್ರಿ ಉತ್ಸವಗಳು, ಬೆಳಗ್ಗೆ 9ಕ್ಕೆ ಶ್ರೀದೇವಿ ಪಲ್ಲಕ್ಕಿ ಉತ್ಸವ, ಕುಮಾರಿ ಪೂಜೆ, ಶ್ರೀಚಕ್ರಪೂಜೆ, ನವಾವರಣ ಪೂಜೆ, ವಿದುಷಿ ದೆಬೂಪ್ರಿಯ ಮತ್ತು ವಿದುಷಿ ಸುಚಿಸ್ಮಿತ ಚಟರ್ಜಿ ಅವರಿಂದ ಹಿಂದೂಸ್ಥಾನಿ ಕೊಳಲು ದ್ವಂದ್ವ ವಾದನ, ಮ. 12ಕ್ಕೆ ಅನ್ನಾರ್ಚನೆ, ಮೀನಾಕ್ಷಿ ಪೂಜೆ, ಹೋಮ ಪೂರ್ಣಾಹುತಿ, ಮ. 3.30ಕ್ಕೆ ಮಹಾಮಂಗಳಾರತಿ, ಡೋಲೋತ್ಸವ, ಸುವಾಸಿನಿ ಪೂಜೆ, ಸಂಜೆ 6ಕ್ಕೆ ಶ್ರೀ ಸ್ವಾಮೀಜಿಯವರಿಂದ ದೇವಿ ಭಜನೆ ಮತ್ತು ಪ್ರವಚನ, ಸ್ಥಳ: ನಾದಮಂಟಪ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್:** ಶರನ್ನವರಾತ್ರಿ ಉತ್ಸವ, ಶ್ರೀ ಮಹಾಗಣಪತಿ ಹೋಮ, ರಾಜರಾಜೇಶ್ವರಿ ಅಲಂಕಾರ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ, ವಾಣಿವಿಲಾಸ ಮೊಹಲ್ಲಾ, ಬೆಳಗ್ಗೆ 8 ಗಂಟೆಗೆ.

■ **ಜೆ.ಪಿ.ನಗರ ಬ್ರಾಹ್ಮಣ ಸಂಘ:** ಶರನ್ನವರಾತ್ರಿ, ಸಾಂಸ್ಕೃತಿಕ ಕಾರ್ಯಕ್ರಮ, ಎಚ್.ಆರ್. ಹಿರಣ್ಮನ್ ಅವರಿಂದ ದೇವರನಾಮ, ಸ್ಥಳ: ಜೆ.ಪಿ.ನಗರ, ಎಫ್ ಬ್ಲಾಕ್, ಸಂಜೆ 6 ಗಂಟೆಯಿಂದ.

■ **ರಂಗಾಯಣ:** ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ನೆನಪಿನ ರಂಗೋತ್ಸವ–2022, ಮಂಗಳೂರಿನ ರಂಗಸಂಗಾತಿ ಸಾಂಸ್ಕೃತಿಕ ಪ್ರತಿಷ್ಠಾನದಿಂದ ದಟ್ಸ್ ಆಲ್ ಯುವರ್ ಆನರ್ ನಾಟಕ ಪ್ರದರ್ಶನ, ನಿರ್ದೇಶನ : ಶಶಿರಾಜ್ ಕಾವೂರ್, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

■ **ಗೊಂಬೆಗಳ ಪ್ರದರ್ಶನ:** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಶ್ರೀ ಮೈಸೂರು ಗುಜರಾತಿ ಸಮಾಜ :** ನವರಾತ್ರಿ ಉತ್ಸವದ ಅಂಗವಾಗಿ ಗುಜರಾತಿ ಗರ್ಬಾ ಹಾಗೂ ದಾಂಡಿಯಾ ಜಾನಪದ ನೃತ್ಯ ಸ್ಥಳ: ಸಮಾಜದ ಭವನ, ಯಾದವಗಿರಿ, ಸಂಜೆ 7.30 ರಿಂದ.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕ ಸೇವಾ ಟ್ರಸ್ಟ್ :** ಶರನ್ನವರಾತ್ರಿ ಪೂಜಾ ಮಹೋತ್ಸವ, ಶ್ರೀ ದಕ್ಷಿಣಾಮೂರ್ತಿ ಹೋಮ ಬೆಳಗ್ಗೆ, ಮ.1 ಗಂಟೆಗೆ ಪ್ರಸಾದ ವಿನಿಯೋಗ, ಸ್ಥಳ: ಶ್ರೀರಾಮ ಮಂದಿರ, ಜಯನಗರ,.

■ **ಶ್ರೀ ರಾಜರಾಜೇಶ್ವರಿ ದೇವಸ್ಥಾನ:** ಶರನ್ನವರಾತ್ರಿ ಮಹೋತ್ಸವ, ಶಾಖಾಂಬರಿ ತರಕಾರಿಗಳಿಂದ ಅಲಂಕಾರ, ಬೆಳಗ್ಗೆ, ರಾಮಕೃಷ್ಣನಗರದ ಶ್ರೀ ಶಾರದಾದೇವಿ ಮಹಿಳಾ ಮಂಡಳಿ ಅವರಿಂದ ಭಕ್ತಿಗೀತೆ ಮತ್ತು ಭಜನೆ, ಸಂಜೆ. ಸ್ಥಳ: ದೇವಸ್ಥಾನದ ಆವರಣ, ರಾಜರಾಜೇಶ್ವರಿನಗರ.

■ **ಶ್ರೀ ಗಣಪತಿ ಸೇವಾ ಮಂಡಳಿ :** ಶರನ್ನವರಾತ್ರೋತ್ಸವ, ವನದುರ್ಗಿ ಅಲಂಕಾರ, ಸ್ಥಳ: ಶ್ರೀ ಗಣಪತಿ ಸೇವಾ ಮಂಡಳಿ, ರಾಮಕೃಷ್ಣನಗರ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪಾರ್ಕಿನ್‌ಸನ್ಸ್ ಕಾಯಿಲೆಯ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಬೆಳಗ್ಗೆ 10ರಿಂದ.

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ, ಜೈವಿಕ ರಸಾಯನಶಾಸ್ತ್ರ ವಿಭಾಗ :** ಎನ್‌ಎಂಆರ್ ಸ್ಪೆಕ್ಟ್ರಾ ಡೇಟಾ ವ್ಯಾಖ್ಯಾನ ಕುರಿತು ರಾಷ್ಟ್ರೀಯ ಮಟ್ಟದ ಮೂರು ದಿನಗಳ ಕಾರ್ಯಾಗಾರ, ಉದ್ಘಾಟನೆ: ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಕುಲಪತಿ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ ಕೆ. ಭೈರಪ್ಪ, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಪ್ರೊ ಸಾಯಿನಾಥ್ ಮಲ್ಲಿಗೆಮಾಡು, ಸಂಪನ್ಮೂಲ ವ್ಯಕ್ತಿಗಳು : ಬೆಂಗಳೂರು ಐಐಎಸ್‌ಸಿಯ ವಿಶ್ರಾಂತ ಪ್ರಾಧ್ಯಾಪಕ ಡಾ. ಸೂರ್ಯಪ್ರಕಾಶ್, ಪ್ರೊ. ಕೆ.ವಿ. ರಾಮನಾಥನ್, ಡಾ. ಸಚಿನ್ ಚೌದರಿ, ಡಾ. ಬಿ.ಕೆ. ಬೆಟ್ಟಯ್ಯ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ

■ **ಪ್ರೀತಿ ಕ್ಯಾನ್ಸರ್ ಸೆಂಟರ್:** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಶ್ರೀರಂಗ ಆಯುರ್ವೇದ ಚಿಕಿತ್ಸಾ ಮಂದಿರ :** ಫಿಸ್ತುಲಾ ಮತ್ತು ಪೈಲ್ಸ್ ತಪಾಸಣಾ ಶಿಬಿರ, ಸ್ಥಳ: ಮಂದಿರದ ಆವರಣ, ದಟ್ಟಗಳ್ಳಿ 3ನೇ ಹಂತ, ಬೆಳಗ್ಗೆ 10 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ, ಅಂಗಳ ಸಾಹಿತ್ಯ ಬಳಗ :** ಜಾಗತಿಕ ತಾಪಮಾನ ಮತ್ತು ಕೃಷಿ ಜಾಗೃತಿ ಸಮಾವೇಶ, ಉಪಸ್ಥಿತರು : ಕೃಷಿ ತಜ್ಞ ಟಿ.ಜಿ.ಎಸ್. ಅವಿನಾಶ್, ಪ್ರಾಧ್ಯಾಪಕ ರಾಮು, ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11 ರಿಂದ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು:** ವಿಶ್ವ ಫಾರ್ಮಾಸಿಸ್ಟ್ ದಿನಾಚರಣೆ, ಉದ್ಘಾಟನೆ: ಕಾರ್ಯದರ್ಶಿ ಎನ್.ಚಂದ್ರಶೇಖರ್, ಮುಖ್ಯ ಅತಿಥಿಗಳು: ಡಾ. ಅನಂತ ನಾಯಕ್ ನಾಗಪ್ಪ, ಎಸ್.ನಾಗರಾಜ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಹನುಮಂತಚಾರ್ ಜೋಷಿ, ಸ್ಥಳ: ಪ್ರೊ. ಎಸ್.ಚಿನ್ನಸ್ವಾಮಿ ಶೆಟ್ಟಿ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿತ್ಕಲಾ ಫೌಂಡೇಷನ್, ಹಾಸನ, ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್:** ಚಿತ್ರ ಮತ್ತು ಛಾಯಾಚಿತ್ರ ಕಲಾವಿದ ದೇಸಾಯಿ ಅವರಿಂದ ಪಕ್ಷಿ–ಕೀಟಗಳ ನವರಾತ್ರಿ ಕಲೋತ್ಸವ ಏಕವ್ಯಕ್ತಿ ಛಾಯಾಚಿತ್ರ ಕಲಾ ಪ್ರದರ್ಶನ, ಸ್ಥಳ: ಶ್ರೀಕಲಾನಿಕೇತನ ಆರ್ಟ್ ಗ್ಯಾಲರಿ, ಬೆಳಗ್ಗೆ 10ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ :** ಬೆಳಗ್ಗೆ 10ಕ್ಕೆ ಕನ್ನಡ ಭಾಷೆ ಮತ್ತು ಐಚ್ಛಿಕ ಪಠ್ಯಪುಸ್ತಕ ರಚನಾ ಕಾರ್ಯಾಗಾರ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಹೇಮಂತಕುಮಾರ್, ಉದ್ಘಾಟನೆ: ನಿವೃತ್ತ ಜಂಟಿ ನಿರ್ದೇಶಕ ಪ್ರೊ.ಮೊರಬದ ಮಲ್ಲಿಕಾರ್ಜುನ, ಮುಖ್ಯ ಅತಿಥಿಗಳು: ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಲೋಕನಾಥ್, ಉಪಸ್ಥಿತರು: ಪ್ರೊ.ವಿಜಯಕುಮಾರಿ ಎಸ್. ಕರಿಕಲ್, ಡಾ.ಮ.ರಾಮಕೃಷ್ಣ, ಡಾ.ತಿಮ್ಮೇಗೌಡ, ಸಂಜೆ 4ರಿಂದ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವ ಡಾ.ಎ.ಪಿ. ಜ್ಞಾನಪ್ರಕಾಶ್, ಸಮಾರೋಪ ನುಡಿ : ಸಾಹಿತಿ ಪ್ರೊ. ರಾಜೇಂದ್ರ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.05 ಚಿಂತನ, 6.20 ದಸರಾ ವಿಶೇಷ ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ, 6.40 ದಸರಾ ಸಂದರ್ಭದಲ್ಲಿ ವಿಶೇಷ ಸರಣಿ 'ರಾಜಮಾರ್ಗ–ಮೈಸೂರಿನ ಐತಿಹಾಸಿಕ ರಸ್ತೆಗಳ ಪರಿಚಯ' ಪ್ರಸ್ತುತಿ–ಡಾ. ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 9.15 'ಹರಿಕೇಶಾಂಗಿ ಮಾತಂಗಿ' ನವರಾತ್ರಿ ದಸರಾ ಸಂದರ್ಭದಲ್ಲಿ ರಾಜ್ಯವ್ಯಾಪಿ ವಿಶೇಷ ಸಂಗೀತ ಸರಣಿ, ಪ್ರಸ್ತುತಿ–ಮೈಸೂರು ಎಸ್.ರಾಜಲಕ್ಷ್ಮಿ, 10.00 ಶ್ರೀ ಕಮಲಾಂಬ ಜಯಂತಿ –ನವರಾತ್ರಿ ಸಂದರ್ಭದಲ್ಲಿ ಮುತ್ತುಸ್ವಾಮಿ ದೀಕ್ಷಿತ್ಯರ ನವಾವರಣ ಕೀರ್ತನೆಗಳನ್ನಾಧರಿಸಿದ ವಿಶೇಷ ಸರಣಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರ ನಾಮ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ.ಮೀನಾ, 1.20 'ಜಂಬೂ ಸವಾರಿ–ಮೈಸೂರು ದಸರಾ ಆನೆ ಸ್ಟೋರಿ' ದಸರಾ ಸಂದರ್ಭದಲ್ಲಿ ವಿಶೇಷ ಬಾನುಲಿ ಸರಣಿ ಪ್ರಸ್ತುತಿ –ಅಬ್ದುಲ್ ರಶೀದ್ ಹಾಗೂ ಡಾ.ಮೈಸೂರು ಉಮೇಶ್, 3.00 ಹಿಂದಿ ಚಿತ್ರಗೀತೆ, 4.00 ಹಳ್ಳಿಹಾಡು–ಶಂಕರೇಗೌಡ ಮತ್ತು ತಂಡ–ತತ್ವಪದಗಳು, 5.30 ಚಾಮುಂಡಿ ಹಬ್ಬ–ಜನಪದ ನಾಲಗೆಯಲ್ಲಿ ಮೈಸೂರ ದೇವತೆ, ಲೇಖನ ಡಾ–ಪಿ.ಕೆ.ರಾಜಶೇಖರ್, ಪ್ರಸ್ತುತಿ–ಡಾ.ಮೈಸೂರು ಉಮೇಶ್, 6.50 ಕೃಷಿರಂಗ–ಕಿಸಾನ್‌ವಾಣಿ–ಕೃಷಿಯಲ್ಲಿ ತಂತ್ರಜ್ಞಾನದ ಯಶಸ್ವೀ ಅಳವಡಿಕೆ ಕುರಿತು ಜೆ.ಎಂ.ಕುಮಾರ್ ಅವರೊಂದಿಗೆ ಮಾತುಕತೆ, 9.00 ಯುವವಾಣಿ–ಯುವಪ್ರತಿಭೆ, 10.00 ನಾಟಕ "ದೂರದ ಬೆಟ್ಟ", ಮೂಲಕಥೆ–ತ್ರಿವೇಣಿ, ನಾಟಕ ರೂಪಾಂತರ–ಎಸ್.ಎನ್. ಶಂಕರ್, ನಿರ್ವಾಣ–ಪ್ರಭುಸ್ವಾಮಿ ಮಳಿಮಠ, 10.30 ಸವಿನೆನಪು

### ಈ ಬಾರಿಯ ಜಂಬೂ ಸವಾರಿಯಲ್ಲಿ ಪ್ರಧಾನಿ ಮೋದಿ ಕಾವಲು ಪಡೆಗೆ ಸೇರ್ಪಡೆಗೊಂಡ

# ಮುಧೋಳ ಶ್ವಾನ ಸೇರಿ 43 ಸ್ತಬ್ಧಚಿತ್ರಗಳು ಸಾಗಲಿವೆ



ಮೈಸೂರು,ಸೆ.28(ಎಂಟಿವೈ)– ಎರಡು ವರ್ಷದ ನಂತರ ನಡೆಯುತ್ತಿರುವ ಅದ್ದೂರಿ ಜಂಬೂಸವಾರಿ ಮೆರವಣಿಗೆಯಲ್ಲಿ ಈ ಬಾರಿ ಪ್ರಧಾನಿ ಮೋದಿ ಅವರ ಕಾವಲುಪಡೆ ಎಸ್‌ಪಿಜಿಗೆ ಸೇರ್ಪಡೆ ಯಾಗಿರುವ ಮುಧೋಳ್ ಶ್ವಾನ, ಸೋಮನಾಥಪುರದ ಚನ್ನಕೇಶವ ದೇವಾಲಯ ಸೇರಿದಂತೆ 43 ಸ್ತಬ್ಧಚಿತ್ರ ಸಾಗಲಿವೆ ಎಂದು ಸ್ತಬ್ಧಚಿತ್ರ ಉಪಸಮಿತಿ ಅಧ್ಯಕ್ಷ ಚಂದ್ರಶೇಖರ್ ತಿಳಿಸಿದ್ದಾರೆ.



ಮೈಸೂರು ಜಿಪಂ ದೇವರಾಜ ಅರಸ್ ಸಭಾಂಗಣದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಂಬೂಸವಾರಿಗೆ ಕೇವಲ 6 ದಿನ ಮಾತ್ರ ಬಾಕಿ ಇದ್ದು, ಈಗಾಗಲೇ ಸ್ತಬ್ಧಚಿತ್ರಗಳ ನಿರ್ಮಾಣ ಕಾಮಗಾರಿ ಭರದಿಂದ ಸಾಗುತ್ತಿದೆ. ಸ್ತಬ್ಧಚಿತ್ರ ಉಪ ಸಮಿತಿ ವತಿಯಿಂದ ಚನ್ನಕೇಶವ ದೇವಸ್ಥಾನದ ಸ್ತಬ್ಧಚಿತ್ರ ನಿರ್ಮಾಣ ಮಾಡಲಾಗುತ್ತಿದೆ. ಈ ದೇವಾಲಯ ಯುನೆಸ್ಕೋದ ಪಾರಂಪರಿಕ ತಾಣಗಳ ಪಟ್ಟಿಗೆ ಸೇರ್ಪಡೆಗೊಳಿಸುವ ಕಾರ್ಯ ನಡೆಯುತ್ತಿರುವ ಹಿನ್ನೆಲೆಯಲ್ಲಿ 10 ಲಕ್ಷ ರೂ. ವೆಚ್ಚದಲ್ಲಿ ಸ್ತಬ್ಧಚಿತ್ರ ನಿರ್ಮಿಸಲಾಗುತ್ತಿದೆ. ಇದಲ್ಲದೆ ಸ್ತಬ್ಧ ಚಿತ್ರ ಉಪ ಸಮಿತಿಯಿಂದ ಆನೆಗಾಡಿ ಹಾಗೂ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸ್ತಬ್ಧಚಿತ್ರವನ್ನು ನಿರ್ಮಾಣ ಮಾಡಲಾಗುತ್ತಿದೆ. ಅಲ್ಲದೇ, 31 ಜಿಲ್ಲೆಯ ಹಾಗೂ ವಿವಿಧ ನಿಗಮ ಮಂಡಳಿಗಳ ಸ್ತಬ್ಧಚಿತ್ರಗಳನ್ನು ಮಾಡಲಾಗುತ್ತಿದೆ. ಈಗಾಗಲೇ ಸ್ತಬ್ಧಚಿತ್ರದ ನಿರ್ಮಾಣ ಕಾರ್ಯ ಶೇ.50 ರಷ್ಟು ಪೂರ್ಣಗೊಂಡಿದ್ದು, ಅ.3 ರೊಳಗೆ ಎಲ್ಲ ಸ್ತಬ್ಧಚಿತ್ರಗಳ ನಿರ್ಮಾಣ ಕಾರ್ಯ ಪರಿಪೂರ್ಣಗೊಂಡಿರುತ್ತದೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರ ವಿಶೇಷ ಭದ್ರತಾ ಪಡೆ ಎಸ್‌ಪಿಜಿಗೆ ನಮ್ಮ ನಾಡಿನ ಹೆಮ್ಮೆಯ ಮುಧೋಳ ಶ್ವಾನ ಸೇರ್ಪಡೆಗೊಂಡಿದೆ. ಈ ಶ್ವಾನದ ಸ್ತಬ್ಧಚಿತ್ರ ಈ ಬಾರಿಯ ಜಂಬೂಸವಾರಿಯಲ್ಲಿ ಗಮನ ಸೆಳೆಯಲಿದ್ದು, ಈ ಸ್ತಬ್ಧಚಿತ್ರವನ್ನು ಬಾಗಲಕೋಟೆ ಜಿಲ್ಲೆ ನಿರ್ಮಾಣ ಮಾಡುತ್ತಿದೆ ಎಂದು ತಿಳಿಸಿದರು.

ಮೈಸೂರಿನ ಹಿರಿಮೆಯನ್ನು ಸಾರುವ ಸ್ತಬ್ಧಚಿತ್ರವನ್ನು ಮೈಸೂರು ಜಿಲ್ಲೆಯ ವತಿಯಿಂದ ನಿರ್ಮಿಸಲಾಗುತ್ತಿದ್ದು, ಈ ಸ್ತಬ್ಧಚಿತ್ರವು ಚಾಮುಂಡಿಬೆಟ್ಟ, ಚಾಮುಂಡೇಶ್ವರಿ ದೇವಾಲಯ, ನಂದಿ ಮೂರ್ತಿ ಸೇರಿದಂತೆ ವಿವಿಧ ಕಲಾಕೃತಿಗಳನ್ನು ಒಳಗೊಂಡಿರಲಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕಂಬಳ, ಹಾಸನ ಜಿಲ್ಲೆಯ ಬೇಲೂರು ಮತ್ತು ಶ್ರವಣಬೆಳಗೊಳದ ಗೊಮ್ಮಟೇಶ್ವರ, ಕೊಡಗಿನ ಬ್ರಹ್ಮಗಿರಿ ಬೆಟ್ಟ ಮತ್ತು ತಲಕಾವೇರಿ, ಚಾಮರಾಜ ನಗರದ ವನ್ಯಧಾಮ ಅಥವಾ ಪುನೀತ್ ರಾಜ್ ಕುಮಾರ್ ಅವರ ಸ್ತಬ್ಧಚಿತ್ರ ನಿರ್ಮಾಣ ಮಾಡಲಾಗುವುದು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ದಸರಾ ಸ್ತಬ್ಧಚಿತ್ರ ಉಪಸಮಿತಿ ಪದಾಧಿಕಾರಿಗಳಾದ ಧನುಷ್, ಮಾಲತಿ, ಮೇಘಲ, ಜೋಗಿ ಮಂಜು, ಮಂಜುನಾಥ್, ಪರಶುರಾಮಪ್ಪ, ಮಹದೇವಸ್ವಾಮಿ ಉಪಸ್ಥಿತರಿದ್ದರು.

## ಅನಿಲ್ ಚೌಹಾಣ್ ದೇಶದ ನೂತನ ಸಿಡಿಎಸ್

ನವದೆಹಲಿ, ಸೆ.28– ನಿವೃತ್ತ ಲೆಫ್ಟಿನೆಂಟ್ ಜನರಲ್ ಅನಿಲ್ ಚೌಹಾಣ್ ಅವರನ್ನು ದೇಶದ ಮುಂದಿನ ಚೀಫ್ ಆಫ್ ಡಿಫೆನ್ಸ್ (ಸಿಡಿಎಸ್) ಆಗಿ ನೇಮಕ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಅದರೊಂದಿಗೆ ಅವರು ಅಧಿಕಾರ ವಹಿಸಿಕೊಂಡ ದಿನದಿಂದ ಮಿಲಿಟರಿ ವ್ಯವಹಾರಗಳ ಇಲಾಖೆಯ ಕೇಂದ್ರ ಸರ್ಕಾರದ ಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಣೆ ಮಾಡಲಿದ್ದಾರೆ ಎಂದು ಸರ್ಕಾರ ಹೇಳಿದೆ. ಸುಮಾರು 40 ವರ್ಷಗಳ ವೃತ್ತಿಜೀವನದಲ್ಲಿ, ಲೆಫ್ಟಿನೆಂಟ್ ಜನರಲ್ ಅನಿಲ್ ಚೌಹಾಣ್ ಅವರು ಹಲವಾರು ಕಮಾಂಡ್, ಸಿಬ್ಬಂದಿ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಿದ್ದರು. ಅಲ್ಲದೆ, ಜಮ್ಮು




ಮತ್ತು ಕಾಶ್ಮೀರ ಹಾಗೂ ಈಶಾನ್ಯ ಭಾರತದಲ್ಲಿ ಭಯೋತ್ಪಾದಕ ವಿರೋಧಿ ಕಾರ್ಯಾಚರಣೆಯನ್ನೂ ನಡೆಸುವ ಮೂಲಕ ಈ ಭಾಗದ ಗರಿಷ್ಠ ಅನುಭವವನ್ನು ಹೊಂದಿದ್ದಾರೆ. ಪರಮ ವಿಶಿಷ್ಟ ಸೇವಾ ಮೆಡಲ್, ಉತ್ತಮ್ ಯುದ್ಧ ಸೇವಾ ಮೆಡಲ್, ಅತಿ ವಿಶಿಷ್ಟ ಸೇವಾ ಮೆಡಲ್, ಸೇವಾ ಮೆಡಲ್, ವಿಶಿಷ್ಟ ಸೇವಾ ಮೆಡಲ್ ಗೌರವವನ್ನೂ ಪಡೆದುಕೊಂಡಿದ್ದಾರೆ.

**ಬಿಪಿನ್ ರಾವತ್ ನಿಧನರಾದ ಬಳಿಕ ತೆರವಾಗಿದ್ದ ಸ್ಥಾನ:** ಚೀಫ್ ಆಫ್ ಡಿಫೆನ್ಸ್ ಎನ್ನುವುದು ಕೇಂದ್ರ ಸರ್ಕಾರ ಸೃಷ್ಟಿಸಿದ ಹೊಸ ಹುದ್ದೆ. ಈ ಹುದ್ದೆಯ ಮೂಲಕವೇ ದೇಶದ ಮೂರೂ ರಕ್ಷಣಾ ಪಡೆಗಳ ಮಾಹಿತಿಯನ್ನು ಸರ್ಕಾರ ಪಡೆದುಕೊಳ್ಳುತ್ತದೆ. ಸಿಡಿಎಸ್ ನಂತರದ ಸ್ಥಾನದಲ್ಲಿ ಆಯಾ ಸೇನೆಗಳ ಮುಖ್ಯಸ್ಥರ ಹುದ್ದೆ ಬರುತ್ತದೆ. ಭಾರತೀಯ ಭೂಸೇನೆಯ ಮುಖ್ಯಸ್ಥರಾಗಿದ್ದ ಜನರಲ್ ಬಿಪಿನ್ ರಾವತ್ ಅವರನ್ನೇ ಸರ್ಕಾರ ದೇಶದ ಮೊದಲ ಸಿಡಿಎಸ್ ಆಗಿ 2020ರ ಜನವರಿ 1 ರಂದು ನೇಮಕ ಮಾಡಿತ್ತು. 2021ರ ಡಿಸೆಂಬರ್ 8 ರಂದು ತಮಿಳುನಾಡಿನ ನೀಲಗಿರಿ ಜಿಲ್ಲೆಯ ಕನೂರಿನಲ್ಲಿ ಬಿಪಿನ್ ರಾವತ್ ಹಾಗೂ ಅವರ ಪತ್ನಿ ಸೇರಿದಂತೆ ವಿವಿಧ ಸೇನಾಧಿಕಾರಿಗಳಿದ್ದ ಸೇನಾ ಹೆಲಿಕಾಪ್ಟರ್ ಭಾರೀ ದುರಂತಕ್ಕೀಡಾಗಿತ್ತು. ಈ ಅಪಘಾತದಲ್ಲಿ ಬಿಪಿನ್ ರಾವತ್ ದಂಪತಿ ಸೇರಿ 13 ಮಂದಿ ಸಾವಿಗೀಡಾಗಿದ್ದರು. ಬಿಪಿನ್ ರಾವತ್ ಸಾವಿನ ಬಳಿಕ, ಜನರಲ್ ಮನೋಜ್ ಮುಖುಂದ್ ನರ್ವಾನೆ ಅವರನ್ನು ಚೇರ್ಮನ್ ಆಫ್ ದ ಚೀಫ್ ಆಫ್ ಸ್ಟಾಫ್ಸ್ ಕಮಿಟಿಗೆ ನೇಮಕ ಮಾಡಿದ್ದರೂ, ಸಿಡಿಎಸ್ ಸ್ಥಾನ ತೆರವಾಗಿಯೇ ಇತ್ತು.

## ನಿವೃತ್ತ ಪ್ರಾಧ್ಯಾಪಕ ನಿಧನ

ಮೈಸೂರು, ಸೆ.28– ಮಹಾರಾಣಿ ವಿಜ್ಞಾನ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ಕೆ.ನಾರಾಯಣ ನಾಯ್ಡು ಅವರು ಇತ್ತೀಚೆಗೆ ಕೊಯಮ್ಮತೂರಿನಲ್ಲಿ ನಿಧನರಾದರು. ಮೂಲತಃ ಚಾಮರಾಜನಗರ ಜಿಲ್ಲೆಯ ಹನೂರಿನವರಾದ ಅವರು ಕೊಳ್ಳೇಗಾಲದಲ್ಲಿ ಜೀವಶಾಸ್ತ್ರ ಉಪನ್ಯಾಸಕರಾಗಿ ವೃತ್ತಿ ಜೀವನ ಆರಂಭಿಸಿದರು. ನಂತರ ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ನಿವೃತ್ತರಾದ ನಂತರ ಕೊಯಮ್ಮತ್ತೂರಿನಲ್ಲಿ ವಾಸವಾಗಿದ್ದರು.



ಮೃತರ ಸಹೋದ್ಯೋಗಿಯಾಗಿದ್ದ ಕಾಲೇಜು ಶಿಕ್ಷಣ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕ ಸಿ.ರಾಮಣ್ಣ ಅವರು ಮೃತರಿಗೆ ಸಂತಾಪ ಸೂಚಿಸಿದ್ದಾರೆ.

## ಎಂ.ಆರ್. ಮಂಜುನಾಥ್

ಮೈಸೂರು, ಸೆ. 28– ಮೈಸೂರಿನ ಉದಯಗಿರಿ ನಿವಾಸಿ ಕೆನರಾ ಬ್ಯಾಂಕ್ ಕರೆನ್ಸಿ ಚೆಸ್ಟ್ ಆರ್ಮ್ಸ್ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ ಮಾಜಿ ಸೈನಿಕ ಎಂ.ಆರ್. ಮಂಜುನಾಥ್(48) ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದು, ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಇಂದು ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



# ಇಂದಿನಿಂದ 2 ದಿನ ಮಕ್ಕಳ ದಸರಾ; ವಿಜ್ಞಾನ–ಕರಕುಶಲ ವಸ್ತು ಪ್ರದರ್ಶನ ಸೇರಿದಂತೆ ವರ್ಣರಂಜಿತ ಸಾಂಸ್ಕೃತಿಕ ಕಾರ್ಯಕ್ರಮ








ಮೈಸೂರು,ಸೆ.28(ಪಿಎಂ)– ಮಕ್ಕಳಿಂದ ಸಿದ್ಧಗೊಂಡ ವಿಜ್ಞಾನದ ವಿವಿಧ ಮಾದರಿಗಳ ವಸ್ತು ಪ್ರದರ್ಶನ, ಕರಕುಶಲ ವಸ್ತು ಪ್ರದರ್ಶನ ಸೇರಿದಂತೆ ಮಕ್ಕಳು ಸಾಂಸ್ಕೃತಿಕ ಸಂಭ್ರಮದ ಎರಡು ದಿನಗಳ 'ಮಕ್ಕಳ ದಸರಾ–2022' ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಸೆ.29 ಮತ್ತು 30ರಂದು ನಡೆಯಲಿದೆ.

ಸೆ.29ರ ಬೆಳಗ್ಗೆ 11.30ಕ್ಕೆ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮಕ್ಕಳ ದಸರಾಗೆ ಚಾಲನೆ ನೀಡಲಿದ್ದಾರೆ. 'ಗಿಚ್ಚಿ ಗಿಲಿಗಿಲಿ' ಹಾಗೂ 'ನನ್ನಮ್ಮ ಸೂಪರ್ ಸ್ಟಾರ್' ಟಿವಿ ಶೋ ಖ್ಯಾತಿಯ ಬಾಲ ಪ್ರತಿಭೆ ವಂಶಿಖಾ ಅಂಜನಿ ಕಶ್ಯಪ್ಪ ವಿಶೇಷ ಅತಿಥಿಯಾಗಿ ಪಾಲ್ಗೊಳ್ಳಲಿದ್ದು, ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಲಿದೆ.

ವರ್ಣರಂಜಿತ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ವಿವಿಧ ವಿಜ್ಞಾನ ಮಾದರಿಗಳು ಸೇರಿದಂತೆ ನಾನಾ ವಿಷಯಗಳ ವಸ್ತು ಪ್ರದರ್ಶನ ಇಲ್ಲಿನ ಪ್ರಮುಖ ಆಕರ್ಷಣೆಯಾಗಲಿದೆ. 'ಶಿಕ್ಷಣದಲ್ಲಿ ಚಿತ್ರಕಲೆಯ ಉಪಯುಕ್ತತೆ', 'ಭೌಗೋಳಿಕ ಮತ್ತು ಪ್ರಾಕೃತಿಕ ವೈಪರೀತ್ಯ ಕಾರಣಗಳು ಮತ್ತು ಪರಿಣಾಮಗಳು', 'ಕನ್ನಡದ ಶ್ರೇಷ್ಠ ಕವಿ ಪರಂಪರೆ', 'ಶಿಕ್ಷಣ ಇಲಾಖೆಯ ಪ್ರೋತ್ಸಾಹದಾಯಕ ಯೋಜನೆಗಳು', 'ಎನ್‌ಇಪಿ ಮತ್ತು ಕಲಿಕಾ ಚೇತರಿಕೆ', 'ಮೈಸೂರು ಜಿಲ್ಲೆಯ ಪ್ರವಾಸಿ ತಾಣಗಳು', 'ಯೋಗ ಮತ್ತು ಸ್ವಾಸ್ಥ್ಯ ಹಾಗೂ ಕೊರೊನಾ ಮುನ್ನೆಚ್ಚರಿಕೆ', 'ಕಲಿಕಾ ಪ್ರಕ್ರಿಯೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ' ಕುರಿತಂತೆ ವಸ್ತು ಪ್ರದರ್ಶನ ನಡೆಯಲಿದೆ. ಅಲ್ಲದೆ, ಕರಕುಶಲ ವಸ್ತು ಪ್ರದರ್ಶನವೂ ಗಮನ ಸೆಳೆಯಲಿದೆ.

ಜಿಲ್ಲೆಯ ಎಲ್ಲಾ ತಾಲೂಕುಗಳ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿಭಾಗದಿಂದ ಆಯ್ಕೆಯಾದ ವಿದ್ಯಾರ್ಥಿಗಳಿಂದ ವಿಜ್ಞಾನ ವಸ್ತು ಪ್ರದರ್ಶನ, ಕರಕುಶಲ ವಸ್ತು ಪ್ರದರ್ಶನ ನಡೆಯಲಿದ್ದು, ಮೈಸೂರು ಅಗಸ್ತ್ಯ ಫೌಂಡೇಷನ್ ಸಂಸ್ಥೆಯಿಂದ ಮತ್ತೊಂದು ಪ್ರತ್ಯೇಕ ವಿಜ್ಞಾನ ವಸ್ತು ಪ್ರದರ್ಶನ ಸಹ ನಡೆಯಲಿದೆ.

ಸೆ.29ರಂದು ಬೆಳಗ್ಗೆ 10ರಿಂದ 10.45ರವರೆಗೆ ಶ್ರೀ ಲಲಿತ ಸಂಗೀತ ಶಾಲಾ ಮಕ್ಕಳು ಹಾಗೂ ಅತ್ರಿ ಕೌಶಿಕ್ ತಂಡದಿಂದ ಸುಗಮ ಸಂಗೀತ, ಬೆಳಗ್ಗೆ 10.50ರಿಂದ 11ರವರೆಗೆ ಪೀಪಲ್ಸ್ ಪಾರ್ಕ್ ಶಾಲಾ ಮಕ್ಕಳಿಂದ ಸಮೂಹ ಗೀತೆ ಹಾಗೂ ಬೆಳಗ್ಗೆ 11ರಿಂದ 12ರವರೆಗೆ ನಡೆಯುವ ಉದ್ಘಾಟನಾ ಸಮಾರಂಭದಲ್ಲಿಯೇ ವಸ್ತು ಪ್ರದರ್ಶನಕ್ಕೂ ಚಾಲನೆ ದೊರೆಯಲಿದೆ.

ಮಧ್ಯಾಹ್ನ 12ರಿಂದ 1.30ರವರೆಗೆ ಮಕ್ಕಳ ವಿವಿಧ ವೇಷಭೂಷಣ ಸ್ಪರ್ಧೆ, ಮಧ್ಯಾಹ್ನ 2ರಿಂದ 2.15ರವರೆಗೆ ಶ್ರೀ ಸಾಯಿರಂಗ ಶಾಲೆ ಮಕ್ಕಳಿಂದ ನೃತ್ಯ ಪ್ರದರ್ಶನ, ಮಧ್ಯಾಹ್ನ 2.15ರಿಂದ 2.30ರವರೆಗೆ ಕುಮಾರನ್ಸ್ ಚಿಲ್ಡ್ರನ್ಸ್ ಶಾಲೆಯ ವಿದ್ಯಾರ್ಥಿನಿ ಎಸ್.ಸಿಂಚನಾ ಅವರಿಂದ ಹಾಡುಗಾರಿಕೆ, ಮಧ್ಯಾಹ್ನ 2.30ರಿಂದ 3.30ರವರೆಗೆ ಸಂಚಲನ ಮೈಸೂರು ರಂಗತಂಡದ ಮಕ್ಕಳಿಂದ 'ಬೆಟ್ಟದ ಇಲಿಗಳ ಕಥೆ' ನಾಟಕ ಪ್ರದರ್ಶನ, ಮಧ್ಯಾಹ್ನ 3.30ರಿಂದ ಸಂಜೆ 4.30ರವರೆಗೆ ಗಜಪಡೆ ಮಾವುತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸಂಜೆ 4.30ರಿಂದ 5.30ರವರೆಗೆ ವಿವಿಧ ಸ್ಪರ್ಧೆಗಳ ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಲಿದೆ. ಅಲ್ಲದೆ, ಮಧ್ಯಾಹ್ನ 12ರಿಂದ 1.30ರವರೆಗೆ ಮಹಾರಾಣಿ ಟಿಟಿಐ ಆವರಣದಲ್ಲಿ ಪ್ರಬಂಧ ಮತ್ತು ಆಶುಭಾಷಣ ಸ್ಪರ್ಧೆಗಳು ನಡೆಯಲಿವೆ.

ಸೆ.30ರಂದು ಬೆಳಗ್ಗೆ 10ರಿಂದ 10.30ರವರೆಗೆ ಟಿ.ಎಸ್.ಶ್ರೀಲಕ್ಷ್ಮಿ ಮತ್ತು ತಂಡದಿಂದ ನೃತ್ಯ ಪ್ರದರ್ಶನ, ಬೆಳಗ್ಗೆ 10.30ರಿಂದ ಮಧ್ಯಾಹ್ನ 1.30ರವರೆಗೆ ಮಕ್ಕಳ ಸಾಂಸ್ಕೃತಿಕ ಹಾಗೂ ಚಿತ್ರಕಲಾ ಸ್ಪರ್ಧೆ, ಮಧ್ಯಾಹ್ನ 2ರಿಂದ 2.30ರವರೆಗೆ ಮಹಿಳಾ ಪೂಜಾ ಕುಣಿತ ಹಾಗೂ ಹುಲಿಕಲ್ ನಟರಾಜ್ ಅವರಿಂದ ಪವಾಡ ರಹಸ್ಯ ಬಯಲು ಕಾರ್ಯಕ್ರಮ, ಮಧ್ಯಾಹ್ನ 3.30ರಿಂದ 3.45ರವರೆಗೆ ಎಸ್.ಧವನ್ ಅವರಿಂದ ಜನಪದ ಗೀತೆ, ಮಧ್ಯಾಹ್ನ 3.50ರಿಂದ 4.10ರವರೆಗೆ ಮಕ್ಕಳಿಂದ ನೃತ್ಯ ಮತ್ತು ನಾಟಕ ಪ್ರದರ್ಶನ ಹಾಗೂ ಸಂಜೆ 4.15ರಿಂದ 5.30ರವರೆಗೆ ಸಮಾರೋಪ ಸಮಾರಂಭ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಲಿದೆ. ಅಲ್ಲದೆ, ಬೆಳಗ್ಗೆ 10.30ರಿಂದ ಮಧ್ಯಾಹ್ನ 1.30ರವರೆಗೆ ಮಹಾರಾಣಿ ಟಿಟಿಐ ಆವರಣದಲ್ಲಿ ದೇಸಿ ಆಟಗಳು ಜರುಗಲಿವೆ.

## ನಕ್ಕರೆ ಅದೇ ಸ್ವರ್ಗ

ಆಕೆ : ನನ್ನ ವುಡ್‌ಬಿ ತುಂಬಾ ಸ್ಮಾರ್ಟ್, ಆದರೆ ಅವನು ನಗುವಾಗ ಮಾತ್ರ ಅಷ್ಟು ಚೆನ್ನಾಗಿ ಕಾಣಿಸೋಲ್ಲ"

ಈಕೆ : ಬಿಡೇ ಅದಕ್ಯಾಕೆ ಚಿಂತೆ. ನಿನ್ನ ಮದುವೆ ಆದ ಮೇಲೆ ಅವನು ನಗುವ ಸಂದರ್ಭವೇ ಬರಲಿಕ್ಕಿಲ್ಲ?

ಮೈಸೂರು ಮಿತ್ರ

ಗುರುವಾರ, 29 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ M.A.

### ಅಮೃತವಾಹಿನಿ

ಹೊಸದು ಬರುವುದು ಯಾವಾಗಲೂ ಹಳೆಯದರ ಮೇಲೆಯೇ

–ಘೋಪಿನ್ ಹಾರ್

### ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ತುಂಬಿ ತುಂಬಿ ಒಯ್ದರೂ ಹಂಬಲ ಮಾತ್ರ ಹೋಗದು

## ನಿಮ್ಮ ಪತ್ರಗಳು

### ಭ್ರಷ್ಟಾಚಾರದ ಅಭಿಯಾನ ಹಾಸ್ಯಾಸ್ಪದ

ಮಾನ್ಯರೆ,

ರಾಜ್ಯ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಅಭಿಯಾನ ಆರಂಭಿಸಿರುವ ಕಾಂಗ್ರೆಸ್‌ನ ನಡೆ ಹಾಸ್ಯಾಸ್ಪದದ ಒಂದು ಪ್ರಸಂಗವಾಗಿದೆ.

ಈ ದೇಶವನ್ನು ಅತೀ ದೀರ್ಘ ಕಾಲ ಆಳಿದ ಕಾಂಗ್ರೆಸ್ ಭಂಡಾರದಲ್ಲಿ ಹಗರಣಗಳ ಹೂರಣವೇ ಅಡಗಿದೆ. ದಿವಂಗತ ಇಂದಿರಾ ಗಾಂಧಿಯವರಿಂದ ಹಿಡಿದು ಮನಮೋಹನ್ ಸಿಂಗ್ ಆಡಳಿತಾವಧಿ ತನಕ ನಡೆದಿರುವ ಹಗರಣಗಳು ಇತಿಹಾಸದ ಪುಟದಲ್ಲಿ ದಾಖಲಾಗಿರುವುದನ್ನು ಯಾರೂ ಅಳಿಸಲಾಗದು.

ಬೋಫೋರ್ಸ್ ಫಿರಂಗಿ ಹಗರಣ, ಲಕ್ಕೂ ಬಾಯ್ ಪಾಠಕ್ ಹವಾಲ ಹಗರಣ, ಕಲ್ಲಿದ್ದಲು ಹಗರಣ, ಟೆಲಿಕಾಂ ಹಗರಣ, 2.ಜಿ ಹಗರಣ ಸೇರಿದಂತೆ ಇತ್ತೀಚಿನ ನ್ಯಾಷನಲ್ ಹೆರಾಲ್ಡ್ ಹಗರಣಗಳು ಕಾಂಗ್ರೆಸ್ ಆಡಳಿತಾವಧಿಯ ಕೊಡುಗೆಗಳಾಗಿದ್ದು ಭ್ರಷ್ಟತೆ ವಿರುದ್ಧ ಧ್ವನಿ ಎತ್ತಿರುವ ಕಾಂಗ್ರೆಸ್ ಪಕ್ಷದ ನೈತಿಕತೆಯನ್ನು ಇಲ್ಲಿ ಪ್ರಶ್ನೆ ಮಾಡುವ ಆಗಿದೆ.

ಹಲವಾರು ಹಗರಣಗಳಲ್ಲಿ ಸಾರ್ವಜನಿಕ ಸಂಪತ್ತನ್ನು ಲೂಟಿ ಹೊಡೆದು ಜೈಲು ವಾಸ ಅನುಭವಿಸಿದವರ ಪಟ್ಟಿಯೇ ಬಹಳ ಇರುವಾಗ ಸರ್ಕಾರದ ವಿರುದ್ಧ PAY CM ಅಭಿಯಾನ ಆರಂಭಿಸಿರುವ ಕಾಂಗ್ರೆಸ್ ನಾಯಕರು ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳುವುದು ಸೂಕ್ತ.

ಕಳೆದ ಎಂಟು ವರ್ಷಗಳಿಂದ ಯಾವುದೇ ವಿವಾದಗಳಿಲ್ಲದೆ ಹಗರಣ ಮುಕ್ತ ಸರ್ಕಾರ ನಡೆಸುತ್ತಿರುವ ಕೇಂದ್ರ ಸರ್ಕಾರದ ಬಗ್ಗೆ ಧ್ವನಿ ಎತ್ತಲು ಕಾಂಗ್ರೆಸ್‌ಗೆ ಯಾವುದೇ ಅಸ್ತ್ರವಿಲ್ಲವಾಗಿದೆ. ಆದರೆ ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ದೊಂಬರಾಟ ಕಾಂಗ್ರೆಸ್ ಪಕ್ಷಕ್ಕೆ ಶೋಭೆ ತರುವ ವಿಚಾರವಂತೂ ಅಲ್ಲ.

– ಹೆಚ್.ಆರ್ ಪ್ರಸಾದ್, ವಿವೇಕಾನಂದ ನಗರ, ಮೈಸೂರು.

### ಕನಕದಾಸ ವೃತ್ತದಲ್ಲಿ ಬೀದಿ ದೀಪ ಅಳವಡಿಸಿ

ಮಾನ್ಯರೆ,

ಮೈಸೂರಿನಲ್ಲಿ ಅದ್ದೂರಿ ದಸರಾ ಆರಂಭವಾಗಿದ್ದು, ಈ ಸಂದರ್ಭದಲ್ಲೂ ಮೈಸೂರಿನ ಕನಕದಾಸನಗರ ವೃತ್ತದಿಂದ ಪಿಕೆವಿ ಆಚಾರ್ಯ ಕಲ್ಯಾಣ ಭವನದವರೆಗಿನ ರಸ್ತೆಯು ಇದುವರೆವಿಗೂ ಬೀದಿದೀಪದ ಸೌಲಭ್ಯವಿಲ್ಲದೇ ರಾತ್ರಿ ವೇಳೆ ಕಗ್ಗತ್ತಲಲ್ಲಿ ಮುಳುಗಿರುತ್ತದೆ. ಆದ್ದರಿಂದ ಸಂಬಂಧಪಟ್ಟ ಸೆಸ್ಕಾಂ ಇಲಾಖೆಯವರು ಕೂಡಲೇ ಬೀದಿದೀಪ ಅಳವಡಿಸಬೇಕೆಂದು ಈ ಮೂಲಕ ಮನವಿ.

–ಬಿ.ಟಿ. ರಾಮಶೇಷ, ಕನಕದಾಸನಗರ, ಮೈಸೂರು.

### ಕುಡುಕರ ಹಾವಳಿ ತಪ್ಪಿಸಿ



ಮಾನ್ಯರೆ,

ಪಿರಿಯಾಪಟ್ಟಣ ತಾಲೂಕು ಕಂಪಲಾಪುರ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಪ್ರತಿದಿನ ರಾತ್ರಿ ಕುಡುಕರ ಹಾವಳಿ ಹೆಚ್ಚಾಗಿದ್ದು, ಇಲ್ಲಿ ರಾತ್ರಿ ವೇಳೆ ಕರ್ತವ್ಯ ನಿರ್ವಹಿಸುವ ನರ್ಸ್ ಹಾಗೂ ಮಹಿಳಾ ವೈದ್ಯರು ಭಯಭೀತರಾಗಿದ್ದಾರೆ.

ರಾತ್ರಿ ಸಮಯದಲ್ಲಿ ಮದ್ಯಪಾನ ಮಾಡಿ ಖಾಲಿ ಬಾಟಲಿಗಳನ್ನು ಆಸ್ಪತ್ರೆ ಪಕ್ಕದಲ್ಲೇ ಬಿಸಾಡಿ ಹೋಗುತ್ತಾರೆ. ಜೊತೆಗೆ ಕುಡಿದು ಏರುಧ್ವನಿಯಲ್ಲಿ ಮಾತನಾಡುತ್ತಿರುತ್ತಾರೆ. ಇದರಿಂದ ಸಾರ್ವಜನಿಕರಿಗೆ ಹಾಗೂ ರೋಗಿಗಳಿಗೆ ಕಿರಿಕಿರಿಯಾಗುತ್ತಿದೆ.

ಆಸ್ಪತ್ರೆ ಸುತ್ತಲೂ ಅಳವಡಿಸಿರುವ ಕೆಲ ಬೀದಿದೀಪಗಳು ಕೆಟ್ಟಿದ್ದು, ಕತ್ತಲು ಇರುವುದರಿಂದ ಕುಡುಕರ ಇಲ್ಲಿಗೆ ಬಂದು ಮದ್ಯಪಾನ ಮಾಡುತ್ತಾರೆ. ಕೂಡಲೇ ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳು ಬೀದಿದೀಪ ಅಳವಡಿಸಿ, ಕುಡುಕರ ಹಾವಳಿ ತಪ್ಪಿಸಿ, ರೋಗಿಗಳಿಗೆ ಸುಸೂತ್ರವಾಗಿ ಸೇವೆ ಮಾಡಲು ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಕಂಪಲಾಪುರ ಗ್ರಾಮಸ್ಥರು, ಪಿರಿಯಾಪಟ್ಟಣ ತಾಲೂಕು

### ಸೆಲ್ಫಿ ಗೀಳಿಗೆ ಬೀಳಲಿ ಕಡಿವಾಣ!

ಮಾನ್ಯರೆ,

ಸೆಲ್ಫಿ ಗೀಳಿಗೆ ಬಿದ್ದು ಕಾಲುವೆಗೆ ಜಾರಿ ಇಬ್ಬರು ವಿದ್ಯಾರ್ಥಿಗಳು ಸಾವನ್ನಪ್ಪಿರುವ ಸುದ್ದಿ ರಾಯಚೂರಿನಲ್ಲಿ ವರದಿಯಾಗಿದೆ. ಈ ರೀತಿಯ ಘಟನೆಗಳು ರಾಜ್ಯದ ಹಲವೆಡೆ ಆಗಾಗ ನಡೆಯುತ್ತಿರುವುದು ತುಂಬಾ ಆತಂಕಕಾರಿ ಬೆಳವಣಿಗೆಯಾಗಿದೆ. ಈಗಿನ ಯುವ ಪೀಳಿಗೆ ಮೊಬೈಲ್‌ನ ಸೆಲ್ಫಿ ಗೀಳಿಗೆ ದಾಸರಾಗಿದ್ದು, ಇದರಿಂದಾನೇ ಈ ರೀತಿಯ ಸಾವು ನೋವುಗಳು ಅಲ್ಲಲ್ಲಿ ಕಂಡು ಬರುತ್ತಿವೆ.

ಇಂದು ಸೆಲ್ಫಿ ಸಂಸ್ಕೃತಿ ಅತಿ ಹೆಚ್ಚಾಗಿ ದಾಂಗುಡಿ ಇಟ್ಟಿರುವುದು ಯುವ ಪೀಳಿಗೆಯ ಮೇಲೆ. ಅತ್ಯಾಧುನಿಕ ಕ್ಯಾಮರಾ ತಂತ್ರಜ್ಞಾನಗಳಿರುವ ಮೊಬೈಲ್ ಫೋನ್‌ಗಳು ಇಂದು ಹೆಚ್ಚಿನವರ ಕೈಗಳಲ್ಲಿ ರಾರಾಜಿಸುತ್ತಿದ್ದು, ಪ್ರತಿಯೊಬ್ಬರು ಫೋಟೋಗ್ರಾಫರ್‌ಗಳಾಗುತ್ತಿದ್ದಾರೆ. ಕುಳಿತರು ಫೋಟೋ ಕ್ಲಿಕ್ಕಿಸುತ್ತಾರೆ. ನಿಂತರು ಫೋಟೋ ಕ್ಲಿಕ್ಕಿಸುತ್ತಾರೆ. ಈ ರೀತಿಯ ಸೆಲ್ಫಿ ಕ್ಲಿಕ್ಕಿಸುವ ಹುಚ್ಚಾಟದಲ್ಲಿ ಈಗಾಗಲೇ ಹಲವಾರು ಜನರು ತಮ್ಮ ಪ್ರಾಣಗಳನ್ನು ಕಳೆದುಕೊಂಡಿದ್ದಾರೆ ಹಾಗೂ ಈಗಲೂ ಕಳೆದುಕೊಳ್ಳುತ್ತಿದ್ದಾರೆ. ಜನರಿಂದು ಸೆಲ್ಫಿಗಳನ್ನು ಕ್ಲಿಕ್ಕಿಸಿಕೊಂಡು ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಮಾಡುವುದರಲ್ಲಿ ಮಹದಾನಂದವನ್ನು ಕಾಣುತ್ತಿದ್ದಾರೆ. ಫೇಸ್‌ಬುಕ್, ವಾಟ್ಸಾಪ್ ಹಾಗೂ ಇನ್ಸ್ಟಾಗ್ರಾಮ್‌ನಂತಹ ಹಲವಾರು ಸಾಮಾಜಿಕ ಮಾಧ್ಯಮಗಳಲ್ಲಿ ತಮ್ಮ ಫೋಟೋಗಳನ್ನು ಹರಿಯಬಿಟ್ಟು ಲೈಕ್ ಕಾಮೆಂಟ್‌ಗಳ ನಿರೀಕ್ಷೆಯಲ್ಲಿ ಕಾಲಹರಣ ಮಾಡುವುದು ಅರ್ಥಹೀನ ಅನಿಸುತ್ತದೆ.

ಸೆಲ್ಫಿ ಇಂದು ಕೇವಲ ಸಮಸ್ಯೆಯಾಗಿ ಉಳಿದಿಲ್ಲ. ಅದು ಗೀಳಿನ ಅಪಾಯವನ್ನು ಹೆಚ್ಚಿಸುತ್ತದೆ ಮತ್ತು ಯಾವುದೇ ಆದರೂ ಅದು ಚಟವಾದರೆ ಹಾನಿಕರವಾಗುತ್ತದೆ. ಅಲ್ಲದೆ ಮುಂದೊಂದು ದಿನ ವ್ಯಕ್ತಿಯ ಖಾಸಗೀತನಕ್ಕೆ ಅಪಾಯವನ್ನುಂಟು ಮಾಡಬಲ್ಲದು. ಈ ನಿಟ್ಟಿನಲ್ಲಿ ನಮ್ಮ ಯುವಜನತೆ ಯೋಚಿಸಿ ಸೆಲ್ಫಿಯ ಹುಚ್ಚುತನಕ್ಕೆ ಶರಣಾಗದೆ, ಮರುಳಾಗದೆ ಇರುವುದು ಒಳಿತು.

–ಹರಳಹಳ್ಳಿಪುಟ್ಟರಾಜು, ಪಾಂಡವಪುರ.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

# ಉದ್ಯೋಗ ಸ್ಥಳಗಳು ಮಹಿಳೆಯರಿಗೆ ಎಷ್ಟು ಸುರಕ್ಷಿತ?

> ಇಂದು ಉದ್ಯೋಗ ರಂಗದ ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗುತ್ತಿರುವುದು ಹೆಮ್ಮೆ ಪಡುವಂಥ ವಿಚಾರವೇ ಸರಿ. 'ಉದ್ಯೋಗಂ ಪುರುಷ ಲಕ್ಷಣಂ' ಎಂಬಂಥ ಪುರುಷ ಪ್ರಧಾನ ಮೌಲ್ಯಾಚರಣೆಗಳಿಗೆ ಹೆಣ್ಣು ಮಕ್ಕಳು ಸವಾಲನ್ನು ಒಡ್ಡಿದ್ದಾರೆ. ಆದರೆ ಪುರುಷ ಪರಮಾಧಿಕಾರದ ಪ್ರದರ್ಶನ ಅನೇಕ ಉದ್ಯೋಗ ಸ್ಥಳಗಳಲ್ಲಿ ಹೊಸ ಹೊಸ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಇದರ ಅತಿ-ಮಾನುಷ ರೂಪ ವ್ಯಕ್ತವಾಗುವುದು ಹೆಣ್ಣು ಮಕ್ಕಳ ದೇಹದ ಮೇಲೆ ನಡೆಯುವ ಆಕ್ರಮಣದ ಮೂಲಕ. ಅನೇಕ ಉದ್ಯೋಗ ಸ್ಥಳಗಳಲ್ಲಿ ನಡೆಯುವ ಲೈಂಗಿಕ ದೌರ್ಜನ್ಯಗಳು ಹೊರ ಪ್ರಪಂಚದ ದೃಷ್ಟಿಗಾಗಲಿ ಗಮನಕ್ಕಾಗಲಿ ಬರುವುದೇ ಇಲ್ಲ.



ಕಳೆದ ವಾರ ಪತ್ರಿಕೆಗಳಲ್ಲಿ ಉತ್ತರಾಖಂಡದ ರೆಸಾರ್ಟ್ ಒಂದರಲ್ಲಿ ಅತಿಥಿಗಳೊಡನೆ ಲೈಂಗಿಕ ಸಂಬಂಧದಲ್ಲಿ ತೊಡಗಲು ನಿರಾಕರಿಸಿದ ರಿಸೆಪ್ಷನಿಸ್ಟ್ ಹೆಣ್ಣು ಮಗಳನ್ನು ಆ ರೆಸಾರ್ಟ್ ಮಾಲೀಕ ತನ್ನ ಸಹಚರರೊಡಗೂಡಿ ಕೊಲೆ ಮಾಡಿದ ಸುದ್ದಿ ವರದಿಯಾಗಿತ್ತು. ಹತ್ತೊಂಬತ್ತು ವರ್ಷದ ಈ ಯುವತಿಯ ಮೃತದೇಹ ಕೊಲೆಯಾದ ಐದು ದಿನಗಳ ನಂತರ ನಾಲೆಯೊಂದರಲ್ಲಿ ದೊರೆತಿದ್ದು, ಈ ಘಟನೆ ವ್ಯಾಪಕ ಸಾರ್ವಜನಿಕ ಆಕ್ರೋಶಕ್ಕೆ ಕಾರಣವಾಗಿದೆ.

ಈ ರೆಸಾರ್ಟ್ ಮಾಲೀಕ ಸ್ಥಳೀಯ ಆಡಳಿತಾರೂಢ ಭಾರತೀಯ ಜನತಾ ಪಕ್ಷದ ಹಿರಿಯ ನಾಯಕರೊಬ್ಬರ ಪುತ್ರನಾಗಿದ್ದು, ರಾಜ್ಯದ ಹಿಂದುಳಿದ ವರ್ಗಗಳ ಆಯೋಗದ ಉಪಾಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದ ಆತನ ಹಿರಿಯ ಸಹೋದರನನ್ನೂ, ತಂದೆಯನ್ನೂ ಪಕ್ಷದಿಂದ ವಜಾ ಮಾಡಲಾಗಿದೆ ಎಂದು ತಿಳಿದುಬಂದಿದೆ. ಪ್ರಕರಣದ ಪ್ರಮುಖ ಆರೋಪಿ ಮತ್ತು ಆತನ ಸಹಚರರನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದಾರೆ.

ಈ ಘಟನೆಯಿಂದ ಭುಗಿಲೆದ್ದಿರುವ ಸ್ಥಳೀಯ ಸಮುದಾಯಗಳ ಆಕ್ರೋಶ ಆ ಹೆಣ್ಣು ಮಗಳ ಅಂತಿಮ ಸಂಸ್ಕಾರ ನಡೆಯುತ್ತಿರುವಾಗ ಅವರು ರಾಷ್ಟ್ರೀಯ ಹೆದ್ದಾರಿಗೆ ತಡೆಯನ್ನು ಒಡ್ಡಿ ಆಕೆಯ ಕೊಲೆಗಡುಕರಿಗೆ ಮರಣದಂಡನೆಯನ್ನು ವಿಧಿಸಬೇಕೆಂದು ಬೇಡಿಕೆ ಇಟ್ಟಿದ್ದು; ಆಕೆಯ ಕುಟುಂಬದ ಸದಸ್ಯರು ಮರಣೋತ್ತರ ಪರೀಕ್ಷೆಯ ವರದಿ ಬರುವವರೆಗೂ ಅಂತ್ಯಸಂಸ್ಕಾರವನ್ನುಮಾಡುವುದಿಲ್ಲವೆಂದು ಹಠ ಹಿಡಿದಾಗ ರಾಜ್ಯದ ಮುಖ್ಯಮಂತ್ರಿಗಳು ಅವರ ಮನವೊಲಿಸಿ ಶೀಘ್ರ ನ್ಯಾಯಾಲಯದಲ್ಲಿ ಪ್ರಕರಣವನ್ನು ಇತ್ಯರ್ಥ ಮಾಡುವುದಾಗಿ ಭರವಸೆ ಇತ್ತದ್ದು; ವಿಷಯ ಸಾರ್ವಜನಿಕರ ಗಮನಕ್ಕೆ ಬಂದೊಡನೆ ರೆಸಾರ್ಟ್ ಮಾಲೀಕನ ಒಡೆತನದಲ್ಲಿರುವ ಉಪ್ಪಿನಕಾಯಿ ಘಟಕಕ್ಕೆ ಬೆಂಕಿ ಹಚ್ಚಿದ್ದು; ಸ್ಥಳೀಯ ಶಾಸಕಿಯ ಕಾರು ಹಾಗೂ ಪೊಲೀಸ್ ವಾಹನದ ಮೇಲೆ ದಾಳಿ ನಡೆಸಿದ್ದು–ಈ ಪ್ರತಿಕ್ರಿಯೆಗಳೆಲ್ಲ ಪ್ರಕರಣ ಗಂಭೀರ ಸ್ವರೂಪವನ್ನು ತಾಳುತ್ತಿದೆ ಎಂಬುದನ್ನು ಸೂಚಿಸುತ್ತಿವೆ. ಕೊಲೆಗಡುಕರನ್ನು ರಕ್ಷಿಸಲು ಸೂಕ್ಷ್ಮ ಸಾಕ್ಷಿಗಳನ್ನು ನಾಶ ಮಾಡಲಾಗಿದೆ ಎಂಬ ಜನರ ಅನುಮಾನಗಳನ್ನು ತಳ್ಳಿ ಹಾಕಿರುವ ಪೊಲೀಸರು ಹಂತಕರನ್ನು ಗಲ್ಲಿಗೇರಿಸಲು ಸ್ವತಃ ತಾವೇ ಸಾಕ್ಷ್ಯಗಳನ್ನು ಸಂಗ್ರಹಿಸಿ ನ್ಯಾಯಾಲಯದಲ್ಲಿ ಪ್ರಸ್ತುತಪಡಿಸುತ್ತೇವೆ ಎಂಬ ಆಶ್ವಾಸನೆಯನ್ನೂ ಕೊಲೆಯಾದ ಹೆಣ್ಣು ಮಗಳ ತಂದೆಗೆ ನೀಡಿದ್ದಾರೆ ಎಂದು ಪತ್ರಿಕೆಗಳು ವರದಿ ಮಾಡಿವೆ. ಅಧಿಕಾರ ರಾಜಕಾರಣದೊಡನೆ ತಳುಕು ಹಾಕಿಕೊಂಡಿರುವ ಈ ಪ್ರಕರಣ ಸಹಜವಾಗಿಯೇ ಅನೇಕ ಪ್ರಶ್ನೆಗಳನ್ನೂ ಹುಟ್ಟುಹಾಕಿದೆ. ಏಕೆಂದರೆ ಇದು ಯಾವುದೋ ಒಂದು ಉದ್ಯೋಗ ಸ್ಥಳದಲ್ಲಿ ಹೆಣ್ಣುಮಗಳೊಬ್ಬಳ ಮೇಲೆ ನಡೆದಿರುವ ಅಪರೂಪದ ಘಟನೆಯೇನಲ್ಲ. ದಿನನಿತ್ಯವೂ ದೇಶದ ನಾನಾ ಕಡೆಗಳ ಪ್ರವಾಸಿ ತಾಣಗಳಲ್ಲಿ ಅತಿಥಿಗಳನ್ನು ಸೆಳೆಯಲು ಲೈಂಗಿಕ ಸೇವೆಗಳ ಆಕರ್ಷಣೆಯನ್ನು ಒಡ್ಡಲಾಗುತ್ತದೆ ಎಂದು ಅಧ್ಯಯನ ಆಧಾರಿತ ವರದಿಗಳು ತಿಳಿಸಿವೆ.

ಇಂಥ ಅನೇಕ ಘಟನೆಗಳು ಹೊರ ಪ್ರಪಂಚದ ಗಮನಕ್ಕೆ ಬರುವುದೂ ಇಲ್ಲ. ಬಂದರೂ ಹಣ, ಅಧಿಕಾರ, ಪ್ರಭಾವ–ಇವುಗಳೆಲ್ಲಾ ಇದ್ದರೆ ಅವುಗಳನ್ನು ಮುಚ್ಚಿ ಹಾಕಬಹುದು ಎನ್ನುವುದೂ ತಿಳಿದಿರುವ ವಿಚಾರವೇ. ಆದ್ದರಿಂದಲೇ ಉತ್ತರಾಖಂಡದ ಈ ಘಟನೆಗೆ ಕಾರಣರಾದವರಿಗೆ ತಕ್ಕ ಶಿಕ್ಷೆ ಆಗುತ್ತದೆ ಎಂಬುದರ ಬಗ್ಗೆ ಅನುಮಾನಗಳು ವ್ಯಕ್ತವಾಗುತ್ತಿವೆ.


ರೆಸಾರ್ಟ್ ಅಥವಾ ಹೋಂಸ್ಟೇ ಎಂದು ಕರೆಯಲ್ಪಡುವ ಪ್ರವಾಸೋದ್ಯಮ ಇಂದು ಭಾರತದಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿರುವಂಥ ಉದ್ಯಮ. ಇಂಥ ಅನೇಕ ಪ್ರವಾಸಿ ತಾಣಗಳು ಮೋಜು–ಮಸ್ತಿಯ ಕೇಂದ್ರಗಳಾಗಿವೆ. ಇಂಥ ಪ್ರವಾಸಿ ತಾಣಗಳಲ್ಲಿ ಕೆಲಸ ಮಾಡುತ್ತಿರುವ ಅನೇಕ ಹೆಣ್ಣು ಮಕ್ಕಳು ಹೊರದೇಶಗಳಿಂದ ಅಥವಾ ಹೊರ ಪ್ರಾಂತ್ಯಗಳಿಂದ ಬಂದವರಾಗಿದ್ದು ಅವರಿಗೆ ವಸತಿ ವ್ಯವಸ್ಥೆಯನ್ನು ಅಲ್ಲಿಯೇ ಕಲ್ಪಿಸಲಾಗಿರುತ್ತದೆ. ತಮ್ಮ ಉದ್ಯೋಗಿಗಳ ಸುರಕ್ಷತೆಯ ಬಗ್ಗೆ ಕಾಳಜಿ ಇರುವ ಮಾಲೀಕರು, ಅವರ ವಾಸಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಿರುವಂಥ ಅನೇಕ ನಿದರ್ಶನಗಳೂ ಇವೆ. ಆದರೆ ಉತ್ತರಾಖಂಡದ ರೆಸಾರ್ಟ್ ಮಾಲೀಕನಂಥ ಮಾನವ ರೂಪಿ ಧೂರ್ತರು ಅನೇಕರಿದ್ದಾರೆ. ಇಂಥ ಧನ ದಾಹಿಗಳ ಜಾಲದಲ್ಲಿ ಸಿಲುಕಿ ತಮ್ಮ ಪ್ರಾಣವನ್ನು ಕಳೆದುಕೊಂಡ ಹೆಣ್ಣು ಮಕ್ಕಳೂ ಇದ್ದಾರೆ, ಅವರು ನೀಡುವ ಹಿಂಸೆಯನ್ನು ಪ್ರಶ್ನಿಸಿ–ಪ್ರತಿಭಟಿಸುವ ಶಕ್ತಿ ಇಲ್ಲದೆ ಅಸಹನೀಯವಾದ ಬದುಕನ್ನು ನಡೆಸುತ್ತಿರುವವರೂ ಇದ್ದಾರೆ. ಇಂದು ಉದ್ಯೋಗ ರಂಗದ ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರ ಭಾಗವಹಿಸುವಿಕೆ ಹೆಚ್ಚಾಗುತ್ತಿರುವುದು ಹೆಮ್ಮೆಪಡುವಂಥ ವಿಚಾರವೇ ಸರಿ. 'ಉದ್ಯೋಗಂ ಪುರುಷ ಲಕ್ಷಣಂ' ಎಂಬಂಥ ಪುರುಷ ಪ್ರಧಾನ ಮೌಲ್ಯಾಚರಣೆಗಳಿಗೆ ಹೆಣ್ಣು ಮಕ್ಕಳು ಸವಾಲನ್ನು ಒಡ್ಡಿದ್ದಾರೆ. ಆದರೆ ಪುರುಷ ಪರಮಾಧಿಕಾರದ ಪ್ರದರ್ಶನ ಅನೇಕ ಉದ್ಯೋಗ ಸ್ಥಳಗಳಲ್ಲಿ ಹೊಸ ಹೊಸ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಇದರ ಅತೀ–ಮಾನುಷ ರೂಪ ವ್ಯಕ್ತವಾಗುವುದು ಹೆಣ್ಣು ಮಕ್ಕಳ ದೇಹದ ಮೇಲೆ ನಡೆಯುವ ಆಕ್ರಮಣದ ಮೂಲಕ. ಅನೇಕ ಉದ್ಯೋಗ ಸ್ಥಳಗಳಲ್ಲಿ ನಡೆಯುವ ಲೈಂಗಿಕ ದೌರ್ಜನ್ಯಗಳು ಹೊರ ಪ್ರಪಂಚದ ದೃಷ್ಟಿಗಾಗಲೀ ಗಮನಕ್ಕಾಗಲಿ ಬರುವುದೇ ಇಲ್ಲ. ಹೆಣ್ಣು ಮನೆಯಿಂದ ಹೊರಗೆ ಕೆಲಸಕ್ಕೆ ಬಂದ ಮೇಲೆ ಇವೆಲ್ಲವನ್ನೂ ಸಹಿಸಿಕೊಳ್ಳಬೇಕು, ತನ್ನ ಮರ್ಯಾದಾ ರಕ್ಷಣೆಯ ಬಗ್ಗೆ ಅಷ್ಟೊಂದು ಕಾಳಜಿ ಇದ್ದರೆ ಮನೆಯೆಂಬ ಭದ್ರಕೋಟೆಯಲ್ಲಿಯೇ ಇರಬೇಕಾಗಿತ್ತು ಎಂಬ ವಿತಂಡ ವಾದವನ್ನು ಮಂಡಿಸುವವರು ಇಂದಿಗೂ ಇದ್ದಾರೆ. ಉದ್ಯೋಗ ಸ್ಥಳಗಳಲ್ಲಿ ಹೆಣ್ಣು ಮಕ್ಕಳು ಹಾಗೂ ಮಕ್ಕಳ ಮೇಲೆ ನಡೆಯುವ ದೌರ್ಜನ್ಯವನ್ನು ಅಪರಾಧವೆಂದು ಪರಿಗಣಿಸಿ ಅದನ್ನು ಕಾನೂನಿನ ಚೌಕಟ್ಟಿನೊಳಗೆ ತಂದು ತಪ್ಪಿತಸ್ಥರಿಗೆ ಶಿಕ್ಷೆಯನ್ನು ವಿಧಿಸಿ ಇಂಥ ಕೃತ್ಯಗಳನ್ನು ನಾವು ಸಹಿಸುವುದಿಲ್ಲ ಎಂಬ ಸಂದೇಶವನ್ನು ಸಮಾಜಕ್ಕೆ ಕಳುಹಿಸಬೇಕು ಎಂಬ ಭಾವನೆ ಬಂದದ್ದು ಕೇವಲ ಎರಡು ದಶಕಗಳ ಹಿಂದಷ್ಟೇ. ಇದಕ್ಕೆ ಕಾರಣವಾದದ್ದು ರಾಜಸ್ಥಾನದ ಭತೇರಿ ಎಂಬ ಗ್ರಾಮದಲ್ಲಿ ಭಾವರಿದೇವಿ ಎಂಬ 40 ವರ್ಷದ ಮಹಿಳೆಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರವನ್ನು ಸ್ವತಃ ಆಕೆಯೇ ಪ್ರತಿಭಟಿಸಿ, ತನ್ನ ಮೇಲೆ ನಡೆದ ಅತ್ಯಾಚಾರಕ್ಕೆ ಕಾನೂನು ರೀತ್ಯಾ ಶಿಕ್ಷೆಯನ್ನು ಕೊಡಿಸಲೇಬೇಕೆಂದು ತೊಟ್ಟ ಪಣ ಹಾಗೂ ಈ ಪ್ರಕರಣದಿಂದ ಹೊರಹೊಮ್ಮಿದ ವಿಶಾಖಾ ಮಾರ್ಗದರ್ಶಕ ಸೂಚಿಗಳು. ಕಳೆದ ಶತಮಾನದ ಅಂತ್ಯದಲ್ಲಿ ರಾಜಸ್ಥಾನದ ಗ್ರಾಮೀಣ ಪ್ರದೇಶಗಳಲ್ಲಿ ವ್ಯಾಪಕವಾಗಿದ್ದ ಬಾಲ್ಯವಿವಾಹಗಳನ್ನು ತಡೆಗಟ್ಟಲು ರಾಜ್ಯ ಸರ್ಕಾರ ಆರಂಭಿಸಿದ್ದ 'ಸಾಥಿನ್' ಎಂಬ ಕಾರ್ಯಕ್ರಮದಲ್ಲಿ ಕೆಲಸ ಮಾಡುತ್ತಿದ್ದ ಭಾವರಿದೇವಿ ತನ್ನ ಗ್ರಾಮದಲ್ಲಿ ನಡೆಯಬೇಕಾಗಿದ್ದ ಒಂಬತ್ತು ತಿಂಗಳ ಹೆಣ್ಣು ಮಗುವಿನ ವಿವಾಹವನ್ನು ತಡೆಗಟ್ಟಲು ಮಾಡಿದ ಪ್ರಯತ್ನ ಆ ಕುಟುಂಬದ ಆಕ್ರೋಶಕ್ಕೆ ಕಾರಣವಾಯಿತು. ಆಕೆಯ ಮೇಲೆ ಹಗೆ ಸಾಧಿಸಲು ಗ್ರಾಮದ ಜಾತಿ ಮತ್ತು ವರ್ಗ ಶ್ರೇಣಿಯಲ್ಲಿ ಮೇಲ್ ಸ್ತರಗಳಲ್ಲಿದ್ದ ಗುಜ್ಜರ್ ಜಾತಿಯ ಐವರು ಪುರುಷರು, ತನ್ನ ಪತಿಯೊಡನೆ ಕುಟುಂಬದ ಕೃಷಿ ಭೂಮಿಯಲ್ಲಿ ಆಕೆ ಕೆಲಸದಲ್ಲಿ ತೊಡಗಿದ್ದಾಗ ಆತನ ಮೇಲೆ ಆಕ್ರಮಣ ಮಾಡಿ, ನಂತರ ಕಟ್ಟಿ ಹಾಕಿ, ಭಾವರಿದೇವಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿದರು. ಇದರಿಂದ ಧೃತಿಗೆಡದ ಆಕೆ ಆರಕ್ಷಕ ಠಾಣೆಗೆ ಹೋದಾಗ ಅಲ್ಲಾಗಲೀ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಿ ಆಕೆಯ ಮೇಲೆ ನಡೆದಿದ್ದ ಅತ್ಯಾಚಾರವನ್ನು ಸಾಬೀತುಪಡಿಸಬೇಕಾದ ಆಸ್ಪತ್ರೆಯಲ್ಲಾಗಲೀ ಸೂಕ್ತ ಪ್ರತಿಕ್ರಿಯೆ ದೊರೆಯಲಿಲ್ಲ. ಕೊನೆಗೆ ನ್ಯಾಯ ಒದಗಿಸಬೇಕಾದ ಜಿಲ್ಲಾ ನ್ಯಾಯಾಲಯ ಕೂಡ ಅಪರಾಧಿಗಳನ್ನು ಬಂಧಮುಕ್ತರನ್ನಾಗಿಸಿದ್ದು ಈ ಪ್ರಕರಣದಲ್ಲಿ ನ್ಯಾಯ ದೊರೆಯುವುದಿಲ್ಲ ಎಂಬ ಸ್ಥಿತಿ ತಲುಪಿದಾಗ ನಾಗರಿಕ ಸಮಾಜ ತಲೆ ತಗ್ಗಿಸುವಂತಾಯಿತು. ಭಾವರಿದೇವಿಯ ಮೇಲೆ ನಡೆದ ಲೈಂಗಿಕ ದೌರ್ಜನ್ಯಕ್ಕೆ ಕಾರಣವಾದದ್ದು ಆಕೆ ತನ್ನ ಕೆಲಸವನ್ನು ನಿರ್ವಹಿಸುವಾಗಲಾದ್ದರಿಂದ ಮಹಿಳೆಯರಿಗೆ ಉದ್ಯೋಗ ಸ್ಥಳಗಳಲ್ಲಿ ರಕ್ಷಣೆಯನ್ನು ನೀಡುವುದು ಸರ್ಕಾರ ಹಾಗೂ ಕಾನೂನಿನ ಜವಾಬ್ದಾರಿ ಎಂದು ವಿಶಾಖಾ ಎಂಬ ಹೆಸರಿನಲ್ಲಿ ಮಹಿಳಾ ಸಂಘಟನೆಗಳು ಸರ್ವೋಚ್ಚ ನ್ಯಾಯಾಲಯದಲ್ಲಿ ಸಂಯುಕ್ತವಾಗಿ ಹೂಡಿದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗೆ ಸ್ಪಂದಿಸಿದ ನ್ಯಾಯಾಲಯ ಮಹಿಳೆಯರಿಗೆ ಉದ್ಯೋಗ ಸ್ಥಳಗಳಲ್ಲಿ ಸೂಕ್ತ ರಕ್ಷಣೆ ನೀಡಲು ಮಾರ್ಗದರ್ಶಕ ಸೂಚಿಗಳನ್ನು ನೀಡಿತು. 1997ರಲ್ಲಿ ವಿಶಾಖಾ ಮಾರ್ಗದರ್ಶಕ ಸೂಚಿಗಳು ಎಂಬ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದ ಈ ನಿಯಮಾವಳಿಗಳು ಮಹಿಳಾ ಸಂಘಟನೆಗಳ ದೀರ್ಘ ಹೋರಾಟದ ಫಲವಾಗಿ 2013ರಲ್ಲಿ ಕಾಯಿದೆಯಾಗಿ ರೂಪಿತವಾಗಿವೆ. ಆದರೆ ಇಂದಿಗೂ ಭಾವರಿದೇವಿಯ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದವರಿಗೆ ಶಿಕ್ಷೆಯಾಗಿಲ್ಲ ಎಂಬುದು ಸಮಕಾಲೀನ ಸಮಾಜದಲ್ಲಿ ಮಹಿಳೆ ಹಾಗೂ ಮಾನವ ಹಕ್ಕುಗಳ ಬಗೆಗಿನ ನಿರ್ಲಕ್ಷ್ಯಕ್ಕೆ ಒಂದು ಸಾಕ್ಷಿಯಷ್ಟೇ. ಈಗ ಜಾರಿಗೆ ಬಂದಿರುವ ಕಾಯಿದೆಯೇನೋ ಉದ್ಯೋಗ ಸ್ಥಳಗಳಲ್ಲಿ ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳನ್ನು ಗಂಭೀರವಾಗಿ ಪರಿಗಣಿಸಿ ಇಂಥ ಘಟನೆಗಳಿಗೆ ಕಾರಣರಾದವರಿಗೆ ತಕ್ಕ ಶಿಕ್ಷೆಯನ್ನು ನೀಡಲು ತಳಹದಿಯನ್ನು ಹಾಕಿ ಕೊಟ್ಟಿದೆ. ಆದರೆ ಇದುವರೆಗಿನ ಅನುಭವಗಳು ತೋರಿರುವುದು ಶಿಕ್ಷೆಯಾದವರಿಗಿಂತ ತಪ್ಪಿಸಿಕೊಂಡವರೇ ಹೆಚ್ಚು ಎಂಬುದನ್ನು. ಎಲ್ಲಿಯವರೆಗೂ ಪ್ರಭಾವ ಹಾಗೂ ಅಧಿಕಾರ ವಲಯಗಳ ಹಸ್ತಕ್ಷೇಪಕ್ಕೆ ನಮ್ಮ ಸಮಾಜದಲ್ಲಿ ದಾರಿಗಳಿವೆಯೋ, ಅಲ್ಲಿಯವರೆಗೂ ದಬ್ಬಾಳಿಕೆ–ದೌರ್ಜನ್ಯಗಳು ಹೀಗೆಯೇ ಮುಂದುವರೆಯುತ್ತವೆ. ಒಂದೆರಡು ದಿನ ಪ್ರತಿಭಟನೆಗಳು ನಡೆದು ವಿಷಯ ಸಾರ್ವಜನಿಕರ ಮನಸ್ಸಿನಿಂದ ದೂರ ಸರಿದರೆ ಪ್ರಯೋಜನವಿಲ್ಲ, ಪ್ರಶ್ನೆಗಳು–ಪ್ರತಿಭಟನೆಗಳು ನಿರಂತರವಾಗಿ ಸಾಗಿದಾಗ ಮಾತ್ರ ಅನ್ಯಾಯಗಳಿಗೆ ಕೊನೆಯಾಗಬಹುದೇನೋ?

# ದೇವರಾಜ ಮಾರುಕಟ್ಟೆ ಮುಂದಿನ ಚಿಕ್ಕಗಡಿಯಾರ ವೇದಿಕೆಯಲ್ಲಿ ಖ್ಯಾತ ಶಹನಾಯ್ ವಾದಕ ಡಾ.ಎಸ್.ಬಲ್ಲೇಶ ಭಜಂತ್ರಿ ಕಾರ್ಯಕ್ರಮ

- ಸಂತೆಯ ಸದ್ದಲ್ಲಿ ಸಂಗೀತ ಆಲಿಸಲಾದೀತೆ?: ಸಂಗೀತಾಸಕ್ತರ ಆಕ್ರೋಶ
- ಇಂತಹ ಮಹಾನ್ ಕಲಾವಿದರ ಬಗ್ಗೆ ಕನಿಷ್ಠ ಪರಿಜ್ಞಾನ ಇಲ್ಲದ ಅಧಿಕಾರಿ ವರ್ಗ







> ಈ ಬಾರಿ ದಸರಾ ಕಾರ್ಯಕ್ರಮಗಳಿಗೆ ಪ್ರಬುದ್ಧ ಕಲಾವಿದರನ್ನೇ ಆಯ್ಕೆ ಮಾಡಿದ್ದೇವೆ ಶಹನಾಯ್ ವಾದಕರಾದ ಬಲ್ಲೇಶ ಭಜಂತ್ರಿ ಅವರು ಮಹಾನ್ ಕಲಾವಿದರು. ಅವರ ಶಹನಾಯ್ ವಾದನದ ಸವಿ ಹೆಚ್ಚೆಚ್ಚು ಜನರಿಗೆ ತಲುಪಬೇಕೆಂಬ ಕಾರಣದಿಂದ ಚಿಕ್ಕಗಡಿಯಾರ ವೇದಿಕೆಯಲ್ಲಿ ಏರ್ಪಡಿಸಲಾಗಿದೆ. ಶಹನಾಯ್ ವಾದನಕ್ಕೆ ಅಗತ್ಯವಿರುವ ಎಲ್ಲಾ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ಮಾಡಲಾಗಿದೆ. ಇದೇ ಮೊದಲ ಬಾರಿಗೆ ಚಿಕ್ಕಗಡಿಯಾರ ಪ್ರದೇಶದಲ್ಲಿ 500 ಕುರ್ಚಿಗಳ ವ್ಯವಸ್ಥೆ ಮಾಡಿ ಸಂಗೀತಾಸಕ್ತರು ಆಸೀನರಾಗಿ ಸಂಗೀತ ಆಲಿಸಲು ವ್ಯವಸ್ಥೆ ಕಲ್ಪಿಸಲಾಗಿದೆ. ಈ ಭಾಗದಲ್ಲೇ ಹೆಚ್ಚೆಚ್ಚು ಜನ ಬರುವುದರಿಂದ ಮಹಾನ್ ಕಲಾವಿದರ ಸಂಗೀತವು ಎಲ್ಲರನ್ನೂ ತಲುಪುತ್ತದೆ ಎಂಬುದೇ ನಮ್ಮ ಉದ್ದೇಶ.
>
> -ನಿರ್ಮಲಾ ಮಠಪತಿ, ಸಹಾಯಕ ನಿರ್ದೇಶಕಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕಾರ್ಯಾಧ್ಯಕ್ಷೆ, ದಸರಾ ಸಾಂಸ್ಕೃತಿಕ ಉಪಸಮಿತಿ

> ಇಂದು(ಸೆ.29) ರಾತ್ರಿ 8 ಗಂಟೆಯಿಂದ 9.30ರವರೆಗೆ ಮೈಸೂರಿನ ಚಿಕ್ಕಗಡಿಯಾರ ವೇದಿಕೆಯಲ್ಲಿ ಪ್ರಸಿದ್ಧ ಶಹನಾಯ್ ವಾದಕರಾದ ಡಾ. ಎಸ್.ಬಲ್ಲೇಶ ಭಜಂತ್ರಿ ಅವರಿಂದ ಶಹನಾಯ್ ವಾದನ ಕಾರ್ಯಕ್ರಮ ಏರ್ಪಡಿಸಲಾಗಿದೆ

ಮೈಸೂರು, ಸೆ.28– ಈ ಬಾರಿ ದಸರಾದಲ್ಲಿ ಅಧಿಕಾರಿಗಳು ಎಡವಟ್ಟಿನ ಮೇಲೆ ಎಡವಟ್ಟು ಮಾಡುವ ಮೂಲಕ ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗುತ್ತಿದ್ದಾರೆ. ಅಧಿಕಾರಿಗಳ ಅವಾಂತರದಿಂದ ಮಹಾನ್ ಕಲಾವಿದರು ಮತ್ತು ಅವರ ಕಲೆಗೆ ಅಪಮಾನವಾಗಿದೆ.

ಈ ಮಹಾನ್ ಕಲಾವಿದರ ಸಮಿತಿ ಆಯ್ಕೆ ಮಾಡಿರುವ ಬಗ್ಗೆ ಸಂಗೀತ ಆಸಕ್ತರಿಂದ ಅಪಾರ ಮೆಚ್ಚುಗೆ ವ್ಯಕ್ತವಾಗಿದೆ. ಆದರೆ ಆ ಕಲಾವಿದರ ಕಾರ್ಯಕ್ರಮಕ್ಕೆ ಆಯ್ಕೆ ಮಾಡಿರುವ ಸ್ಥಳ ಆಕ್ರೋಶಕ್ಕೆ ಕಾರಣವಾಗಿದೆ. ಪದ್ಮಶ್ರೀ ಪುರಸ್ಕೃತ, ಪ್ರಸಿದ್ಧ ಶಹನಾಯ್ ವಾದಕರಾದ ಪಂಡಿತ್ ಡಾ. ಎಸ್. ಬಲ್ಲೇಶ ಭಜಂತ್ರಿ ಅವರ ಕಾರ್ಯಕ್ರಮವನ್ನು ದೇವರಾಜ ಮಾರುಕಟ್ಟೆಗೆ ಹೊಂದಿಕೊಂಡಂತಿರುವ ಚಿಕ್ಕ ಗಡಿಯಾರ ವೇದಿಕೆಯಲ್ಲಿ ಆಯೋಜಿಸಿರುವುದು ಕಾರ್ಯಕ್ರಮ ಆಯೋಜಕರ ಬುದ್ಧಿಮಟ್ಟವನ್ನು ಎತ್ತಿತೋರಿಸುವಂತಿದೆ ಎಂದು ಹಲವರು ಕಿಡಿಕಾರಿದ್ದಾರೆ.

ಶಹನಾಯ್ ವಾದನ ಸಂಗೀತಾಸಕ್ತರ ಬಹು ಪ್ರಿಯವಾದ ಸಂಗೀತ ಪ್ರಾಕಾರ. ಈ ಕಾರ್ಯಕ್ರಮವನ್ನು ಪ್ರಶಾಂತವಾದ ವಾತಾವರಣದಲ್ಲಿ ಏರ್ಪಡಿಸಿದರೆ ಮಾತ್ರ ಆ ಒಂದು ಕಲೆ ಆಸ್ವಾದಿಸಬಹುದು. ಜೊತೆಗೆ ಆ ಕಲೆಗೂ ಒಂದು ಗೌರವ ಬರುತ್ತದೆ. ಆದರೆ ಆಯೋಜಕರು ಮಾರ್ಕೆಟ್ ಮುಂದೆ ಆಯೋಜಿಸಿರುವುದು ಸಂತೆಯಲ್ಲಿ ಸಂಗೀತ ನುಡಿಸಿದಂತೆ ಆಗುತ್ತದೆ ಎಂಬುದು ಬಹು ಜನರ ಆಕ್ರೋಶವಾಗಿದೆ. ಇಂತಹ ಅದ್ಭುತ ಕಲೆಯನ್ನು ಜನದಟ್ಟಣೆ ಇರುವಂತಹ ವೃತ್ತದಲ್ಲಿ ಏರ್ಪಡಿಸಿರುವುದರಿಂದ ಈ ಸಂಗೀತ ಆಲಿಸಲು ಸಂಗೀತಾಸಕ್ತರಿಗೆ ತೀವ್ರ ಮುಜುಗರವನ್ನುಂಟು ಮಾಡುತ್ತದೆ. ಅಲ್ಲದೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರುಗಳಿಸಿರುವ ಶಹನಾಯ್ ವಾದಕರಾದ ಡಾ. ಎಸ್. ಬಲ್ಲೇಶ ಭಜಂತ್ರಿ ಅವರಿಗೂ ಕೂಡ ಕಾರ್ಯಕ್ರಮವನ್ನು ಸುಸೂತ್ರವಾಗಿ ನೀಡಲು ತೊಡಕುಂಟಾಗಿ ಅವರೂ ಕೂಡ ತೀವ್ರ ಮುಜುಗರಕ್ಕೊಳಗಾಗಬಹುದು ಎಂಬುದೂ ಸಂಗೀತಾಸಕ್ತರ ಆತಂಕವಾಗಿದೆ.

**ಯಾರು ಡಾ. ಬಲ್ಲೇಶ್ ಭಜಂತ್ರಿ:** ಪ್ರಸಿದ್ಧ ಶಹನಾಯ್ ವಾದಕರಾದ ಭಾರತರತ್ನ ದಿ.ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರ ಅತ್ಯಂತ ಪ್ರಸಿದ್ಧ ಶಿಷ್ಯರಲ್ಲಿ ಡಾ. ಎಸ್. ಬಲ್ಲೇಶ ಭಜಂತ್ರಿ ಕೂಡ ಒಬ್ಬರು. ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರ ಶ್ರದ್ಧಾಂಜಲಿ ಗೋಷ್ಠಿ ಚೆನ್ನೈನಲ್ಲಿ ನಡೆದಾಗ ಇವರು ಶಹನಾಯ್ ನುಡಿಸಿ, ಗಮನ ಸೆಳೆದಿದ್ದರು. 2022ರಲ್ಲಿ ಪದ್ಮಶ್ರೀ ಪ್ರಶಸ್ತಿಯನ್ನು ರಾಷ್ಟ್ರಪತಿಗಳಿಂದ ಸ್ವೀಕರಿಸಿದ್ದರು. ಬಿಸ್ಮಿಲ್ಲಾ ಖಾನ್ ಅವರ ನಂತರ ಪದ್ಮಶ್ರೀ ಪ್ರಶಸ್ತಿ ಪಡೆದ ಎರಡನೆಯ ಶಾಸ್ತ್ರೀಯ ಸಂಗೀತಗಾರರೆಂಬ ಹಿರಿಮೆ ಇವರಿಗಿದೆ.

ಶಹನಾಯ್ ವಾದನವನ್ನು ವಿವಿಧ ಶೈಲಿಗಳಲ್ಲಿ ನುಡಿಸುವ ಮೂಲಕ ಹೆಸರುವಾಸಿಯಾದವರು ಡಾ. ಎಸ್.ಬಲ್ಲೇಶ ಭಜಂತ್ರಿ, ಬನಾರಸ್ ಘರಾನಾ ಶಹನಾಯ್ ವಾದನದಲ್ಲಿ ಪರಿಣಿತರು. ರೀಡೆಡ್ ವುಡ್‌ವಿಂಡ್ ವಾದ್ಯದಲ್ಲಿ ಶಹನಾಯ್ ಅನ್ನು ಜನಪ್ರಿಯಗೊಳಿಸಿದ ಕೀರ್ತಿಯೂ ಇವರದ್ದಾಗಿದೆ. ಕನ್ನಡ, ತೆಲುಗು, ತಮಿಳು, ಮಲಯಾಳಂ, ಹಿಂದಿ, ಬೆಂಗಾಲಿ, ಗುಜರಾತಿ, ಮರಾಠಿ ಹಾಗೂ ರಾಜಸ್ಥಾನಿ ಮುಂತಾದ ಭಾಷೆಗಳ ಅನೇಕ ಚಲನ ಚಿತ್ರಗಳಲ್ಲಿ ಇವರು ಶಹನಾಯ್ ನುಡಿಸಿದ್ದಾರೆ. ಪ್ರಸಿದ್ಧ ಸಂಗೀತ ರಚನೆಕಾರರಾದ ಎಂ.ಎಸ್. ವಿಶ್ವನಾಥನ್, ಜಿ.ಕೆ.ವೆಂಕಟೇಶ್, ಇಳಯರಾಜ, ಎ.ಆರ್. ರೆಹಮಾನ್ ಸೇರಿದಂತೆ ಅನೇಕ ಸಂಗೀತ ನಿರ್ದೇಶಕರ ಸಂಗೀತಕ್ಕೆ ಇವರು ಶಹನಾಯ್ ನುಡಿಸುವ ಮೂಲಕ ಆಯಾ ಚಿತ್ರಗಳ ಸಂಗೀತವನ್ನು ಉತ್ತಮಪಡಿಸಿದ್ದಾರೆ.

ಹಲವಾರು ಭಾಷೆಗಳಲ್ಲಿ ಸುಮಾರು 45,000 ಚಲನಚಿತ್ರ ಗೀತೆಗಳಿಗೆ ಶಹನಾಯ್ ನುಡಿಸಿದ ಕೀರ್ತಿಯೂ ಇವರದ್ದು. ಪ್ರಸಾರ ಭಾರತಿ (ಆಲ್ ಇಂಡಿಯಾ ರೇಡಿಯೋ) ಮತ್ತು ದೂರದರ್ಶನಕ್ಕಾಗಿ ಹಲವಾರು ಬಾರಿ ಶಹನಾಯ್ ನುಡಿಸಿದ್ದಾರೆ. ತಮಿಳುನಾಡಿನ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಕಲೈಮಾಮಣಿ'ಗೆ ಭಾಜನರಾಗಿದ್ದಾರೆ. ಕರ್ನಾಟಕ ಸಂಗೀತ ನಾಟಕ ಅಕಾಡೆಮಿಯಿಂದ ಕೊಡ ಮಾಡುವ 'ಕರ್ನಾಟಕ ಕಲಾಶ್ರೀ' ಪ್ರಶಸ್ತಿ ಪಡೆದಿದ್ದಾರೆ. 'ಭೀವರ್‌ಸೇನ್ ಸಮ್ಮಾನ್' ಅಂತರರಾಷ್ಟ್ರೀಯ ಪ್ರಶಸ್ತಿಗೂ ಭಾಜನರಾಗಿದ್ದಾರೆ. ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯವು ಇವರಿಗೆ ಡಿ.ಲಿಟ್ ಪದವಿ ಪ್ರಧಾನ ಮಾಡಿ, ಗೌರವಿಸಿದೆ.

ಹಿನ್ನೆಲೆ ಗಾಯಕ ಕೆ.ಜೆ.ಜೇಸುದಾಸ್, ಎಸ್.ಜಾನಕಿ, ಎಸ್.ಪಿ.ಬಾಲಸುಬ್ರಹ್ಮಣ್ಯಂ, ಇಳಯರಾಜ, ಎ.ಆರ್.ರೆಹಮಾನ್ ಮುಂತಾದವರು ಹಾಡಿದ ಹಾಡುಗಳಿಗೆ ಇವರ ಶಹನಾಯ್ ವಾದನ ಮೆರುಗು ನೀಡಿದೆ.

ಇಂತಹ ಮಹಾನ್ ಕಲಾವಿದರ ಕಾರ್ಯಕ್ರಮವನ್ನು ಅರಮನೆ ಆವರಣ ಇಲ್ಲವೆ ಗಾನಭಾರತಿಯಂತಹ ಪ್ರಶಸ್ತ ಸ್ಥಳಗಳಲ್ಲಿ ಆಯೋಜಿಸಬೇಕಾಗಿತ್ತು. ಆದರೆ ಒಂದು ಮಾರುಕಟ್ಟೆಯ ಮುಂದೆ, ಸದಾ ಜನದಟ್ಟಣೆ, ಗದ್ದಲದಿಂದ ಕೂಡಿದ ವೃತ್ತದಲ್ಲಿ ಆಯೋಜಿಸಲಾಗಿದೆ ಎಂದು ಸಂಗೀತಾಸಕ್ತರು ಬೇಸರ ವ್ಯಕ್ತಪಡಿಸಿದ್ದಾರೆ.

ಕಾರ್ಯಕ್ರಮಕ್ಕೆ ನಿಗದಿಪಡಿಸಿರುವ ಸ್ಥಳ ಮಾತ್ರವಲ್ಲ, ಸಮಯವೂ ಸರಿಯಿಲ್ಲ. ರಾತ್ರಿ 8ರಿಂದ 9.30ರವರೆಗೆ ನಿಗಧಿಪಡಿಸಲಾಗಿದೆ. ವಯಸ್ಸಾಗಿರುವ ಸಂಗೀತಾಸಕ್ತರು ಈ ಸಮಯದಲ್ಲಿ ಕಾರ್ಯಕ್ರಮಕ್ಕೆ ಬರುವುದು ಸೂಕ್ತವೇ ಎಂಬುದನ್ನು ಆಯೋಜಕರು ಯೋಚಿಸಬೇಕಾಗಿತ್ತು. ಒಂದು ವೇಳೆ ಮಳೆ ಬಂದುಬಿಟ್ಟರೆ ಕಾರ್ಯಕ್ರಮ ಹೇಗೆ ನಡೆಸಲು ಸಾಧ್ಯ? ಕಾರ್ಯಕ್ರಮ ನೀಡುವ ವೇಳೆ ಜನರ ಗದ್ದಲ, ವಾಹನಗಳ ಓಡಾಟ, ಅವುಗಳ ಹಾರ್ನ್‌ಗಳ ನಡುವೆ ಸಂಗೀತ ಆಲಿಸಲಾದೀತೆ? ಕನಿಷ್ಠ ಪ್ರಜ್ಞೆ ಇಲ್ಲದಂತಹ ಅಧಿಕಾರಿ ವರ್ಗದಿಂದ ಇನ್ನೇನು ಹೆಚ್ಚಿನದನ್ನು ನಾವು ನಿರೀಕ್ಷಿಸಲಾಗದು! ಎಂಬುದು ಸಂಗೀತಾಸಕ್ತರ ಪ್ರಶ್ನೆಯಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

# ಪೊಲೀಸರ ಮೇಲೆ ಹಲ್ಲೆ ಪ್ರಕರಣ: ಪ್ರಮುಖ ಆರೋಪಿಗಳ ಬಂಧನ

ಚಾಮರಾಜನಗರ,ಸೆ.28–ನಗರದ ಸಂತೇಮರಳ್ಳಿ ವೃತ್ತದ ಬಳಿ ಪ್ರತಿಷ್ಠಾಪಿಸಿದ್ದ ಗನಪತಿ ವಿಸರ್ಜನೆ ವೇಳೆ ಪೊಲೀಸರ ಮೇಲೆ ಕಲ್ಲು ತೂರಿ ಹಲ್ಲೆ ನಡಿಸಿದ್ದ ಪ್ರಮುಖ ಆರೋಪಿಗಳನ್ನು ಪಟ್ಟಣ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ನಗರದ ಕೆ.ನಾಗಶೆಟ್ಟಿ ಉರುಫ್ ನಾಗರಾಜು ಹಾಗೂ ಅತನ ಮಗ ಮಹೇಂದ್ರ ಬಂಧಿತರು. ನಗರದ ಸಂತೇಮರಳ್ಳಿ ವೃತ್ತದ ಬಳಿ ಸೆ.18ರಂದು ರಾತ್ರಿ ಗಣಪತಿಯ ಮೆರವಣಿಗೆ ನಡೆಯುತ್ತಿತ್ತು. ರಾತ್ರಿ 10 ಗಂಟೆ ನಂತರವೂ ಧ್ವನಿವರ್ಧಕವನ್ನು ಜೋರಾಗಿ ಹಾಕಿಕೊಂಡು ಯುವಕರು ನೃತ್ಯ ಮಾಡುತ್ತಿದ್ದರು. ಇದನ್ನು ಪ್ರಶ್ನಿಸಿದ್ದ ಕರ್ತವ್ಯನಿರತ ಸಬ್‌ಇನ್ಸ್‌ಪೆಕ್ಟರ್ ಮಹದೇವ, ಎಎಸ್‌ಐ ಶಿವಶಂಕರ್ ಹಾಗೂ ವಾಹನ ಚಾಲಕ ಬಸವರಾಜು ಅವರ ಮೇಲೆ ಯುವಕರು ಕಲ್ಲು ತೂರಾಟ ನಡೆಸಿದ್ದರು. ಪರಿಣಾಮ ಪೊಲೀಸರು ಗಾಯಗೊಂಡಿದ್ದರು. ಈ ಬಗ್ಗೆ ಪಟ್ಟಣ ಪೊಲೀಸ್ ಠಾಣೆಯಲ್ಲಿ 15ಕ್ಕೂ ಹೆಚ್ಚು ಜನರ ವಿರುದ್ಧ ಪ್ರಕರಣ ದಾಖಲಾಗಿತ್ತು. ಘಟನೆ ನಡೆದ ದಿನದಂದು ಪೊಲೀಸರು ಐವರನ್ನು ಬಂಧಿಸಿದ್ದರು. ಮೊದಲ ಹಾಗೂ ಎರಡನೇ ಆರೋಪಿಗಳಾಗಿದ್ದ ನಾಗಶಟ್ಟಿ ಮತ್ತು ಮಹೇಂದ್ರ ತಲೆಮರೆಸಿಕೊಂಡಿದ್ದರು. ಇದೀಗ ಪೊಲೀಸರು ಇಬ್ಬರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಒಂದನೇ ಪುಟದಿಂದ

## ಪಿಎಫ್‌ಐ ಐದು ವರ್ಷ ನಿಷೇಧ

ತನ್ನ ಅಧಿಸೂಚನೆಯಲ್ಲಿ ನೀಡಿರುವ ವಿವರಣೆಯಲ್ಲಿ ಕರ್ನಾಟಕ ಸರ್ಕಾರದ ಶಿಫಾರಸು ಹಾಗೂ ಪ್ರವೀಣ್ ನೆಟ್ಟಾರು ಕೊಲೆಯನ್ನು ಉಲ್ಲೇಖಿಸಲಾಗಿದೆ. ಪಿಎಫ್‌ಐ ಜೊತೆಗಿದ್ದ ನ್ಯಾಷನಲ್ ಕಾನ್ಫೆಡರೇಷನ್ ಆಫ್ ಹ್ಯೂಮನ್ ರೈಟ್ಸ್ ಆರ್ಗನೈಸೇಷನ್, ನ್ಯಾಷನಲ್ ವುಮೆನ್ಸ್ ಫ್ರಂಟ್ ಕೂಡ ಕಾನೂನುಬಾಹಿರ ಸಂಸ್ಥೆ, ಜ್ಯೂನಿಯರ್ ಫ್ರಂಟ್, ಎಂಪವರ್ ಇಂಡಿಯಾ ಫೌಂಡೇಷನ್, ರಿಹಾಬ್ ಫೌಂಡೇಷನ್, ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ, ಆಲ್ ಇಂಡಿಯಾ ಇಮಾಮ್ ಕೌನ್ಸಿಲ್ ಕೂಡ ನಿಷೇಧ ಮಾಡಲಾಗಿದೆ.

**ರಾಜ್ಯದಲ್ಲಿ ಕಟ್ಟೆಚ್ಚರ; ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸರ ನಿಗಾ:** ಪಿಎಫ್‌ಐ ಸೇರಿದಂತೆ ಅದರ ಬೆಂಬಲಿತ ಸಂಘಟನೆಗಳನ್ನು ಕೇಂದ್ರ ಸರ್ಕಾರ ಐದು ವರ್ಷಗಳ ಕಾಲ ನಿಷೇಧಿಸಿದ ಬೆನ್ನಲ್ಲೇ ರಾಜ್ಯದಲ್ಲಿ ಕಟ್ಟೆಚ್ಚರ ವಹಿಸಲಾಗಿದೆ. ಕೊಡಗು, ಮಂಗಳೂರು, ಶಿವಮೊಗ್ಗ, ಬೆಂಗಳೂರು ನಗರದ ಕೆಲವು ಭಾಗ, ಚಿಕ್ಕಮಗಳೂರು, ಮೈಸೂರು ಸೇರಿದಂತೆ ಸೂಕ್ಷ್ಮ ಜಿಲ್ಲೆಗಳಲ್ಲಿ ಪೊಲೀಸರು ತೀವ್ರ ನಿಗಾ ವಹಿಸಲಿದ್ದಾರೆ ಎಂದು ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಹೇಳಿದ್ದಾರೆ. ಸೂಕ್ಷ್ಮ ಪ್ರದೇಶಗಳಲ್ಲಿ ಮುಂಜಾನೆ ಯಿಂದಲೇ ಹೆಚ್ಚಿನ ಪೊಲೀಸ್ ನಿಯೋಜನೆ ಮಾಡಲಾಗಿದೆ. ಅಷ್ಟೇ ಅಲ್ಲ, ರಾಜ್ಯದ ವಿವಿಧೆಡೆ ಸಂಘಟನೆಗಳ ಕಚೇರಿ ಹಾಗೂ ಅದರ ಪದಾಧಿಕಾರಿಗಳ ಬಗ್ಗೆ ಹೆಚ್ಚಿನ ನಿಗಾ ವಹಿಸಲಾಗಿದೆ. ಮುಂದಿನ ದಿನಗಳಲ್ಲಿ ಕರ್ನಾಟಕವೂ ಸೇರಿದಂತೆ ರಾಷ್ಟ್ರದ ವಿವಿಧೆಡೆ ಈ ಸಂಘಟನೆಗಳು ವಿಧ್ವಂಸಕ ಕೃತ್ಯ ನಡೆಸುತ್ತವೆ ಎಂಬ ಎನ್‌ಐಎ ವರದಿ ಆಧಾರದ ಮೇಲೆ ಕೇಂದ್ರ ಸರ್ಕಾರ ತಡರಾತ್ರಿ ಪಿಎಫ್‌ಐ ಸೇರಿದಂತೆ ಅದರ ಬೆಂಬಲಿತ ಸಂಘಟನೆಗಳನ್ನು ಮುಂದಿನ ಐದು ವರ್ಷಗಳ ಕಾಲ ನಿಷೇಧಿಸಿದೆ.

## ಕಚೇರಿಗಳ ಬಂದ್ ಮಾಡಲು ಆದೇಶ

ಸೇರಿದಂತೆ ಎಲ್ಲಾ ವಸ್ತುಗಳನ್ನು ಜಪ್ತಿ ಮಾಡಿದ ನಂತರ ಕಚೇರಿಗೆ ಬಂದ್ ಮಾಡಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಅದರಂತೆ ಬೆಂಗಳೂರು, ಮಂಗಳೂರು, ಹಾಸನ, ಕೋಲಾರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ತಹಸೀಲ್ದಾರರ ನೇತೃತ್ವದಲ್ಲಿ ಪಿಎಫ್‌ಐ ಕಚೇರಿಗಳನ್ನು ಸೀಲ್ ಮಾಡಲಾಯಿತು. ತಹಸೀಲ್ದಾರರು ಮತ್ತು ಪೊಲೀಸ್ ಅಧಿಕಾರಿಗಳು ಮಂಗಳೂರಿನ ಪಿಎಫ್‌ಐ ಕಚೇರಿ ಬಂದ್ ಮಾಡಲು ತೆರಳಿದಾಗ ಬೀಗ ಹಾಕಲಾಗಿತ್ತು. ಅಧಿಕಾರಿಗಳು ಬೀಗ ಮುರಿದು ಒಳ ನುಗ್ಗಲು ಮುಂದಾದಾಗ ಪಿಎಫ್‌ಐ ಮುಖ್ಯಸ್ಥನೋರ್ವ ತಾನೇ ಮುಂದೆ ಬಂದು ಕಚೇರಿಯ ಬೀಗ ತೆಗೆದಿದ್ದಾನೆ. ನಂತರ ಅಧಿಕಾರಿಗಳು ಕಚೇರಿಯಲ್ಲಿರುವ ನಗದು ಹಾಗೂ ದಾಖಲೆಗಳನ್ನು ಜಪ್ತಿ ಮಾಡಿ, ಕಚೇರಿಯನ್ನು ಬಂದ್ ಮಾಡಿದರು. ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಮೈಸೂರು ಜಿಲ್ಲಾಧಿಕಾರಿ ಡಾ. ಬಗಾದಿಗೌತಮ್, ಪಿಎಫ್‌ಐ ಹಾಗೂ ಅದರ ಅಂಗಸಂಸ್ಥೆಗಳ ಕಚೇರಿಗಳನ್ನು ಬಂದ್ ಮಾಡುವಂತೆ ದೇಶಾದ್ಯಂತ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಸೂಚಿಸಲಾಗಿದೆ. ಅದರಂತೆ ನಮಗೂ ಕೂಡ ಸೂಚನೆ ಬಂದಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ ಎಂದರು.

## ಮಾಧ್ಯಮಗಳ ಖಾತೆ ನಿರ್ಬಂಧ


ಪಿಎಫ್‌ಐಗೆ ಸಂಬಂಧಿಸಿದ ಯಾವುದೇ ವಿಷಯವನ್ನು ತೆಗೆದುಹಾಕಲು ಉಲ್ಲೇಖಗಳನ್ನು ಕಳುಹಿಸಲಾಗುತ್ತಿದೆ. ಪಿಎಫ್‌ಐ, ಸಿಎಫ್‌ಐ, ಆರ್‌ಐಎಫ್ ಮತ್ತು ಇತರ ಅಂಗಸಂಸ್ಥೆಗಳಿಗೆ ಲಿಂಕ್ ಮಾಡಲಾದ ಅಧಿಕೃತ ವಾಟ್ಸಾಪ್ ಖಾತೆಗಳನ್ನು ಮೇಲ್ವಿಚಾರಣೆ ಮಾಡಲಾಗುತ್ತಿದೆ ಮತ್ತು ಯಾವುದೇ ದೇಶ ವಿರೋಧಿ ಚಟುವಟಿಕೆ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು. PFI ಅಥವಾ ಅದರ ಯಾವುದೇ ಅಂಗಸಂಸ್ಥೆಗಳು ತಮ್ಮ ಚಟುವಟಿಕೆಗಳಿಗಾಗಿ ಯಾವುದೇ ಪ್ರಾಕ್ಸಿ ಸಾಮಾಜಿಕ ಮಾಧ್ಯಮ ಖಾತೆಗಳು ಅಥವಾ ವೆಬ್‌ಸೈಟ್‌ಗಳನ್ನು ತೆರೆದರೆ, ಅವುಗಳನ್ನು ಈಗ ನಿರ್ಬಂಧಿಸಬಹುದು ಎಂದು ಹಲವು ಖಾಸಗಿ ವಾಹಿನಿಗಳು ವರದಿ ಬಿತ್ತರಿಸಿವೆ.

## ಆಸ್ತಿ ಪರಿಶೀಲಿಸಿದ ಸಿಬಿಐ

ರೂ. 74.93 ಕೋಟಿ ಮೊತ್ತದ ಆಸ್ತಿಯನ್ನು ಅಕ್ರಮವಾಗಿ ಗಳಿಸಿದ್ದಾರೆ ಎನ್ನುವುದು ಸಿಬಿಐ ಆರೋಪವಾಗಿತ್ತು. ಮಾರ್ಚ್ 2020ರಿಂದ ಪ್ರಕರಣದ ತನಿಖೆ ನಡೆಸುತ್ತಿದ್ದ ಸಿಬಿಐ ಅಕ್ಟೋಬರ್ 5, 2020ರಲ್ಲಿ ದೆಹಲಿ, ಮುಂಬೈ ಸೇರಿದಂತೆ 14 ಸ್ಥಳಗಳಲ್ಲಿ ಏಕಕಾಲಕ್ಕೆ ದಾಳಿ ನಡೆಸಿ, ಕಂಪ್ಯೂಟರ್ ಹಾರ್ಡ್‌ಡಿಸ್ಕ್, ರೂ. 57 ಲಕ್ಷ ನಗದು ಸೇರಿದಂತೆ ಹಲವು ದಾಖಲೆಗಳನ್ನು ವಶಪಡಿಸಿಕೊಂಡಿತ್ತು. ನಂತರದ ದಿನಗಳಲ್ಲಿ ಜಾರಿ ನಿರ್ದೇಶನಾಲಯವು ಡಿ.ಕೆ.ಶಿ ಆಸ್ತಿ ಗಳಿಕೆ ಮತ್ತು ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆ ಆರಂಭಿಸಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ಹಲವು ಬಾರಿ ದೆಹಲಿಯ ಇಡಿ ಕಚೇರಿಯಲ್ಲಿ ಡಿ.ಕೆ.ಶಿ ವಿಚಾರಣೆ ಎದುರಿಸಿದ್ದರು. ಜೈಲಿಗೂ ಹೋಗಿದ್ದರು. ಪ್ರಸ್ತುತ ದೆಹಲಿಯ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿದೆ. ಏಪ್ರಿಲ್ 2013ರಿಂದ ಏಪ್ರಿಲ್ 2018ರ ಅವಧಿಯಲ್ಲಿ ಮಂತ್ರಿಯಾಗಿದ್ದಾಗ ಡಿ.ಕೆ.ಶಿ ಮತ್ತು ಕುಟುಂಬ ಸದಸ್ಯರು ಆದಾಯಕ್ಕೂ ಮೀರಿದ ಆಸ್ತಿ ಗಳಿಕೆ ಮಾಡಿದ್ದಾರೆ ಎನ್ನುವ ಆರೋಪ ಎದುರಿಸುತ್ತಿದ್ದಾರೆ. ಸಿಬಿಐ ದಾಖಲಿಸಿರುವ ಎಫ್‌ಐಆರ್ ಆಧಾರದಲ್ಲಿಯೇ ಇಡಿ ಸಹ ತನಿಖೆ ನಡೆಸುತ್ತಿದೆ.

## ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್

ಬೆಂಗಳೂರು, ಸೆ.28–ಪಿಎಫ್‌ಐ ನಿಷೇಧ ಮಾಡಿರುವ ಕೇಂದ್ರ ಸರ್ಕಾರದ ನಿರ್ಧಾರದ ಬಗ್ಗೆ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಅಲೋಕ್‌ಕುಮಾರ್, 'ಪರಿತ್ರಾಣಾಯ ಸಾಧೂನಾಂ ವಿನಾ ಶಾಯ ಚ ದುಷ್ಕೃತಾಮ್' ಎಂದು ಟ್ವೀಟ್ ಮಾಡಿದ್ದಾರೆ.



ದೇಶ ವಿರೋಧಿ, ಕಾನೂನು ಬಾಹಿರ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸ್ಟೂಡೆಂಟ್ಸ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ (ಸಿಮಿ) ನಿಷೇಧವಾಗಿ ಸರಿಯಾಗಿ 11 ವರ್ಷಗಳ ಬಳಿಕ ಪಿಎಫ್‌ಐ ನಿಷೇಧವಾಗಿದೆ. ಈ ಬಗ್ಗೆ ಅಲೋಕ್‌ಕುಮಾರ್ ಟ್ವೀಟ್ ಮಾಡಿದ್ದಾರೆ.

**ಟ್ವೀಟ್‌ನಲ್ಲಿ ಏನಿದೆ:** ಸಿಮಿ ಬ್ಯಾನ್ ಆಗಿದ್ದು 2001 ಸೆ. 26. ಪಿಎಫ್‌ಐ ಬ್ಯಾನ್ ಆಗಿದ್ದು 2022 ಸೆ. 28. ಇದು ಸೆಪ್ಟೆಂಬರ್ ರೆವಲ್ಯೂಷನ್ ಆಗಿದೆ. ಸಾಮಾನ್ಯ ಜನರ ಹಿತಾಸಕ್ತಿಗಳನ್ನು ಕಾಪಾಡಲು ಬದ್ಧ ಹಾಗೂ ಕಾನೂನು ಬಾಹಿರ ಚಟುವಟಿಕೆಗಳ ಮೇಲೆ ನಿರ್ದಾಕ್ಷಿಣ್ಯ ಕ್ರಮದ ಭರವಸೆ ಮೂಡಿದೆ. 'ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್' ಎಂದು ಟ್ವೀಟ್‌ನಲ್ಲಿ ತಿಳಿಸಿದ್ದಾರೆ. ಕರ್ನಾಟಕದಲ್ಲಿ ಎಡಿಜಿಪಿ ಅಲೋಕ್ ಕುಮಾರ್ ನೇತೃತ್ವದಲ್ಲಿ ಹಲವು ಜಿಲ್ಲೆಗಳಲ್ಲಿ ಪಿಎಫ್‌ಐ, ಎಸ್‌ಡಿಪಿಐ ನಾಯಕರ ಮನೆ ಮೇಲೆ ದಾಳಿ ನಡೆಸಲಾಗಿತ್ತು. ಈ ಹಿಂದೆ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಎನ್‌ಡಿಎ ಸರ್ಕಾರದ ಅವಧಿಯಲ್ಲಿ ಸಿಮಿ ಸಂಘಟನೆಗೆ ನಿಷೇಧ ಹೇರಲಾಗಿತ್ತು. ಇದಾದ ನಂತರ ಮತ್ತೊಂದು ಮುಖವಾಡವೇ ಪಿಎಫ್‌ಐ ಎಂಬುದು ಹಲವರ ಆರೋಪವಾಗಿತ್ತು.

## ಪಿಎಫ್‌ಐ ನಿಷೇಧ ಹಿನ್ನೆಲೆ: ಮೈಸೂರಲ್ಲಿ ಕಟ್ಟೆಚ್ಚರ

ಮೈಸೂರು,ಸೆ.28(ಆರ್‌ಕೆ)–ಕೇಂದ್ರ ಸರ್ಕಾರವು ಪಿಎಫ್‌ಐ ಸಂಘಟನೆಯನ್ನು ನಿಷೇಧಿಸಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಮೈಸೂರಲ್ಲಿ ವ್ಯಾಪಕ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಿ ಕಟ್ಟೆಚ್ಚರ ವಹಿಸಲಾಗಿದೆ.

ಈಗಾಗಲೇ ದಸರಾ ಬಂದೋಬಸ್ತ್ ಕರ್ತವ್ಯಕ್ಕೆಂದು ಒಂದೂವರೆ ಸಾವಿರಕ್ಕೂ ಹೆಚ್ಚು ಮಂದಿ ಮೈಸೂರಿಗೆ ಬಂದಿರುವ ಹೊರ ಜಿಲ್ಲೆಗಳ ಪೊಲೀಸರನ್ನು ಸ್ಥಳೀಯ ಸಿಬ್ಬಂದಿಗಳೊಂದಿಗೆ ಮೈಸೂರಿನ ಸೂಕ್ಷ್ಮ ಪ್ರದೇಶಗಳಿಗೆ ನಿಯೋಜಿಸಲಾಗಿದೆ. ನಗರ ಪೊಲೀಸ್ ಆಯುಕ್ತ ಚಂದ್ರಗುಪ್ತ ನಿರ್ದೇಶನದಂತೆ ಮೈಸೂರು ನಗರದ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಕಚೇರಿ ಕಟ್ಟಡ, ಧಾರ್ಮಿಕ ಕೇಂದ್ರಗಳು, ಪ್ರಮುಖ ವಾಣಿಜ್ಯ ಕೇಂದ್ರಗಳು, ಪ್ರವಾಸಿ ತಾಣಗಳ ಬಳಿ ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಿ, ತೀವ್ರ ನಿಗಾ ವಹಿಸಲಾಗಿದೆ. ಆಯಾ ಠಾಣಾ ವ್ಯಾಪ್ತಿಯಲ್ಲಿ ಗರುಡ, ಪಿಸಿಆರ್ ವಾಹನಗಳು ಪಿಕೆಟಿಂಗ್ ನಡೆಸಿ ಅಹಿತಕರ ಘಟನೆಗಳಾಗದಂತೆ ಎಚ್ಚರ ವಹಿಸುತ್ತಿರುವುದಲ್ಲದೆ, ಸಿಸಿ ಕ್ಯಾಮರಾ ದೃಶ್ಯಗಳನ್ನು ಕಂಟ್ರೋಲ್ ರೂಂ ಸಿಬ್ಬಂದಿ ವಾಚ್ ಮಾಡುತ್ತಿದ್ದಾರೆ. ಲಾಡ್ಜ್, ಹೋಟೆಲ್‌ನಲ್ಲಿ ವಾಸ್ತವ್ಯ ಹೂಡುತ್ತಿರುವವರ ಸಂಪೂರ್ಣ ಮಾಹಿತಿ ಸಂಗ್ರಹಿಸುವಂತೆ ಎಲ್ಲಾ ಹೋಟೆಲ್ ಮಾಲೀಕರಿಗೆ ಪೊಲೀಸರು ಸೂಚನೆ ನೀಡಿದ್ದಾರೆ.

# ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ



ಮೈಸೂರಿನಲ್ಲಿ... ಮೈ-ಸೂರು

**ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಪ್ರತಿಷ್ಠಿತ ಬಡಾವಣೆಗಳಲ್ಲಿ**

**ವಾಣಿಜ್ಯ, ಮೂಲೆ ಮತ್ತು ಮಧ್ಯಂತರ ನಿವೇಶನಗಳು ಹಾಗೂ ಮನೆಗಳ ಇ-ಹರಾಜು ಪ್ರಕಟಣೆ**

**ಸಂಖ್ಯೆ/ಮೈ.ನ.ಪ್ರಾ/ಇ.ಹ.ಪ್ರ/03/2022-23 ದಿನಾಂಕ: 16.09.2022 ರ ಪ್ರಕಟಣೆ ಹೊರಡಿಸಲು ಉದ್ದೇಶಿಸಿರುವ ವಿವರ.**

1) ಇ-ಹರಾಜನ್ನು ತೆರೆಯುವ ಹಾಗೂ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 26.09.2022 ರ ಭಾರತೀಯ ಕಾಲಮಾನ 18.00 ಗಂಟೆಯ ನಂತರ
2) ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 12.10.2022 ರ ಭಾರತೀಯ ಕಾಲಮಾನ 18.00 ಗಂಟೆವರೆಗೆ
3) ಕ್ರ.ಸಂ.1 ರಿಂದ 50 ರವರೆಗೆ ಇ-ಹರಾಜು ಮುಕ್ತಾಯಗೊಳ್ಳಲು ಕೊನೆಯ ದಿನಾಂಕ: 15.10.2022 ರ ಭಾರತೀಯ ಕಾಲಮಾನ 18.00 ಗಂಟೆಗೆ (ಡೆಲ್ಟಾ ಟೈಮ್ 5.00 ನಿಮಿಷ).
4) ಕ್ರ.ಸಂ.51 ರಿಂದ 100 ರವರೆಗೆ ಇ-ಹರಾಜು ಮುಕ್ತಾಯಗೊಳ್ಳಲು ಕೊನೆಯ ದಿನಾಂಕ: 17.10.2022 ರ ಭಾರತೀಯ ಕಾಲಮಾನ 18.00 ಗಂಟೆಗೆ (ಡೆಲ್ಟಾ ಟೈಮ್ 5.00 ನಿಮಿಷ).

| ಕ್ರ.ಸಂ. | ಬಡಾವಣೆಯ ಹೆಸರು | ನಿವೇಶನ ಸಂಖ್ಯೆ | ಮಧ್ಯಂತರ/ಮೂಲೆ | ರಸ್ತೆ ಅಭಿಮುಖ ದಿಕ್ಕು ಹಾಗೂ ಅಗಲ (ಮೀ.ಗಳಲ್ಲಿ) | ಅಳತೆ (ಮೀ.ಗಳಲ್ಲಿ) ಉ-ದ | ಪೂ-ಪ | ವಿಸ್ತೀರ್ಣ ಚ.ಮೀ | ನಿವೇಶನದ ಮೌಲ್ಯ (ರೂ.ಲಕ್ಷಗಳಲ್ಲಿ) |
|---|---|---|---|---|---|---|---|---|
| | **ಮೂಲೆ ಹಾಗೂ ಮಧ್ಯಂತರ ಪ್ರೀಮಿಯಂ ನಿವೇಶನಗಳು 18 ಮೀ (60 ಅಡಿ) ರಸ್ತೆ** | | | | | | | |
| 1 | ಶ್ರೀರಾಂಪುರ 2ನೇ ಹಂತ | 1808/ಎ | ಮೂಲೆ | "ಪೂ–ಉ9–18" | (18.60+18.00)/2 | 4.50 | 82.35 | 30.73 |
| 2 | ದೇವನೂರು 2ನೇ ಹಂತ 2ನೇ ಫೇಸ್ | 3065 | ಮೂಲೆ | "ದ–ಪೂ18–9" | 24.00 | 15.00 | 360.00 | 110.43 |
| 3 | ದೇವನೂರು 3ನೇ ಹಂತ | 1924 | ಮಧ್ಯಂತರ | "ಪೂರ್ವ18.00" | 12.00 | 18.00 | 216.00 | 52.16 |
| 4 | ದೇವನೂರು 3ನೇ ಹಂತ | 1972 | ಮಧ್ಯಂತರ | "ಪಶ್ಚಿಮ18.00" | 12.00 | 18.00 | 216.00 | 52.16 |
| 5 | ದೇವನೂರು 3ನೇ ಹಂತ | 2115 | ಮಧ್ಯಂತರ | "ಪೂರ್ವ18.00" | 12.00 | 18.00 | 216.00 | 52.16 |
| 6 | ದೇವನೂರು 3ನೇ ಹಂತ | 3382 | ಮಧ್ಯಂತರ | "ದಕ್ಷಿಣ18.00" | 12.00 | 18.00 | 216.00 | 52.16 |
| 7 | ಸಾತಗಳ್ಳಿ 1ನೇ ಹಂತ | 360 | ಮಧ್ಯಂತರ | "ಉತ್ತರ18.00" | 18.00 | 12.00 | 216.00 | 68.41 |
| 8 | ಸಾತಗಳ್ಳಿ 1ನೇ ಹಂತ | 1139 | ಮಧ್ಯಂತರ | "ಪೂರ್ವ18.00" | 15.00 | 24.00 | 360.00 | 114.02 |
| 9 | ಸಾತಗಳ್ಳಿ 1ನೇ ಹಂತ | 1140 | ಮಧ್ಯಂತರ | "ಪೂರ್ವ18.00" | 15.00 | 24.00 | 360.00 | 114.02 |
| 10 | ಸಾತಗಳ್ಳಿ 1ನೇ ಹಂತ | 1141 | ಮಧ್ಯಂತರ | "ಪೂರ್ವ18.00" | 15.00 | 24.00 | 360.00 | 114.02 |
| 11 | ಸಾತಗಳ್ಳಿ 1ನೇ ಹಂತ | 1142 | ಮಧ್ಯಂತರ | "ಪೂರ್ವ18.00" | 15.00 | 24.00 | 360.00 | 114.02 |
| 12 | ಸಾತಗಳ್ಳಿ 1ನೇ ಹಂತ | 1460 | ಮೂಲೆ | "ಪೂ–ಉ9–18" | 18.00 | (10.00+19.00)/2 | 261.00 | 85.27 |
| 13 | ಸಾತಗಳ್ಳಿ 1ನೇ ಹಂತ | 1567 | ಮೂಲೆ | "ಪ–ಉ9–18" | (20.50+12.50)/2 | 18.00 | 297.00 | 97.03 |
| 14 | "ಲಲಿತಾದ್ರಿನಗರ ಉತ್ತರ (ವಾಣಿಜ್ಯ ನಿವೇಶನ)" | "ವಾಣಿಜ್ಯ ನಿವೇಶನ ಸಂಖ್ಯೆ 04" | ಮೂಲೆ | ಪೂ–ಪ–ದ 9–9–18 | (11.50+22.60)/2 | 44.00 | 750.20 | 285.08 |
| | **15 ಮೀ (50 ಅಡಿ) ರಸ್ತೆ** | | | | | | | |
| 15 | ಸಾತಗಳ್ಳಿ 1ನೇ ಹಂತ | 180/ಸಿ | ಮೂಲೆ | "ಪೂ–ಉ9–15" | 12.00 | 9.00 | 108.00 | 35.01 |
| 16 | ಸಾತಗಳ್ಳಿ 1ನೇ ಹಂತ | 510 | ಮಧ್ಯಂತರ | "ದಕ್ಷಿಣ15.00" | 18.00 | 12.00 | 216.00 | 67.87 |
| 17 | ಸಾತಗಳ್ಳಿ 1ನೇ ಹಂತ | 641 | ಮೂಲೆ | "ಪ–ದ9–15" | 18.00 | 12.00 | 216.00 | 70.03 |
| | **12 ಮೀ (40 ಅಡಿ) ರಸ್ತೆ** | | | | | | | |
| 18 | ನಂಜನಗೂಡು ಬಸವನಗುಡಿ ಬ್ಲಾಕ್ | 40 | ಮಧ್ಯಂತರ | "ದಕ್ಷಿಣ12.00" | (16.00+17.00)/2 | 9.00 | 148.50 | 33.04 |
| 19 | ಆಲನಹಳ್ಳಿ | 414/ಎ | ಮಧ್ಯಂತರ | "ಪಶ್ಚಿಮ12.00" | 13.00 | 18.00 | 234.00 | 120.74 |
| 20 | ಹಂಚ್ಯಾ–ಸಾತಗಳ್ಳಿ 'ಬಿ' ವಲಯ | 666 | ಮಧ್ಯಂತರ | "ದಕ್ಷಿಣ12.00" | 12.00 | 9.00 | 108.00 | 31.51 |
| 21 | ಹಂಚ್ಯಾ–ಸಾತಗಳ್ಳಿ 'ಬಿ' ವಲಯ | 668 | ಮಧ್ಯಂತರ | "ದಕ್ಷಿಣ12.00" | 12.00 | 9.00 | 108.00 | 31.51 |
| 22 | ಹಂಚ್ಯಾ–ಸಾತಗಳ್ಳಿ 'ಬಿ' ವಲಯ | 671 | ಮಧ್ಯಂತರ | "ದಕ್ಷಿಣ12.00" | 12.00 | 9.00 | 108.00 | 31.51 |
| 23 | ಸಾತಗಳ್ಳಿ 1ನೇ ಹಂತ | 88 | ಮೂಲೆ | "ಪ–ದ9–12" | (5.00+25.00)/2 | 12.00 | 180.00 | 57.91 |
| 24 | ಸಾತಗಳ್ಳಿ 1ನೇ ಹಂತ | 191 | ಮೂಲೆ | "ಪೂ–ಉ9.00" | 9.00 | 12.00 | 108.00 | 34.74 |
| 25 | ಸಾತಗಳ್ಳಿ 1ನೇ ಹಂತ | 1383 | ಮೂಲೆ | "ಪೂ–ದ12–9" | 12.00 | 18.00 | 216.00 | 69.49 |
| 26 | ಸಾತಗಳ್ಳಿ 1ನೇ ಹಂತ | 1619 | ಮೂಲೆ | "ಉ–ಪ9–12" | 15.00 | 24.00 | 360.00 | 115.81 |
| | **09 ಮೀ (30 ಅಡಿ) ರಸ್ತೆ** | | | | | | | |
| 27 | ಶ್ರೀರಾಂಪುರ 3ನೇ ಹಂತ | 2687 | ಮಧ್ಯಂತರ | "ಪೂರ್ವ9.00" | 9.00 | 15.00 | 135.00 | 48.09 |
| 28 | ಶ್ರೀರಾಂಪುರ 3ನೇ ಹಂತ | 2702 | ಮಧ್ಯಂತರ | "ಪಶ್ಚಿಮ9.00" | 9.00 | 12.00 | 108.00 | 38.48 |
| 29 | ಶ್ರೀರಾಂಪುರ 3ನೇ ಹಂತ | 2715 | ಮಧ್ಯಂತರ | "ಪಶ್ಚಿಮ9.00" | 9.00 | 15.00 | 135.00 | 48.09 |
| 30 | ಶ್ರೀರಾಂಪುರ 3ನೇ ಹಂತ | 2716 | ಮಧ್ಯಂತರ | "ಪಶ್ಚಿಮ9.00" | 9.00 | 15.00 | 135.00 | 48.09 |
| 31 | ಹಂಡುವಿನಹಳ್ಳಿ (ನಂಜನಗೂಡು) | 29 | ಮಧ್ಯಂತರ | "ಪಶ್ಚಿಮ9.00" | 9.00 | 12.00 | 108.00 | 10.53 |
| 32 | ಹಂಡುವಿನಹಳ್ಳಿ (ನಂಜನಗೂಡು) | 47 | ಮೂಲೆ | "ದ–ಪ9.00" | 9.00 | 4.00 | 36.00 | 3.60 |
| 33 | ವಿಜಯನಗರ 4ನೇ ಹಂತ 2ನೇ ಫೇಸ್ | 90/1 | ಮೂಲೆ | "ಉ–ಪ9–12" | (9.00+0.00)/2 | 18.50 | 83.25 | 35.00 |
| 34 | ಹೆಬ್ಬಾಳು 1ನೇ ಹಂತ | 3064 | ಮಧ್ಯಂತರ | "ಪಶ್ಚಿಮ9.00" | 6.00 | 9.00 | 54.00 | 25.65 |
| 35 | ಹೆಬ್ಬಾಳು 1ನೇ ಹಂತ | 3064/ಎ | ಮಧ್ಯಂತರ | "ಪಶ್ಚಿಮ9.00" | 6.00 | 9.00 | 54.00 | 25.65 |
| 36 | ಹೆಬ್ಬಾಳು 1ನೇ ಹಂತ | 3064/ಬಿ | ಮಧ್ಯಂತರ | "ಪಶ್ಚಿಮ9.00" | 6.00 | 9.00 | 54.00 | 25.65 |
| 37 | ಹೆಬ್ಬಾಳು 1ನೇ ಹಂತ | 3065 | ಮಧ್ಯಂತರ | "ಪಶ್ಚಿಮ9.00" | 6.00 | 9.00 | 54.00 | 25.65 |
| 38 | ಹೆಬ್ಬಾಳು 1ನೇ ಹಂತ | 3065/ಎ | ಮಧ್ಯಂತರ | "ಪಶ್ಚಿಮ9.00" | 6.00 | 9.00 | 54.00 | 25.65 |
| 39 | ಹೆಬ್ಬಾಳು 1ನೇ ಹಂತ | 3065/ಬಿ | ಮಧ್ಯಂತರ | "ಪಶ್ಚಿಮ9.00" | 6.00 | 9.00 | 54.00 | 25.65 |
| 40 | ಹೆಬ್ಬಾಳು 1ನೇ ಹಂತ | 3065/ಸಿ | ಮೂಲೆ | "ಪ–ದ9.00" | 8.30 | 9.00 | 74.70 | 39.03 |
| 41 | ದೇವನೂರು 1ನೇ ಹಂತ | 791 | ಮಧ್ಯಂತರ | "ದಕ್ಷಿಣ9.00" | (18.00+14.50)/2 | 12.00 | 195.00 | 60.30 |
| 42 | ದೇವನೂರು 1ನೇ ಹಂತ | 794 | ಮಧ್ಯಂತರ | "ಪಶ್ಚಿಮ9.00" | (4.00+10.00)/2 | 18.00 | 126.00 | 38.96 |
| 43 | ದೇವನೂರು 1ನೇ ಹಂತ | 795 | ಮಧ್ಯಂತರ | "ಪಶ್ಚಿಮ9.00" | 12.00 | 18.00 | 216.00 | 66.79 |
| 44 | ದೇವನೂರು 1ನೇ ಹಂತ | 1198 | ಮೂಲೆ | "ಪ–ದ6–9" | 9.00 | (14.50+27.00)/2 | 186.75 | 59.61 |
| 45 | ದೇವನೂರು 2ನೇ ಹಂತ 2ನೇ ಫೇಸ್ | 1710 | ಮಧ್ಯಂತರ | "ಪೂರ್ವ9.00" | 12.00 | 18.00 | 216.00 | 62.48 |
| 46 | ದೇವನೂರು 2ನೇ ಹಂತ 2ನೇ ಫೇಸ್ | 2595/ಎ | ಮಧ್ಯಂತರ | "ದಕ್ಷಿಣ9.00" | (22.00+15.00)/2 | 9.00 | 166.50 | 48.17 |
| 47 | ದೇವನೂರು 2ನೇ ಹಂತ 2ನೇ ಫೇಸ್ | 2595/ಬಿ | ಮಧ್ಯಂತರ | "ದಕ್ಷಿಣ9.00" | (0+15.00)/2 | 21.00 | 157.50 | 45.56 |
| 48 | ಹಂಚ್ಯಾ–ಸಾತಗಳ್ಳಿ 'ಬಿ' ವಲಯ | 613 | ಮಧ್ಯಂತರ | "ದಕ್ಷಿಣ9.00" | 12.00 | 9.00 | 108.00 | 31.24 |
| 49 | ಹಂಚ್ಯಾ–ಸಾತಗಳ್ಳಿ 'ಬಿ' ವಲಯ | 637 | ಮಧ್ಯಂತರ | "ದಕ್ಷಿಣ9.00" | 12.00 | 9.00 | 108.00 | 31.24 |
| 50 | ಹಂಚ್ಯಾ–ಸಾತಗಳ್ಳಿ 'ಬಿ' ವಲಯ | 640 | ಮಧ್ಯಂತರ | "ದಕ್ಷಿಣ9.00" | 12.00 | 9.00 | 108.00 | 31.24 |
| 51 | ಹಂಚ್ಯಾ–ಸಾತಗಳ್ಳಿ 'ಬಿ' ವಲಯ | 641 | ಮಧ್ಯಂತರ | "ದಕ್ಷಿಣ9.00" | 12.00 | 9.00 | 108.00 | 31.24 |
| 52 | ಹಂಚ್ಯಾ–ಸಾತಗಳ್ಳಿ 'ಬಿ' ವಲಯ | 1679 | ಮಧ್ಯಂತರ | "ಪೂರ್ವ9.00" | 12.00 | 18.00 | 216.00 | 62.48 |
| 53 | ಸಾತಗಳ್ಳಿ 1ನೇ ಹಂತ | 206/ಎ | ಮೂಲೆ | "ಉ–ಪ9.00" | 12.00 | 9.00 | 108.00 | 34.47 |
| 54 | ಸಾತಗಳ್ಳಿ 1ನೇ ಹಂತ | 292 | ಮೂಲೆ | "ಉ–ಪೂ9.00" | (14.00+16.70)/2 | 18.30 | 280.90 | 89.66 |
| 55 | ಸಾತಗಳ್ಳಿ 1ನೇ ಹಂತ | 426/ಎ | ಮೂಲೆ | "ಉ–ಪ9.00" | (8.30+17.80)/2 | 12.30 | 160.51 | 51.23 |
| 56 | ಸಾತಗಳ್ಳಿ 1ನೇ ಹಂತ | 461 | ಮೂಲೆ | "ದ–ಪೂ9.00" | (13.50+7.00)/2 | (19.00+18.20)/2 | 190.65 | 60.86 |
| 57 | ಸಾತಗಳ್ಳಿ 1ನೇ ಹಂತ | 640 | ಮೂಲೆ | "ಪ–ಉ9.00" | 18.00 | 12.00 | 216.00 | 68.95 |
| 58 | ಸಾತಗಳ್ಳಿ 1ನೇ ಹಂತ | 1132 | ಮಧ್ಯಂತರ | "ಪಶ್ಚಿಮ9.00" | 15.00 | 24.00 | 360.00 | 111.32 |
| 59 | ಸಾತಗಳ್ಳಿ 1ನೇ ಹಂತ | 1133 | ಮಧ್ಯಂತರ | "ಪಶ್ಚಿಮ9.00" | 15.00 | 24.00 | 360.00 | 111.32 |
| 60 | ಸಾತಗಳ್ಳಿ 1ನೇ ಹಂತ | 1134 | ಮಧ್ಯಂತರ | "ಪಶ್ಚಿಮ9.00" | 15.00 | 24.00 | 360.00 | 111.32 |
| 61 | ಸಾತಗಳ್ಳಿ 1ನೇ ಹಂತ | 1151 | ಮಧ್ಯಂತರ | "ಉತ್ತರ9.00" | 18.00 | 12.00 | 216.00 | 66.79 |
| 62 | ಸಾತಗಳ್ಳಿ 1ನೇ ಹಂತ | 1152 | ಮಧ್ಯಂತರ | "ಉತ್ತರ9.00" | 18.00 | 12.00 | 216.00 | 66.79 |
| 63 | ಸಾತಗಳ್ಳಿ 1ನೇ ಹಂತ | 1153 | ಮಧ್ಯಂತರ | "ಉತ್ತರ9.00" | 18.00 | 12.00 | 216.00 | 66.79 |
| 64 | ಸಾತಗಳ್ಳಿ 1ನೇ ಹಂತ | 1154 | ಮಧ್ಯಂತರ | "ಉತ್ತರ9.00" | 18.00 | 12.00 | 216.00 | 66.79 |
| 65 | ಸಾತಗಳ್ಳಿ 1ನೇ ಹಂತ | 1156 | ಮಧ್ಯಂತರ | "ಉತ್ತರ9.00" | 18.00 | 12.00 | 216.00 | 66.79 |
| 66 | ಸಾತಗಳ್ಳಿ 1ನೇ ಹಂತ | 1582 | ಮಧ್ಯಂತರ | "ಪಶ್ಚಿಮ9.00" | 15.00 | 24.00 | 360.00 | 111.32 |
| 67 | ಸಾತಗಳ್ಳಿ 1ನೇ ಹಂತ | 1617 | ಮಧ್ಯಂತರ | "ಪಶ್ಚಿಮ9.00" | 15.00 | 24.00 | 360.00 | 111.32 |
| 68 | ಸಾತಗಳ್ಳಿ 1ನೇ ಹಂತ | 1618 | ಮಧ್ಯಂತರ | "ಪಶ್ಚಿಮ9.00" | 15.00 | 24.00 | 360.00 | 111.32 |
| 69 | ಸಾತಗಳ್ಳಿ 1ನೇ ಹಂತ | 1620 | ಮೂಲೆ | "ಪೂ–ಉ9–12" | 12.00 | 18.00 | 216.00 | 68.95 |
| 70 | ಸಾತಗಳ್ಳಿ 1ನೇ ಹಂತ | 1644 | ಮಧ್ಯಂತರ | "ಪಶ್ಚಿಮ9.00" | 9.00 | 12.00 | 108.00 | 33.40 |
| 71 | ಸಾತಗಳ್ಳಿ 1ನೇ ಹಂತ | 1648 | ಮಧ್ಯಂತರ | "ಪಶ್ಚಿಮ9.00" | 9.00 | 12.00 | 108.00 | 33.40 |
| 72 | ಸಾತಗಳ್ಳಿ 2ನೇ ಹಂತ | 5408 | ಮಧ್ಯಂತರ | "ಪಶ್ಚಿಮ9.00" | 9.00 | 12.00 | 108.00 | 26.72 |
| 73 | ಸಾತಗಳ್ಳಿ 2ನೇ ಹಂತ | 5409 | ಮಧ್ಯಂತರ | "ಪಶ್ಚಿಮ9.00" | 9.00 | 12.00 | 108.00 | 26.72 |
| 74 | ಸಾತಗಳ್ಳಿ 2ನೇ ಹಂತ | 5410 | ಮಧ್ಯಂತರ | "ಪಶ್ಚಿಮ9.00" | 9.00 | 12.00 | 108.00 | 26.72 |
| 75 | ಸಾತಗಳ್ಳಿ 2ನೇ ಹಂತ | 5411 | ಮಧ್ಯಂತರ | "ಪಶ್ಚಿಮ9.00" | 9.00 | 12.00 | 108.00 | 26.72 |
| 76 | ಸಾತಗಳ್ಳಿ 2ನೇ ಹಂತ | 5414 | ಮಧ್ಯಂತರ | "ಪೂರ್ವ9.00" | 9.00 | 12.00 | 108.00 | 26.72 |
| 77 | ಸಾತಗಳ್ಳಿ 2ನೇ ಹಂತ | 5415 | ಮಧ್ಯಂತರ | "ಪೂರ್ವ9.00" | 9.00 | 12.00 | 108.00 | 26.72 |
| 78 | ಸಾತಗಳ್ಳಿ 2ನೇ ಹಂತ | 5416 | ಮಧ್ಯಂತರ | "ಪೂರ್ವ9.00" | 9.00 | 12.00 | 108.00 | 26.72 |
| 79 | ಸಾತಗಳ್ಳಿ 2ನೇ ಹಂತ | 5417 | ಮಧ್ಯಂತರ | "ಪೂರ್ವ9.00" | 9.00 | 12.00 | 108.00 | 26.72 |
| 80 | ಸಾತಗಳ್ಳಿ 2ನೇ ಹಂತ | 5421 | ಮಧ್ಯಂತರ | "ಪಶ್ಚಿಮ9.00" | 6.00 | 9.00 | 54.00 | 13.36 |
| 81 | ಸಾತಗಳ್ಳಿ 2ನೇ ಹಂತ | 5422 | ಮಧ್ಯಂತರ | "ಪಶ್ಚಿಮ9.00" | 6.00 | 9.00 | 54.00 | 13.36 |
| 82 | ಸಾತಗಳ್ಳಿ 2ನೇ ಹಂತ | 5423 | ಮಧ್ಯಂತರ | "ಪಶ್ಚಿಮ9.00" | 6.00 | 9.00 | 54.00 | 13.36 |
| 83 | ಸಾತಗಳ್ಳಿ 2ನೇ ಹಂತ | 5424 | ಮಧ್ಯಂತರ | "ಪಶ್ಚಿಮ9.00" | 6.00 | 9.00 | 54.00 | 13.36 |
| 84 | ಸಾತಗಳ್ಳಿ 2ನೇ ಹಂತ | 5425 | ಮಧ್ಯಂತರ | "ಪಶ್ಚಿಮ9.00" | 6.00 | 9.00 | 54.00 | 13.36 |
| 85 | ಸಾತಗಳ್ಳಿ 2ನೇ ಹಂತ | 5426 | ಮಧ್ಯಂತರ | "ಪಶ್ಚಿಮ9.00" | 6.00 | 9.00 | 54.00 | 13.36 |
| 86 | ಸಾತಗಳ್ಳಿ 2ನೇ ಹಂತ | 5427 | ಮಧ್ಯಂತರ | "ಪಶ್ಚಿಮ9.00" | 6.00 | 9.00 | 54.00 | 13.36 |
| 87 | ಸಾತಗಳ್ಳಿ 2ನೇ ಹಂತ | 5428 | ಮಧ್ಯಂತರ | "ಪಶ್ಚಿಮ9.00" | 6.00 | 9.00 | 54.00 | 13.36 |
| 88 | ಸಾತಗಳ್ಳಿ 2ನೇ ಹಂತ | 5429 | ಮಧ್ಯಂತರ | "ಪಶ್ಚಿಮ9.00" | 6.00 | 9.00 | 54.00 | 13.36 |
| 89 | ಸಾತಗಳ್ಳಿ 2ನೇ ಹಂತ | 5432 | ಮಧ್ಯಂತರ | "ಪೂರ್ವ9.00" | 6.00 | 9.00 | 54.00 | 13.36 |
| 90 | ಸಾತಗಳ್ಳಿ 2ನೇ ಹಂತ | 5433 | ಮಧ್ಯಂತರ | "ಪೂರ್ವ9.00" | 6.00 | 9.00 | 54.00 | 13.36 |
| 91 | ಸಾತಗಳ್ಳಿ 2ನೇ ಹಂತ | 5434 | ಮಧ್ಯಂತರ | "ಪೂರ್ವ9.00" | 6.00 | 9.00 | 54.00 | 13.36 |
| 92 | ಸಾತಗಳ್ಳಿ 2ನೇ ಹಂತ | 5435 | ಮಧ್ಯಂತರ | "ಪೂರ್ವ9.00" | 6.00 | 9.00 | 54.00 | 13.36 |
| 93 | ಸಾತಗಳ್ಳಿ 2ನೇ ಹಂತ | 5436 | ಮಧ್ಯಂತರ | "ಪೂರ್ವ9.00" | 6.00 | 9.00 | 54.00 | 13.36 |
| 94 | ಸಾತಗಳ್ಳಿ 2ನೇ ಹಂತ | 5438 | ಮಧ್ಯಂತರ | "ಪೂರ್ವ9.00" | 6.00 | 9.00 | 54.00 | 13.36 |
| 95 | ಸಾತಗಳ್ಳಿ 2ನೇ ಹಂತ | 5440 | ಮಧ್ಯಂತರ | "ಪೂರ್ವ9.00" | 6.00 | 9.00 | 54.00 | 13.36 |
| 96 | ಸಾತಗಳ್ಳಿ 2ನೇ ಹಂತ | 5442 | ಮಧ್ಯಂತರ | "ಪೂರ್ವ9.00" | 6.00 | 9.00 | 54.00 | 13.36 |
| | **06 ಮೀ (20 ಅಡಿ) ರಸ್ತೆ** | | | | | | | |
| 97 | ದೇವನೂರು ಹುಡ್ಕೋ 1ನೇ ಹಂತ | 160/ಎ | ಮೂಲೆ | "ದ–ಪ6.00" | 8.00 | 7.00 | 56.00 | 17.04 |
| 98 | ಬೆಸ್ತರ ಬ್ಲಾಕ್ 2ನೇ ಅಡ್ಡರಸೆ ಸುಯೇಜ್ ಫಾರಂ ರಸ್ತೆ | 70/ಎ | ಮಧ್ಯಂತರ | "ದಕ್ಷಿಣ6.00" | 13.70 | (5.30+2.60)/2 | 54.12 | 10.82 |

**ಮನೆಗಳು**

| ಕ್ರ.ಸಂ. | ಬಡಾವಣೆ ಹೆಸರು | ಮನೆಯ ಸಂಖ್ಯೆ | ಮಧ್ಯಂತರ/ಮೂಲೆ | ಮನೆ ವಿಸ್ತೀರ್ಣ ಚ.ಮೀ | ನಿವೇಶನ ವಿಸ್ತೀರ್ಣ ಚ.ಮೀ | ನೆಲ/ಮೊದಲನೆ/ ಎರಡನೇ/ ಮೂರನೇ ಅಂತಸ್ತು | ನಿವೇಶನದ ಮೌಲ್ಯ (ರೂ.ಲಕ್ಷಗಳಲ್ಲಿ) |
|---|---|---|---|---|---|---|---|
| 99 | ಹೆಬ್ಬಾಳು 1ನೇ ಹಂತ | ಎಲ್.ಐ.ಜಿ–24 | ಮಧ್ಯಂತರ | 44.40 | 54.00 | ನೆಲ ಅಂತಸ್ತು | 20.52 |
| 100 | ಹೆಬ್ಬಾಳು 1ನೇ ಹಂತ | ಎಂ.ಐ.ಜಿ–2–34 | ಮಧ್ಯಂತರ | 46.82 | 84.00 | ನೆಲ ಅಂತಸ್ತು | 39.90 |

**ಇ-ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ.**

1. ಹರಾಜಿನಲ್ಲಿ ಪಾಲ್ಗೊಳ್ಳುವವರು ಭಾರತೀಯ ಪ್ರಜೆಯಾಗಿರಬೇಕು, ಭಾರತ ದೇಶದಲ್ಲಿ ನೋಂದಣಿಯಾಗಿರುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪೆನಿಗಳು/ಟ್ರಸ್ಟ್‌ಗಳು ಭಾಗವಹಿಸಬಹುದಾಗಿದೆ. 2. ಇ-ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಇ-ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು **https://www.eproc.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಸಿಟಿಜನ್ ವಿಭಾಗದಲ್ಲಿ ಲಭ್ಯವಿರುವ **Simplified e-auction user guide** ನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. 3. ಹರಾಜಿನಲ್ಲಿ ಪಾಲ್ಗೊಳ್ಳುವವರು https://www.eproc.karnataka.gov.in ವೆಬ್‌ಸೈಟ್ ನಿಂದ ನಿಗಧಿತ ಮಾದರಿ ಸಹಿಯ ನಮೂನೆ (ಇದರಲ್ಲಿ ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರನ್ನು ಕನ್ನಡ ಹಾಗೂ ಅಂಗ್ಲ ಭಾಷೆಯಲ್ಲಿ ನಮೂದಿಸುವುದು) ಹಾಗೂ ಸಂಪರ್ಕದ ಮಾಹಿತಿಯ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪಲೋಡ್ ಮಾಡಬೇಕಾಗಿರುತ್ತದೆ. 4. ಇ-ಹರಾಜಿನ ಮೂಲಕ ನಿವೇಶನವನ್ನು ಜಂಟಿಯಾಗಿ ಖರೀದಿಸುವವರು ಜಂಟಿಯಾಗಿ ದಾಖಲೆಗಳನ್ನು ಇ-ಹರಾಜಿನ ಪೋರ್ಟಲ್‌ನಲ್ಲಿ ಅಪಲೋಡ್ ಮಾಡಬೇಕು. 5. ಹರಾಜಿಗೊಳಪಡಿಸಿರುವ ನಿವೇಶನಗಳು ಎಲ್ಲಿ ಹೇಗೆ ಇವೆಯೋ ಅದೇ ಸ್ಥಿತಿಯಲ್ಲಿ ಯಶಸ್ವಿ ಬಿಡ್ಡುದಾರರಿಗೆ ಹಂಚಿಕೆ ಮಾಡಲಾಗುವುದು, ಹರಾಜಿನಲ್ಲಿ ಹಂಚಿಕೆಯಾದ ನಿವೇಶನಗಳಿಗೆ ಬದಲಿ ನಿವೇಶನ ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. 6. ಪ್ರತಿ ನಿವೇಶನದ ಹರಾಜಿನಲ್ಲಿ ಕನಿಷ್ಠ ಇಬ್ಬರು ಬಿಡ್ಡುದಾರರು ಭಾಗವಹಿಸಬೇಕಾಗಿರುತ್ತದೆ. ಒಬ್ಬರೇ ಬಿಡ್ಡುದಾರರು ಇದ್ದಲ್ಲಿ ಅಂತಹ ಬಿಡ್ಡನ್ನು ತಿರಸ್ಕರಿಸಲಾಗುವುದು. 7. ಇ-ಹರಾಜಿನ ಅಂತಿಮ ದಿನಾಂಕದ ಅಂತಿಮ ಸಮಯ/ಕ್ಷಣದಲ್ಲಿ ಪ್ರಗತಿಯಲ್ಲಿರುವ ಬಿಡ್ಡುಗಳಿಗೆ ಪ್ರತಿ ಬಿಡ್ಡಿಗೆ 5 ನಿಮಿಷ ಡೆಲ್ಟಾ ಟೈಂ ಇದ್ದು, ಉದಾ: ಹರಾಜು ಅಂತ್ಯವಾಗುವ ವೇಳೆ 18.00 ಆಗಿದ್ದು, ನೀವು 17.57 ಕ್ಕೆ ಬಿಡ್ ಮಾಡಿದಾಗ 18.02 ರವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಇದು ಅಂತಿಮವಾಗುವವರೆಗೆ ವಿಸ್ತರಣೆಯಾಗುತ್ತಾ ಹೋಗುತ್ತದೆ. 8. ರೂ.1.00 ಕೋಟಿಗಿಂತ ಕಡಿಮೆ ಮೌಲ್ಯದ ನಿವೇಶನಗಳಿಗೆ ಕನಿಷ್ಠ ಬಿಡ್ ಏರಿಕೆ ಮೊತ್ತ ರೂ.10,000/– ಮತ್ತು ರೂ.1.00 ಕೋಟಿ ಹಾಗೂ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ರೂ.1,00,000/–ಗಳಾಗಿರುತ್ತದೆ. 9. ಅತ್ಯಧಿಕ ಮೊತ್ತದ ಬಿಡ್ಡುದಾರರು ಬಿಡ್ ಅಂಗೀಕೃತವಾದ ಬಗ್ಗೆ **https://www.eproc.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿಕೊಂಡು ಬಿಡ್ ಮೌಲ್ಯದ ಶೇ.25 ರಷ್ಟು ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಅಥವಾ ಡಿ.ಡಿ ಮೂಲಕ (ಇ.ಎಂ.ಡಿ. ರೂ.3.00 ಲಕ್ಷ ಅಥವಾ ರೂ.1.00 ಲಕ್ಷ ಹೊರತು ಪಡಿಸಿ) ಬಿಡ್ಡು ಅಂಗೀಕರಿಸಿದ 72 ಗಂಟೆಯೊಳಗಾಗಿ ಖಾತೆದಾರರು ಆಯುಕ್ತರು, ಮೈ.ನ.ಪ್ರಾ, ಮೈಸೂರು ರವರ ಹೆಸರಿನಲ್ಲಿರುವ **Commissioner MUDA Mysore, Bank of Baroda, Account No.89260100004660 (IFSC Code No. BARB0VJMUDA,** 5ನೇ ಅಕ್ಷರ ಸೊನ್ನೆ ಆಗಿರುತ್ತದೆ), ಖಾತೆಗೆ ವರ್ಗಾವಣೆ/ಪಾವತಿ ಮಾಡಬಹುದಾಗಿರುತ್ತದೆ ಹಾಗೂ ಡಿ.ಡಿ.ಯನ್ನು ಸಹ ಪಡೆದು ಸಲ್ಲಿಸಬಹುದಾಗಿರುತ್ತದೆ. ಶೇಕಡ 25 ರಷ್ಟು ಹಣ ಪಾವತಿಸಿದ ಬಗ್ಗೆ ದಾಖಲಾತಿ ಒದಗಿಸುವ ಸಂದರ್ಭದಲ್ಲಿ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಸಲ್ಲಿಸುವುದು. ಯಶಸ್ವಿ ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 25 ಭಾಗ ಹಣ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. 10. ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹಿಂಪಡೆಯುವ ಹಕ್ಕನ್ನು ಮೈ.ನ.ಪ್ರಾ. ಕಾಯ್ದಿರಿಸಿಕೊಂಡಿದೆ. 11. ಹರಾಜಾದ ನಿವೇಶನಗಳನ್ನು 1991ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲೆ ಮತ್ತು ವಾಣಿಜ್ಯ ನಿವೇಶನಗಳ ಹಂಚಿಕೆ) ನಿಯಮ ಕಲಂ 6(2) ರನ್ವಯ ಅಂತಿಮ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರು ಹೊಂದಿರುತ್ತಾರೆ. 12. ಇ-ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಂಡ ನಂತರ ಇ.ಎಂ.ಡಿ ಮೊತ್ತವನ್ನು **www.eproc.karnataka.gov.in** ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿ ಮಾಡಲು ಕ್ರಮವಹಿಸುತ್ತಾರೆ. 13. ಬಿಡ್ಡುದಾರರಿಗೆ ಬಿಡ್ಡಿನಲ್ಲಿ ಅಂತಿಮಗೊಂಡ ನಿವೇಶನಗಳನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಒಟ್ಟು ವಿಸ್ತೀರ್ಣದಲ್ಲಿ ಕಡಿಮೆ ಇದ್ದಲ್ಲಿ ಪಾವತಿಸಲ್ಪಟ್ಟಿರುವ ಹೆಚ್ಚುವರಿ ಮೊತ್ತವನ್ನು ಮರುಪಾವತಿಸಲಾಗುವುದು ಹಾಗೂ ಹೆಚ್ಚುವರಿ ವಿಸ್ತೀರ್ಣವಿದ್ದಲ್ಲಿ, ಸದರಿ ವಿಸ್ತೀರ್ಣಕ್ಕೆ ಹೆಚ್ಚುವರಿ ಹಣ ಪಾವತಿಸಲು ತಿಳುವಳಿಕೆ ನೀಡಲಾಗುವುದು. ಇದಕ್ಕೆ ಬಿಡ್ಡುದಾರರು ಒಪ್ಪದಿದ್ದಲ್ಲಿ ಸದರಿಯವರು ಪಾವತಿಸಿರುವ ಶೇ.25 ರಷ್ಟು ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಹರಾಜನ್ನು ರದ್ದುಗೊಳಿಸಲಾಗುವುದು. 14. ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 75 ರಷ್ಟು ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಪಾವತಿಸಿದ ನಂತರ ಹಣ ಪಾವತಿಸಿರುವ ರಸೀದಿ ಪ್ರತಿಯೊಂದಿಗೆ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸುವುದು. 15. ಬಿಡ್ಡುದಾರರಿಗೆ ಬಿಡ್ಡು ಮೊತ್ತದ ಉಳಿಕೆ ಶೇ.75 ರಷ್ಟು ಮೊತ್ತ ಪಾವತಿಸಲು ಬಡ್ಡಿ ರಹಿತವಾಗಿ ಹರಾಜು ಸ್ಥಿರೀಕರಣ ಪತ್ರ ಸ್ವೀಕರಿಸಿದ ದಿನಾಂಕದಿಂದ 45 ದಿವಸಗಳು ಅವಕಾಶವಿದ್ದು, ನಂತರದ 90 ದಿನಗಳ ಅವಧಿಗೆ ಶೇ.18 ರ ಬಡ್ಡಿ ದರದಲ್ಲಿ ಹಾಗೂ ತದನಂತರದ 30 ದಿನಗಳ ಅವಧಿಗೆ ಶೇ.21 ರ ಬಡ್ಡಿ ದರದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಪಾವತಿಸಲು ಅವಕಾಶವಿರುತ್ತದೆ. 16. ಹರಾಜು ಪ್ರಕಟಣೆಯಲ್ಲಿ ನೀಡಿರುವ ರೇಖಾಂಶ ಮತ್ತು ಅಕ್ಷಾಂಕಗಳು ಕೆಲವೊಮ್ಮೆ ಕೈತಪ್ಪಿನಿಂದ ನಿಖರವಾಗಿ ನಿವೇಶನವನ್ನು ಗುರುತಿಸದೇ ಇದ್ದ ಪಕ್ಷದಲ್ಲಿ ಪ್ರಕಟಣೆಯಲ್ಲಿ ನೀಡಿರುವ ಸಂಬಂಧಪಟ್ಟ ಅಭಿಯಂತರರನ್ನು ಸಂಪರ್ಕಿಸಿ ಖಚಿತಪಡಿಸಿಕೊಳ್ಳಬಹುದಾಗಿದೆ. ರೇಖಾಂಶ ಮತ್ತು ಅಕ್ಷಾಂಕಗಳು ವ್ಯತ್ಯಸವಾಗಿರುವುದಾಗಿ ತಿಳಿಸಿ ಪಾವತಿಸಿರುವ ಹಣವನ್ನು ಮರುಪಾವತಿ ಕೋರಿದ್ದಲ್ಲಿ ಮರುಪಾವತಿಸಲು ಅವಕಾಶವಿರುವುದಿಲ್ಲ. 17. ನಿವೇಶನಗಳ ಸ್ಥಳ ಮಾಹಿತಿ, ಅಭಿಮುಖ, ರಸ್ತೆ ಅಳತೆ ಇನ್ನಿತರೆ ವಿವರಗಳನ್ನು **https://www.eproc.karnataka.gov.in** ಅಥವಾ **www.mudamysore.gov.in** ವೆಬ್‌ಸೈಟ್‌ನಿಂದ ತಿಳಿದುಕೊಳ್ಳಬಹುದಾಗಿರುತ್ತದೆ ಅಥವಾ ದೂರವಾಣಿ ಸಂಖ್ಯೆ– 0821–2421629 ಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ನಿವೇಶನ / ಸ್ಥಳದ (**Location**) ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಭಿಯಂತರರ ವಿವರ :–ಅ) ವಲಯ ಕಛೇರಿ–1 – 1. ಶ್ರೀರಾಂಪುರ 2ನೇ ಮತ್ತು 3ನೇ ಹಂತ – ಶ್ರೀ.ಪ್ರಸಾದ್, ಸ.ಅ., ಮೊಬೈಲ್ ನಂ.9880434585, 2. ಹಂಡುವಿನಹಳ್ಳಿ (ನಂಜನಗೂಡು), ನಂಜನಗೂಡು ಬಸವನಗುಡಿ ಬ್ಲಾಕ್, ಬೆಸ್ತರ್ ಬ್ಲಾಕ್ – ಶ್ರೀ. ಲೋಕೇಶ್, ಸ.ಅ., ಮೊಬೈಲ್ ನಂ.9972431398. ಆ) ವಲಯ ಕಛೇರಿ–3 – ವಿಜಯನಗರ 4ನೇ ಹಂತ – ಶ್ರೀ. ನಂದೀಶ್, ಸ.ಅ., ಮೊಬೈಲ್ ನಂ..9845153643. ಈ) ವಲಯ ಕಛೇರಿ–4– ಹೆಬ್ಬಾಳು 1ನೇ ಮತ್ತು 2ನೇ ಹಂತ ಬಡಾವಣೆ– ಶ್ರೀ.ಪುಟ್ಟನಾಗರಾಜು, ಸ.ಅ., ಮೊಬೈಲ್ ನಂ.9886975792. ಉ) ವಲಯ ಕಛೇರಿ–5ಬಿ – ದೇವನೂರು 1, 2 & 3ನೇ ಹಂತ – ಶ್ರೀ. ರಾಜಶೇಖರ್, ಕಿ.ಅ., ಮೊಬೈಲ್ ನಂ.9880929640, ಊ) ವಲಯ ಕಛೇರಿ–6 – ಲಲಿತಾದ್ರಿನಗರ (ದಕ್ಷಿಣ) – ಶ್ರೀ. ಪರಮೇಶ್, ಕಿ.ಅ., ಮೊಬೈಲ್ ನಂ. 9739841333. ಋ) ವಲಯ ಕಛೇರಿ–8 – ಆಲನಹಳ್ಳಿ, ಸಾತಗಳ್ಳಿ 1ನೇ & 2ನೇ ಹಂತ, ಹಂಚ್ಯಾ–ಸಾತಗಳ್ಳಿ 'ಬಿ' ವಲಯ – ಶ್ರೀ. ಸಂಪತ್‌ಕುಮಾರ್, ಸ.ಅ., ಮೊಬೈಲ್ ನಂ.9343530052.

**ಮಧ್ಯವರ್ತಿಗಳ ಹಾವಳಿಯಿಲ್ಲ, ದಾಖಲೆಗಳ ಸಂದೇಹವಿಲ್ಲ, ಬ್ಯಾಂಕ್‌ನಲ್ಲಿ ಸುಲಭ ಸಾಲ ಸೌಲಭ್ಯ**

**ಸೂಚನೆ:** ಇ-ಹರಾಜಿನಲ್ಲಿ ನೇರವಾಗಿ ಭಾಗವಹಿಸಲು ಇ-ಪ್ರೊಕ್ಯೂರ್‌ಮೆಂಟ್ **Website: https://eproc.karnataka.gov.in** ಲಾಗಿನ್ ಆಗಿ, **Email: support@helpdesk.com** ದೂರವಾಣಿ ಸಂಖ್ಯೆ: +91 80-46010000, +91 80-22631200

ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಈ ಕೆಳಕಂಡ ಹರಾಜು ಶಾಖೆಯ ಸಹಾಯವಾಣಿ ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಮೊಬೈಲ್ ಹಾಗೂ ವಾಟ್ಸಾಪ್ ಸಂಖ್ಯೆ: 8884000752 / 8884000753 ಮೊಬೈಲ್ ಸಂಖ್ಯೆ: 8884000791 / 8884000794 Website: mudamysore.gov.in / Email:mudamysore@gmail.com

ಸಹಿ/-
ಆಯುಕ್ತರು

ಮೈಸೂರು ಮಿತ್ರ


# ಶ್ರೀರಂಗಪಟ್ಟಣದಲ್ಲಿ ಪಾರಂಪರಿಕ ಜಂಬೂಸವಾರಿ

## ಜನಮನಸೂರೆಗೊಂಡ ಜಾನಪದ, ಸಾಂಸ್ಕೃತಿಕ ಕಲಾತಂಡಗಳು

**ವಿನಯ್ ಕಾರೇಕುರ**

ಶ್ರೀರಂಗಪಟ್ಟಣ, ಸೆ.28– ಶ್ರೀರಂಗಪಟ್ಟಣದಲ್ಲಿ ಪಾರಂಪರಿಕ ಜಂಬೂಸವಾರಿ ಮೆರವಣಿಗೆಯು ಅದ್ದೂರಿಯಾಗಿ ನೆರವೇರಿತು. ಶ್ರೀಚಾಮುಂಡೇಶ್ವರಿ ಮೂರ್ತಿಯ ಅಂಬಾರಿ ಹೊತ್ತ ಮಹೇಂದ್ರ ಗಜ ಗಾಂಭೀರ್ಯದ ನಡಿಗೆ ಮೂಲಕ ಜಂಬೂ ಸವಾರಿಯ ಕೇಂದ್ರ ಬಿಂದುವೆನಿಸಿತು. ಮಹೇಂದ್ರನಿಗೆ ವಿಜಯ ಹಾಗೂ ಕಾವೇರಿ ಆನೆಗಳು ಸಾಥ್ ನೀಡಿ ಐತಿಹಾಸಿಕ ಶ್ರೀರಂಗಪಟ್ಟಣ ದಸರಾ ಮಹೋತ್ಸವದ ವೈಭವವನ್ನು ನೆನಪಿಸಿತು.

ಕಿರಂಗೂರು ಬನ್ನಿಮಂಟಪದ ಬಳಿ ಮಧ್ಯಾಹ್ನ 4 ಗಂಟೆಗೆ ಸಲ್ಲುವ ಶುಭ ಲಗ್ನದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಪುಷ್ಪಾರ್ಚನೆ ಮಾಡುವ ಮೂಲಕ ಅಂಬಾರಿ ಮೆರವಣಿಗೆಗೆ ಚಾಲನೆ ನೀಡಿದರು.



ಇದಕ್ಕೂ ಮುನ್ನ ವಿಶೇಷ ಪುಷ್ಪಾಲಂಕಾರಗಳಿಂದ ಸಿಂಗರಿಸಲಾಗಿದ್ದ ಬನ್ನಿಮಂಟಪದಲ್ಲಿ ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಗೆ ವೇದಬ್ರಹ್ಮ ಡಾ.ಭಾನುಪ್ರಕಾಶ್ ಶರ್ಮಾ ನೇತೃತ್ವದಲ್ಲಿ ಮೊದಲಿಗೆ ಸ್ಥಳಶುದ್ಧಿ, ಗಣಪತಿ ಹೋಮ, ಪುಣ್ಯಾಹ, ದುರ್ಗಾ ಸಪ್ತಸತಿ ಪಾರಾಯಣ, ಬನ್ನಿಪೂಜೆ, ಶತರುದ್ರ ಪಾರಾಯಣ, ಕೂಷ್ಮಾಂಡ ಛೇದನ, ಮಹಾ ಮಂಗಳಾರತಿ ಸೇರಿದಂತೆ ಹಲವು ವಿಶೇಷ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಶಾಸಕ ರವೀಂದ್ರ ಶ್ರೀಕಂಠಯ್ಯ ದಂಪತಿಗಳ ಸಮೇತ ಪೂಜೆಯಲ್ಲಿ ಪಾಲ್ಗೊಂಡು ಪೂಜೆ ಸಲ್ಲಿಸಿದರು.

ಬನ್ನಿಮಂಟಪದಿಂದ ಹೊರಟ ಅಂಬಾರಿ ಮೆರವಣಿಗೆಯು ಕಿರಂಗೂರು, ಬಾಬುರಾಯನ ಕೊಪ್ಪಲು ಮಾರ್ಗವಾಗಿ ಬೆಂಗಳೂರು–ಮೈಸೂರು ಹೆದ್ದಾರಿ ಮೂಲಕ ಶ್ರೀರಂಗಪಟ್ಟಣ ಮುಖ್ಯದ್ವಾರ ಪ್ರವೇಶಿಸಿತು. ಪಟ್ಟಣದ ಮುಖ್ಯ ರಸ್ತೆಗಳ ಇಕ್ಕೆಲಗಳಲ್ಲಿ ಸೇರಿದ್ದ ಅಪಾರ ಜನಸ್ತೋಮವು ಅಂಬಾರಿ ಮೆರವಣಿಗೆ ಹಾಗೂ ಕಲಾತಂಡಗಳ ಸೊಬಗನ್ನು ಕಣ್ತುಂಬಿಕೊಂಡರು. ಶ್ರೀರಂಗನಾಥಸ್ವಾಮಿ ದೇವಾಲಯದ ಬಳಿಯ ಶ್ರೀರಂಗನಾಥಸ್ವಾಮಿ ದೇವಾಲಯದ ಬಳಿ ನಿರ್ಮಾಣಗೊಂಡಿರುವ ಶ್ರೀರಂಗ ವೇದಿಕೆ ಬಳಿ ಮೆರವಣಿಗೆಯನ್ನು ಅಂತ್ಯಗೊಳಿಸಲಾಯಿತು.

ಮೆರವಣಿಗೆಯಲ್ಲಿ ಪೂಜಾಕುಣಿತ, ಡೊಳ್ಳು ಕುಣಿತ, ಪೊಲೀಸ್ ಬ್ಯಾಂಡ್, ಅಶ್ವದಳ, ವೀರಗಾಸೆ, ಗೊಂಬೆಕುಣಿತ, ಕಂಸಾಳೆ, ಕೊಂಬು ಕಹಳೆ, ಚಿಲಿಪಿಲಿಗೊಂಬೆ, ನಂದಿಧ್ವಜ, ನಾದಸ್ವರ, ಕೋಲಾಟ, ನಾಸಿಕ್ ಬ್ಯಾಂಡ್, ಯಕ್ಷಗಾನ, ದೊಣ್ಣೆವರಸೆ, ಹೆನ್ ಆಕ್ಟ್, ಕೇರಳ ಥೈಯಂ, ಲೋಟಸ್ ಡ್ಯಾನ್ಸ್ ಹ್ಯಾಂಟ್, ವೈಲಿಂಗ್ ಗರ್ಸ್, ಪಿಕಾಕ್ ಡ್ಯಾನ್ಸ್, ಲಂಬಾಣಿನೃತ್ಯ, ಕಥಕ್ಕಳಿ, ಮೋಹಿನಿಆಟ್ಟಂ, ದಾಂಡ್ಯ ನೃತ್ಯ, ಮಣಿಪುರ್ ನೃತ್ಯ, ವಿದೇಶಿ ಕಲಾವಿದರಿಂದ ಗೋವ ಕಾರ್ನಿಂಗ್ ವಾಲ್ ಪ್ರದರ್ಶನ, ಮಿರರ್ ಮ್ಯಾನ್, ಚೈನಿಸ್ ಲಯನ್, ಹ್ಯಾಲೋ ಮ್ಯಾನ್, ಕೇರಳ ದಂಡೆ ವಾದ್ಯ ಸೇರಿದಂತೆ ಹಲವು ಜಾನಪದ ಕಲಾತಂಡಗಳು ಗಮನ ಸೆಳೆದವು. ವಿವಿಧ ಇಲಾಖೆಗಳಿಂದ ಸಾಮಾಜಿಕ ಕಾಳಜಿಯುಳ್ಳ ಹತ್ತಕ್ಕೂ ಹೆಚ್ಚು ಸ್ತಬ್ಧ ಚಿತ್ರಗಳ ಮೆರವಣಿಗೆಯಲ್ಲಿ ಸಾಗಿದ್ದವು. ಪೊಲೀಸ್ ಇಲಾಖೆ ಏರ್ಪಡಿಸಿದ್ದ 'ಹೆಲ್ಮೆಟ್ ಕಡ್ಡಾಯ' ಇಲ್ಲದಿದ್ದರೆ ಯಮಲೋಕಕ್ಕೆ ಪಯಣ ಖಚಿತ ಎಂಬ ಸ್ತಬ್ಧಚಿತ್ರ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಬನ್ನಿಮಂಟಪದ ಬಳಿ ವಿಶೇಷ ಪೂಜೆ ಹಾಗೂ ಅಂಬಾರಿ ಮೆರವಣಿಗೆಗೆ ಚಾಲನೆ ನೀಡುವ ದೃಶ್ಯವನ್ನು ಕಣ್ತುಂಬಿಕೊಳ್ಳಲು ಸಾರ್ವಜನಿಕರಿಗೆ ಬೆಂಗಳೂರು–ಮೈಸೂರು ಹೆದ್ದಾರಿ, ಪಟ್ಟಣದ ಸಾರ್ವಜನಿಕ ಬಸ್ ನಿಲ್ದಾಣ, ಪುರಸಭೆ ವೃತ್ತ ಹಾಗೂ ತಾಲೂಕು ಕಚೇರಿ ಮುಂಭಾಗ ಆಸನದ ವ್ಯವಸ್ಥೆ ಮಾಡಲಾಗಿತ್ತು. ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ರೇಷ್ಮೆ ಯುವ ಸಬಲೀಕರಣ ಹಾಗೂ ಕ್ರೀಡೆ ಸಚಿವ ಕೆ.ಸಿ. ನಾರಾಯಣಗೌಡ, ಶಾಸಕ ರವೀಂದ್ರ ಶ್ರೀಕಂಠಯ್ಯ, ಜಿಲ್ಲಾಧಿಕಾರಿ ಎಸ್.ಅಶ್ವಥಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್, ಪಾಂಡವಪುರ ಉಪವಿಭಾಗಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಪುರಸಭೆ ಅಧ್ಯಕ್ಷೆ ನಿರ್ಮಲಾ, ಉಪಾಧ್ಯಕ್ಷ ಕೃಷ್ಣಪ್ಪ, ಸೇರಿದಂತೆ ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತದ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಉಪಸ್ಥಿತರಿದ್ದರು.

### ಜಂಬೂ ಸವಾರಿಯಲ್ಲಿ ಪಾಲ್ಗೊಂಡಿದ್ದ ಕಲಾತಂಡಗಳು









# ಮಹಾ ಕುಂಭಮೇಳದ ಯಶಸ್ವಿಗೆ ಮನವಿ

ಕೆ.ಆರ್.ಪೇಟೆ,ಸೆ.28– ತಾಲೂಕಿನ ಅಂಬಿಗರಹಳ್ಳಿಯ ತ್ರಿವೇಣಿ ಸಂಗಮದಲ್ಲಿ ಅ.13 ರಿಂದ 16 ರವರೆಗೆ ನಡೆಯಲಿರುವ ಕುಂಭ ಮೇಳ ಕಾರ್ಯಕ್ರಮದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಹಾಗೂ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರುಗಳು ಭಾಗವಹಿಸಲಿದ್ದಾರೆ. ಕುಂಭಮೇಳ ಯಶಸ್ವಿಯಾಗಿ ನಡೆಸಲು ಎಲ್ಲರೂ ಸಹಕರಿಸಬೇಕು ಎಂದು ಅಬಕಾರಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯ ಕೆ ತಿಳಿಸಿದರು.

ಅವರು ಇಂದು ತ್ರಿವೇಣಿ ಸಂಗಮದಲ್ಲಿ ಮಹಾ ಕುಂಭಮೇಳದ ಪ್ರಚಾರ ವಾಹನಕ್ಕೆ ಚಾಲನೆ ನೀಡಿ, ಮಾತನಾಡಿದರು. ಈ ಕಾರ್ಯಕ್ರಮಕ್ಕೆ ನಾನಾ ಭಾಗಗಳಿಂದ ಸಾಧು, ಸಂತರು ಭಾಗವಹಿಸಲಿದ್ದಾರೆ. ಇದಕ್ಕಾಗಿ ಜಿಲ್ಲಾಡಳಿತ ಅಗತ್ಯ ಸಿದ್ಧತೆ ಮಾಡಿಕೊಂಡಿದೆ ಎಂದರು.

**ಜಿಲ್ಲೆಯ ಸೇವೆ ನನ್ನ ಗುರಿ:** ಮಹಾಕುಂಭ ಮೇಳವನ್ನು ಜಗದ್ಗುರುಗಳ ಸೂಚನೆಯಂತೆ



ಯಾವ ರೀತಿ ಮಾಡಬೇಕು ಎಂಬುದರ ಕುರಿತು ಇಂದು ಪೂರ್ವಭಾವಿ ಸಭೆ ನಡೆಸಲಾಯಿತು. ಮಹಾಕುಂಭಮೇಳ ನಡೆಯುತ್ತಿರುವುದು ನಮ್ಮೆಲ್ಲರ ಪುಣ್ಯ. 9 ವರ್ಷಗಳ ಹಿಂದೆ ಅದ್ಭುತವಾಗಿ ನಡೆದಿತ್ತು. ಇದೀಗ ಮತ್ತೆ ಜಗದ್ಗುರುಗಳ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಸೋಣ. ಇದು ಕೆಆರ್ ಪೇಟೆಗೆ ಮಾತ್ರವಲ್ಲ, ಸುತ್ತಮುತ್ತಲಿನ ನಾಲ್ಕೈದು ಜಿಲ್ಲೆಗಳಿಗೆ ಹೆಮ್ಮೆಯ ಕಾರ್ಯಕ್ರಮ. ನಾನು ಸೇವಕನಾಗಿ ದುಡಿಯೋಕೆ ಬಂದಿದ್ದು, ರಾಜಕಾರಣದಿಂದ ಏನನ್ನೂ ಮಾಡಬೇಕಿಲ್ಲ. ಸೇವಕನಾಗಿ ದುಡಿದು ಕುಂಭಮೇಳವನ್ನು ಅಂತರ ರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗೋಣ. ಈ ಕಾರ್ಯಕ್ರಮಕ್ಕೆ ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಸೇರಿದಂತೆ ಹಲವು ಗಣ್ಯರು ಬರಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಯಶಸ್ವಿಗೊಳಿಸಬೇಕು ಎಂದು ಸಚಿವ ಡಾ.ನಾರಾಯಣಗೌಡ ಹೇಳಿದರು.

9 ವರ್ಷಗಳ ಹಿಂದೆ ಯಾವುದೇ ಪೂರ್ವ ಸಿದ್ಧತೆಗಳಿಲ್ಲದೇ, ದಿಢೀರ್ ಆಗಿ ರೂಪುಗೊಂಡು ಯಶಸ್ವಿಯಾಗಿ ಕುಂಭಮೇಳ ನಡೆದಿತ್ತು. ಆಗ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡಿದ್ದ ನಾರಾಯಣಗೌಡರು ಯಶಸ್ವಿಗೊಳಿಸಿದ್ದರು. ಈಗ ಸಚಿವರಾಗಿ ಮತ್ತೊಮ್ಮೆ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡಿದ್ದು, ಉತ್ತಮವಾಗಿ ರೂಪಿಸುತ್ತಿದ್ದಾರೆ. ಮಹಾ ಕುಂಭಮೇಳದ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಎಲ್ಲರ ಸುಯೋಗ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಗಂಗಾರತಿ, ಸ್ನಾನಘಟ್ಟಗಳನ್ನು ನಿರ್ಮಿಸಲಾಗುತ್ತಿದ್ದು, ಸ್ನಾನಘಟ್ಟಗಳನ್ನು ಬಳಸುವಾಗ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಎಲ್ಲರೂ ಇದಕ್ಕೆ ಸಹಕರಿಸಬೇಕು ಎಂದು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಹೇಳಿದರು.

ಕುಂಭಮೇಳ ಆಯೋಜನೆ ಕುರಿತು ಈ ಹಿಂದೆ ವಿಜಯನಗರದ ಮಠದಲ್ಲಿ ಪೂರ್ವಭಾವಿ ಸಭೆ ನಡೆದಿತ್ತು ಇಂದು ಅದಕ್ಕೆ ಪೂರಕವಾಗಿ ಮತ್ತೊಂದು ಸಭೆ ನಡೆದಿದೆ. ಸರ್ಕಾರ, ಜಿಲ್ಲಾಡಳಿತದಿಂದ ಎಲ್ಲಾ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ನದಿ ನೀರಿಗೆ, ಗಾಳಿಗೆ ಯಾವುದೇ ಜಾತಿ ಇಲ್ಲ. ಜಾತಿಬೇಧ, ಪಕ್ಷಭೇದ ಮರೆತು ಎಲ್ಲರೂ ಒಟ್ಟಾಗಿ ಸೇರಿ ಇದನ್ನು ಯಶಸ್ವಿಗೊಳಿಸಬೇಕು. ಇದು ಜನಮಾನಸಕ್ಕೆ ಮುಟ್ಟುವ ಕಾರ್ಯಕ್ರಮವಾಗಲಿ ಎಂದು ನಿರ್ಮಲಾನಂದ ಸ್ವಾಮೀಜಿಯವರು ಹೇಳಿದರು.

ಜಿಲ್ಲಾಧಿಕಾರಿ ಎಸ್.ಅಶ್ವತಿ ಅವರು ಶ್ರೀ ಮಲೆ ಮಹದೇಶ್ವರ ಜ್ಯೋತಿ ಯಾತ್ರೆಗೆ ಕೈಗೊಂಡಂತಹ ಮೂರು ಮಾರ್ಗಗಳ ಬಗ್ಗೆ ವಿವರವಾಗಿ ತಿಳಿಸಿದರು. ಕುಂಭಮೇಳದಲ್ಲಿ ನಡೆಯುವಂತಹ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು, ವೇದಿಕೆಯ ನಕ್ಷೆ ಸೇರಿದಂತೆ ಈವರೆಗೆ ಕೈಗೊಂಡಂತಹ ಪೂರ್ವ ಸಿದ್ಧತೆಗಳ ಸಂಪೂರ್ಣ ಮಾಹಿತಿ ನೀಡಿದರು.

ಕಾಗಿನೆಲೆ ಶಾಖಾಮಠದ ಶಿವಾನಂದ ಪುರಿ ಸ್ವಾಮೀಜಿ, ಎಂಎಲ್ಸಿ ಕೇಶವ ಪ್ರಸಾದ್, ಮಾಜಿ ಎಂಎಲ್ಸಿ ಮಾದೇಗೌಡ, ಎಸ್ಪಿ ಯತೀಶ್, ಅಪರ ಡಿಸಿ ಡಾ: ಎಚ್.ಎಲ್ ನಾಗರಾಜು ಇತರೆ ಹಲವು ಗಣ್ಯರು ಉಪಸ್ಥಿತರಿದ್ದರು.

# ದಸರಾ ಅದ್ಧೂರಿ ಮನರಂಜನೆ

# ಯುವ ದಸರಾ ಅಪ್ಪುಗೆ ಅರ್ಪಣೆ







ಒಂದನೇ ಪುಟದಿಂದ

**ಅಪ್ಪು ನಮನ:** 'ಯುವ ದಸರಾ' ಕಾರ್ಯಕ್ರಮದ ಮೊದಲ ದಿನ ಡಾ.ಪುನೀತ್ ರಾಜ್‌ಕುಮಾರ್ ಅಭಿನಯದ ಚಲನ ಚಿತ್ರಗಳ ಸೂಪರ್ ಹಿಟ್ ಹಾಡುಗಳನ್ನು ಪ್ರಸ್ತುತಪಡಿಸುವುದರ ಜೊತೆಗೆ ಅಮೋಘ ನೃತ್ಯ ಪ್ರದರ್ಶನದ ಮೂಲಕ 'ಅಪ್ಪುಗೆ ನಮನ' ಸಲ್ಲಿಸಲಾಯಿತು. ಸಂಗೀತ ದಿಗ್ಗಜರಾದ ಗುರುಕಿರಣ್, ವಿಜಯ್‌ಪ್ರಕಾಶ್, ಕುನಾಲ್ ಗಾಂಜಾವಾಲ ಹಾಗೂ ಅನುರಾಧ ಭಟ್ ತಮ್ಮ ಕಂಠಸಿರಿಯಿಂದ ಅಪ್ಪು ನೆನೆದರೆ, ನೂರಾರು ನೃತ್ಯ ಕಲಾವಿದರು ಹೆಜ್ಜೆಹಾಕಿ 'ಪುನೀತ್ ರಾಜ್‌ಕುಮಾರ್' ಅವರ ನೃತ್ಯ ಶೈಲಿಯನ್ನು ಆನಂದಿಸುವಂತೆ ಮಾಡಿದರು.

ಗೋಣಿಕೊಪ್ಪಲಿನ ಕಾವೇರಿ ಕಾಲೇಜು ವಿದ್ಯಾರ್ಥಿಗಳ ತಂಡದ 'ಕೊಡವ ಸಾಂಸ್ಕೃತಿಕ ನೃತ್ಯ'ದೊಂದಿಗೆ ಆರಂಭಗೊಂಡ 'ಯುವ ದಸರಾ'ಗೆ ಮೈಸೂರು ನೃತ್ಯ ಕಲಾವಿದರ ತಂಡ 'ಅಪ್ಪು' ನಟನೆಯ ಹತ್ತಾರು ಹಾಡುಗಳಿಗೆ ಮನಮೋಹಕ ನೃತ್ಯ ಪ್ರದರ್ಶನ ನೀಡುವ ಮೂಲಕ ವರ್ಣರಂಜಿತ ಕಳೆತಂದರು. ವೇದಿಕೆ ಕಾರ್ಯಕ್ರಮ ಮುಗಿದ ಬಳಿಕ ನಿರೂಪಣೆಯ ಜವಾಬ್ದಾರಿ ಪಡೆದ ಖ್ಯಾತ ನಿರೂಪಕಿ ಅನುಶ್ರೀ, ಎಲ್ಲರ ನಗುವಿನಲ್ಲಿಯೂ ಪುನೀತ್ ರಾಜ್‌ಕುಮಾರ್ ಕಾಣಿಸುತ್ತಿದ್ದಾರೆ ಎಂದು ಹೇಳಿ 'ಅಪ್ಪು ನಮನ'ವನ್ನು 'ಅಪ್ಪು ಸಂಭ್ರಮ'ವನ್ನಾಗಿಸಿದರು.

ನಂತರ 'ಎದೆ ತುಂಬಿ ಹಾಡುವೆನು' ತಂಡದ ಗಾಯಕರು 'ಪವರ್' ಸಿನಿಮಾ 'ಧಮ್ ಪವರೇ' ಹಾಡನ್ನು ಹಾಡಿ ರಂಜಿಸಿದರು. ನಟ ವಸಿಷ್ಠ ಸಿಂಹ, 'ಅಭಿಮಾನಿಗಳೇ ನಮ್ಮನೆ ದೇವ್ರು' ಎಂದಿದ್ದ ಪುನೀತ್ ರಾಜ್‌ಕುಮಾರ್ ಇಂದು ಅಭಿಮಾನಿಗಳಿಗೆ ದೇವರಾಗಿದ್ದಾರೆ. ಅವರ ಆದರ್ಶಗಳನ್ನು ಪಾಲಿಸುತ್ತಾ ನಮ್ಮಿಂದ ಸಾಧ್ಯವಾದರೆ ನಾಲ್ಕು ಜನಕ್ಕೆ ಸಹಾಯ ಮಾಡಿ ಎಂದರಲ್ಲದೆ 'ರಾಜಕುಮಾರ' ಚಿತ್ರದ ಹಾಡನ್ನು ಹಾಡಿ, ಅವರೊಂದಿಗೆ ಕಳೆದಿದ್ದ ದಿನಗಳನ್ನು ನೆನೆದರು. ಅಲ್ಲದೆ ತಮ್ಮದೆ ಶೈಲಿಯಲ್ಲಿ ಕೆಲ ಡೈಲಾಗ್‌ಗಳನ್ನು ಹೇಳಿ ಎಲ್ಲರನ್ನು ಸಂಭ್ರಮಿಸಿದರು.

'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ಕಾರ್ಯಕ್ರಮದಲ್ಲಿ ಖ್ಯಾತಿ ಪಡೆದಿದ್ದ ಭಾವನ ಮತ್ತು ಇಬ್ರಾಹಿಂ ಅವರ ತಂಡ 'ನಟ ಸಾರ್ವಭೌಮ' ಚಿತ್ರದ ಹಾಡುಗಳು ಸೇರಿದಂತೆ ಕೆಲ ರಿಮಿಕ್ಸ್ ಹಾಡುಗಳಿಗೆ ನೃತ್ಯ ಪ್ರದರ್ಶನ ನೀಡಿ 'ವಿ ಆರ್ ಲವ್ ಯು ಪವರ್ ಸ್ಟಾರ್' ಎಂಬ ಘೋಷಣೆ ಮೊಳಗುವಂತೆ ಮಾಡಿದರು. ಗಾಯಕಿ ಅನುರಾಧ ಭಟ್ 'ಆಕಾಶ್' ಚಿತ್ರ 'ಹಾಹಾ ಎಂಥಾ ಆ ಕ್ಷಣ ನೆನೆದರೆ ತಲ್ಲಣ' ಹಾಡನ್ನು ಸುಮಧುರವಾಗಿ ಹಾಡುವ ಮೂಲಕ ಅಭಿಮಾನಿಗಳು ತಲೆತೂಗುವಂತೆ ಮಾಡಿದರು.

**'ಅಪ್ಪು ವಿ ಲವ್‌ಯು':** 'ಮೈಲಾರಿ' ಚಿತ್ರದ 'ಊರಿಂದ ಓಡಿ ಬಂದ ಮೈಲಾಪುರ ಮೈಲಾರಿ' ಹಾಡನ್ನು ಹಾಡುತ್ತಾ ವೇದಿಕೆಗೆ ಆಗಮಿಸಿದ ಸಂಗೀತ ದಿಗ್ಗಜ ಗುರುಕಿರಣ್, 'ಅಪ್ಪು' ಚಿತ್ರದ 'ತಾಲಿಬಾನ್ ಅಲ್ಲ ಅಲ್ಲ', 'ಮೌರ್ಯ' ಚಿತ್ರದ 'ಉಸಿರಾಗುವೆ ಹಸಿರಾಗುವೆ', ಅಮ್ಮ ಅಮ್ಮ ಐ ಲವ್‌ಯೂ' ಹಾಡನ್ನು ಹಾಡುತ್ತಲೇ 'ಅಪ್ಪು ಅಪ್ಪು ವಿ ಲವ್‌ಯೂ' ಎಂದು ಸೊಗಸಾಗಿ ಹಾಡುವುದರೊಂದಿಗೆ ಅಭಿಮಾನಿಗಳು ಅಪ್ಪು ಅಭಿಮಾನವನ್ನೆ ಅಪ್ಪಿ ಮುದ್ದಾಡುವಂತೆ ಮಾಡಿದರು.

ಇದೇ ವೇಳೆ 'ಅಪ್ಪು' ನಿನಗಾಗಿ ಹಾಡುತ್ತೇನೆ ಎಂದು ವೇದಿಕೆಗೆ ಆಗಮಿಸಿದ ನಟ ರಾಘವೇಂದ್ರ ರಾಜ್‌ಕುಮಾರ್, 'ಕಸ್ತೂರಿ ನಿವಾಸ' ಚಿತ್ರದ 'ಆಡಿಸಿ ನೋಡು ಬೀಳಿಸಿ ನೋಡು', 'ರಾಜಕುಮಾರ' ಚಿತ್ರದ 'ಬೊಂಬೆ ಹೇಳುತೈತೆ ಮತ್ತೆ ಹೇಳುತೈತೆ ನೀನೇ ರಾಜಕುಮಾರ' ಹಾಡನ್ನು ಹಾಡಿ ಪುನೀತ್ ರಾಜ್‌ಕುಮಾರ್ ಅವರನ್ನು ಸ್ಮರಿಸಿದರು. ಬಳಿಕ ನಟಿ ಕಾವ್ಯ ಮತ್ತು ತಂಡದ ಕಲಾವಿದರು ತಮ್ಮ ನೃತ್ಯ ವೈಭವದ ಮೂಲಕ 'ಅಪ್ಪು ನಮ್ಮೆಲ್ಲರ ಸ್ವತ್ತು' ಎಂದು ಸಾರಿದರು.

**ವಿಜಯ್ ಪ್ರಕಾಶ್, ಕುನಾಲ್ ಗಾಂಜಾವಾಲಾ ಮಿಂಚು:** ಖ್ಯಾತ ಹಿಂದಿ ಗಾಯಕ ಕುನಾಲ್ ಗಾಂಜಾವಾಲಾ 'ಆಕಾಶ್' ಚಿತ್ರ 'ನೀನೇ ನೀನೇ ನನಗೆಲ್ಲ ನೀನೇ', ಮಿಲನ ಚಿತ್ರದ 'ಕಿವಿ ಮಾತೊಂದು ಹೇಳಲೆ ನಾನಿಂದು' ಸೇರಿದಂತೆ ಹಲವು ಹಾಡುಗಳನ್ನು ಹಾಡಿದರೆ, ಕನ್ನಡದ ಖ್ಯಾತ ಹಿನ್ನೆಲೆ ಗಾಯಕ ವಿಜಯ್‌ಪ್ರಕಾಶ್, ತಮ್ಮ ಹಾಡಿನ ಮೂಲಕ 'ಅಪ್ಪು ಅಜರಾಮರ' ಎಂದು ಸಾರಿದರು. ನಂತರ 'ಆಕಸ್ಮಿಕ' ಚಿತ್ರದ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಹಾಡು ಸೇರಿದಂತೆ ಪುನೀತ್ ರಾಜ್‌ಕುಮಾರ್ ಅಭಿನಯದ ಚಲನಚಿತ್ರಗಳ ಸೂಪರ್ ಹಿಟ್ ಹಾಡುಗಳನ್ನು ಪ್ರಸ್ತುತಪಡಿಸಿ ಯುವ ಸಮೂಹವನ್ನು ಕುಣಿದು ಕುಪ್ಪಳಿಸುವಂತೆ ಮಾಡಿದರು.

### ರಾರಾಜಿಸಿದ ಕನ್ನಡ ಬಾವುಟ...

ಪುನೀತ್ ರಾಜ್‌ಕುಮಾರ್ ಭಾವಚಿತ್ರವನ್ನೊಳಗೊಂಡ ಕನ್ನಡ ಬಾವುಟಗಳು ಮಹಾರಾಜ ಕಾಲೇಜು ಮೈದಾನದಲ್ಲಿ ರಾರಾಜಿಸಿದವು. ಪುನೀತ್ ರಾಜ್‌ಕುಮಾರ್ ಅವರ ಸಾವಿರಾರು ಅಭಿಮಾನಿಗಳು ಕಾರ್ಯಕ್ರಮದ ಆರಂಭದಿಂದ ಹಿಡಿದು ಮುಕ್ತಾಯದವರೆಗೂ ಬಾವುಟ ಹಾರಿಸಿದರು. ಹಲವರು ಪುನೀತ್ ರಾಜ್‌ಕುಮಾರ್ ಅವರ ಫೋಟೋಗಳನ್ನು ಹಿಡಿದು ಅಭಿಮಾನ ಮೆರೆಸಿದರು.

ಅವತ್ತು 'ಅಪ್ಪು'ವನ್ನು ಪ್ರೀತಿಸುತ್ತಿದ್ದೀರಿ. ಇವತ್ತು ಪೂಜಿಸುತ್ತಿದ್ದೀರಿ. ಪ್ರತಿಯೊಬ್ಬರಲ್ಲಿಯೂ ಅಪ್ಪು ಕಾಣಿಸುತ್ತಿದ್ದಾನೆ. ಅಪ್ಪು ಈ ಜೀವ ನಿನಗಾಗಿ. **– ರಾಘವೇಂದ್ರ ರಾಜ್‌ಕುಮಾರ್**

ಕರ್ನಾಟಕದ ಅತ್ಯಂತ ಜನಪ್ರಿಯ ನಟ ಪುನೀತ್ ರಾಜ್‌ಕುಮಾರ್. ಈ ವರ್ಷದ 'ಯುವ ದಸರಾ'ವನ್ನು ಅವರ ಶ್ರೀಮತಿ ಹಾಗೂ ಕುಟುಂಬಸ್ಥರು ಉದ್ಘಾಟಿಸಿರುವುದು ಅವಿಸ್ಮರಣೀಯ.

**– ಪ್ರತಾಪ್ ಸಿಂಹ, ಸಂಸದ**

ಪುನೀತ್ ರಾಜ್‌ಕುಮಾರ್ ಕನ್ನಡದ ಹೃದಯವಂತ ನಟ. ಡಾ.ರಾಜ್‌ಕುಮಾರ್ ಅವರ ಹೆಸರನ್ನು ಉಳಿಸಲು ಬಂದ ಕನ್ನಡದ ಕಂದ. ಸೂರ್ಯ–ಚಂದ್ರ ಇರುವವರೆಗೂ 'ಅಪ್ಪು ಅಜರಾಮರ'

**– ಎಲ್.ನಾಗೇಂದ್ರ, ಶಾಸಕ**

ಪುನೀತ್ ರಾಜ್‌ಕುಮಾರ್ ಅವರು ಪ್ರೀತಿಯಿಂದ 'ಗಂಧದಗುಡಿ' ಸಿನಿಮಾ ಮಾಡಿದ್ದಾರೆ. ನಾನು ಇದ್ದಂತೆಯೇ ತೋರಿಸಿ ಎಂಬ ಅವರ ಬಯಕೆಯಂತೆ ಚಿತ್ರೀಕರಣ ಮಾಡಲಾಗಿದೆ. ಅ.28 ರಂದು ಬಿಡುಗಡೆಯಾಗುವ 'ಗಂಧದಗುಡಿ' ಸಿನಿಮಾವನ್ನು ವಿಶ್ವಮಟ್ಟದಲ್ಲಿ ಯಶಸ್ವಿಗೊಳಿಸುವ ಜವಾಬ್ದಾರಿ ಅಭಿಮಾನಿಗಳದ್ದಾಗಿದೆ.

**– ಅಮೋಘ ವರ್ಷ, 'ಗಂಧದಗುಡಿ' ಸಿನಿಮಾ ನಿರ್ದೇಶಕ**

# ಶ್ರೀರಂಗಪಟ್ಟಣ ದಸರಾಕ್ಕೆ ಐತಿಹಾಸಿಕ ಮಹತ್ವ

## ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಬಣ್ಣನೆ

ಶ್ರೀರಂಗಪಟ್ಟಣ, ಸೆ.28–ಶ್ರೀರಂಗಪಟ್ಟಣ ದಸರಾಗೆ ನೂರಾರು ವರ್ಷಗಳ ಇತಿಹಾಸವಿದ್ದು, ಪೌರಾಣಿಕ, ಐತಿಹಾಸಿಕವಾಗಿ ನವರಾತ್ರಿ ಹಾಗೂ ವಿಜಯದಶಮಿಗೆ ವಿಶೇಷ ಪಾರಂಪರಿಕ ಮಹತ್ವವಿದೆ ಎಂದು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಹೇಳಿದರು.

ಶ್ರೀರಂಗಪಟ್ಟಣ ಸಮೀಪದ ಕಿರಂಗೂರು ಬನ್ನಿಮಂಟಪದಲ್ಲಿ ಜಂಬೂಸವಾರಿಗೆ ಚಾಲನೆ ನೀಡುವ ಮುನ್ನ ಮಾತನಾಡಿದ ಅವರು, ಮಹಾಭಾರತದಲ್ಲಿ ಪಾಂಡವರು ತಮ್ಮ ಅಜ್ಞಾತವಾಸ ಮುಗಿಸಿ ತೆರಳುವಾಗ ಶಸ್ತ್ರಾಸ್ತ್ರಗಳಿಗೆ ಪೂಜೆ ಸಲ್ಲಿಸಿದ್ದರಿಂದ ಆಯುಧ ಪೂಜೆಯೊಂದಿಗೆ ನವರಾತ್ರಿ ಉತ್ಸವ ಆಚರಣೆ ಮಾಡಿಕೊಂಡು ಬರಲಾಗುತ್ತಿದೆ ಎಂದರು.

ಶ್ರೀರಂಗಪಟ್ಟಣ ಒಂದು ಕಾಲಕ್ಕೆ ರಾಜಧಾನಿಯಾಗಿದ್ದಂತಹ ಸ್ಥಳವಾಗಿದ್ದು, ವಿಜಯನಗರದ ನಂತರ ದಸರಾ ಉತ್ಸವ ಆರಂಭವಾದ ಕೀರ್ತಿ ಶ್ರೀರಂಗಪಟ್ಟಣಕ್ಕೆ ಸಲ್ಲುತ್ತದೆ. ಇಲ್ಲಿಯ ಶ್ರೀರಂಗನಾಥ ಸ್ವಾಮಿಯ ಸಾನಿಧ್ಯದಿಂದಾಗಿ ಶ್ರೀರಂಗಪಟ್ಟಣ ಎಂಬ ಹೆಸರು ಬಂದಿದ್ದು, ಹಾಗೆಯೇ ಕಿರಿಯರ



ಊರು ಎಂದು ಕರೆಸಿಕೊಳ್ಳುತ್ತಿದ್ದ ಗ್ರಾಮ ಇದೀಗ ಕಿರಂಗೂರು ಆಗಿದೆ. ಈ ದಿವ್ಯ ಸನ್ನಿಧಿಯಲ್ಲಿ ಚಾಮುಂಡೇಶ್ವರಿ ದೇವಿಗೆ ಪೂಜೆ ಸಲ್ಲಿಸಿ ದರ್ಶನ ಪಡೆಯುವ ಸೌಭಾಗ್ಯ ದೊರೆತಿದೆ ಎಂದರು.

ಮನುಷ್ಯ ತನ್ನ ಬದುಕಿನಲ್ಲಿ ಧಾರ್ಮಿಕ ಆಚರಣೆಗಳನ್ನು ಅಳವಡಿಸಿಕೊಂಡು ನಡೆಯಬೇಕಾದುದ್ದು ಬಹಳ ಮುಖ್ಯ. ಎಷ್ಟೇ ಭೌತಿಕ ಸುಖ, ಸಂತೋಷಗಳಿದ್ದರೂ ಸಹ ಅವು ಶಾಶ್ವತವಾದ ಶಾಂತಿ ಮತ್ತು ನೆಮ್ಮದಿ ಕೊಡಲು ಸಾಧ್ಯವಿಲ್ಲ. ಭಗವಂತ ಮನುಷ್ಯನ ಸಾಧನೆಗೆ ನಮ್ಮ ಭಾರತೀಯ ಪರಂಪರೆಯಲ್ಲಿ ಅನೇಕ ಯೋಗ ಮಾರ್ಗಗಳನ್ನು ಕಲ್ಪಿಸಿಕೊಟ್ಟಿದ್ದಾನೆ. ಅವುಗಳಲ್ಲಿ ಭಕ್ತಿ ಮಾರ್ಗ, ಜ್ಞಾನ ಮಾರ್ಗ ಇತ್ಯಾದಿ ಯಾವುದೇ ಮಾರ್ಗದಲ್ಲಿ ಮನುಷ್ಯ ಭಕ್ತಿಯ ಸಮರ್ಪಣೆಗೆ ಮುಂದಾಗಿ ಮಾನಸಿಕವಾಗಿ ಯೋಗಕ್ಕೆ ಸಿದ್ಧವಾದರೆ ಜೀವನದಲ್ಲಿ ಸಾಧನೆ ಹಾಗೂ ಸಿದ್ಧಿ ಪಡೆದುಕೊಳ್ಳಲು ಸಾಧ್ಯ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಮಾತನಾಡಿ, ಶ್ರೀರಂಗಪಟ್ಟಣ ದಸರಾ ಆಚರಣೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೆಚ್ಚಿನ ಆಸಕ್ತಿ ಹೊಂದಿದ್ದು, 1 ಕೋಟಿ ರೂ. ಹಣ ಬಿಡುಗಡೆ ಮಾಡಿದ್ದಾರೆ. ದೇವೇಗೌಡರು ರಾಷ್ಟ್ರ ನಾಯಕರು, ಅವರ ಆರೋಗ್ಯದ ಹಿತದೃಷ್ಟಿಯಿಂದ ಅವರನ್ನು ದಸರಾ ಉದ್ಘಾಟನೆಗೆ ಆಹ್ವಾನಿಸಲು ಸಾಧ್ಯವಾಗಿಲ್ಲ. ಯಾರೂ ಅನ್ಯಥಾ ಭಾವಿಸುವುದು ಬೇಡ, ಪ್ರತಿ ವರ್ಷದಂತೆ ಈ ಬಾರಿಯು ಸಹ ಶ್ರೀರಂಗಪಟ್ಟಣ ದಸರಾವನ್ನು ಆಚರಿಸಲಾಗುತ್ತಿದೆ. ಸಣ್ಣಪುಟ್ಟ ಗೊಂದಲಗಳನ್ನು ಬದಿಗೊತ್ತಿ ಶ್ರೀರಂಗಪಟ್ಟಣ ದಸರಾ ಯಶಸ್ವಿಗೆ ಸಹಕರಿಸುವಂತೆ ಮನವಿ ಮಾಡಿದರು.

ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಈ ಪ್ರಾಂತ್ಯದ ಹಾಗೂ ರಾಜ್ಯದಲ್ಲಿ ಬಹಳ ಹೆಸರು ಮಾಡಿರುವಂತಹ ಹೆಸರಾಂತ ಸುತ್ತೂರು ಶ್ರೀಗಳು ಚಾಲನೆ ನೀಡಿದ್ದಾರೆ. ಸಡಗರ ಹಾಗೂ ಸಂಭ್ರಮದಿಂದ ಕಾರ್ಯಕ್ರಮ ಯಶಸ್ವಿಯಾಗಿದೆ. ದೇಶಿಕೇಂದ್ರ ಸ್ವಾಮೀಜಿಗಳು ಈ ನಾಡಿಗೆ ಹಲವಾರು ಕೊಡುಗೆಗಳನ್ನು ಕೊಟ್ಟಿದ್ದಾರೆ. ಅವರ ಕೈಯಿಂದ ದಸರಾಗೆ ಚಾಲನೆ ನೀಡಿರುವುದು ನಿಜವಾಗಿಯೂ ಅರ್ಥಪೂರ್ಣವಾಗಿದೆ ಎಂದರು.

### ನರಸಿಂಹೇಗೌಡ ನಿಧನ

ಕೆ.ಆರ್.ಪೇಟೆ,ಸೆ.28–ತಾಲೂಕಿನ ಅಗಸರಹಳ್ಳಿ ಗ್ರಾಮದ ಹಿರಿಯ ಮುಖಂಡರಾದ ನರಸಿಂಹೇಗೌಡ (85) ನಿಧನರಾದರು. ಮೃತರು ಪತ್ನಿ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಎನ್. ಗೋವಿಂದರಾಜು ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಬುಧವಾರ ಮಧ್ಯಾಹ್ನ ಸ್ವಗ್ರಾಮ ಅಗಸರಹಳ್ಳಿ ಗ್ರಾಮದಲ್ಲಿ ನಡೆಯಿತು.



### ವೈ.ಎನ್.ನಾಗರಾಜಪ್ಪ

ಯಳಂದೂರು,ಸೆ.28–ತಾಲೂಕು ನಿವೃತ್ತ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ, ನಿವೃತ್ತ ಉಪನ್ಯಾಸಕರೂ ಆದ ಜಿಲ್ಲೆಯ ದೇವಾಂಗ ಗಡಿಕಟ್ಟೆ ಮನೆಯ ಯಜಮಾನ್ ವೈ.ಎನ್. ನಾಗರಾಜಪ್ಪ(79) ಬುಧವಾರ ಮುಂಜಾನೆ ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಲಗಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಕಾರಾಪುರ ವಿರಕ್ತಮಠದ ಬಳಿಯ ರುದ್ರಭೂಮಿಯಲ್ಲಿ ಬುಧವಾರ ನೆರವೇರಿತು. ಶಾಸಕ ಸಿ.ಪುಟ್ಟರಂಗಶೆಟ್ಟಿ ಸೇರಿದಂತೆ ಅನೇಕ ಗಣ್ಯರು ಮೃತರ ದರ್ಶನ ಪಡೆದರು.





# ಮೈಸೂರು ದಸರಾ ಮಹೋತ್ಸವ - 2022



## ಐದು ದಿನಗಳ 'ಮೈಸೂರು ದಸರಾ ಕವಿಗೋಷ್ಠಿ'ಗೆ ವಿಧ್ಯುಕ್ತ ಚಾಲನೆ

# ಪ್ರಕೃತಿಯ ವಿಕೃತಿಗೆ ಕಾರಣರಾದ ನೀಚರ ಬಗ್ಗೆ ಕವಿತೆ ಬರೆಯಿರಿ



ಮೈಸೂರು, ಸೆ28(ಆರ್‌ಕೆಬಿ)– ಪ್ರೀತಿ, ದೇವರು, ಪ್ರಕೃತಿ, ಆಧ್ಯಾತ್ಮದ ವಿಚಾರ ಬಿಡಿ, ಅದರ ಬದಲಿಗೆ ಪ್ರಕೃತಿಯ ವಿಕೃತಿಗೆ ಕಾರಣರಾದ ನೀಚರ ಬಗ್ಗೆ ಕವಿತೆಗಳ ಹೆಚ್ಚಾಗಿ ಬರೆಯುವಂತೆ ಸುಪ್ರಸಿದ್ಧ ಕವಿ ಡಾ.ದೊಡ್ಡರಂಗೇಗೌಡ ಕವಿಗಳಲ್ಲಿ ಮನವಿ ಮಾಡಿದರು.

ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಆಯೋಜಿಸಿರುವ ಐದು ದಿನಗಳ ಮೈಸೂರು ದಸರಾ ಕವಿಗೋಷ್ಠಿಗೆ ಮೈಸೂರಿನ ಕಲಾಮಂದಿರದಲ್ಲಿ ಬುಧವಾರ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ನಮ್ಮ ಕವಿಗಳು ಹೆಚ್ಚಾಗಿ ಪ್ರಕೃತಿ ಕುರಿತು ಬರೆಯುತ್ತಿದ್ದಾರೆ. ಪ್ರಕೃತಿಯ ವಿಕೃತಿಗೆ ಕಾರಣರಾದ ನೀಚರನ್ನು, ಅಂತಹ ಶಕ್ತಿಗಳ ಬಗ್ಗೆ ಬರೆಯಬೇಕು. ಸಮಾಜಮುಖಿ ಕವಿತೆಗಳು ಇಂದು ಬರಬೇಕಿದೆ ಎಂದು ಕವಿಗಳಲ್ಲಿ ಮನವಿ ಮಾಡಿದರು.

ಸಮಾಜಕ್ಕೆ ಏನನ್ನಾದರೂ ಹೇಳಬಲ್ಲವನೆಂದರೆ ಆತ ಕವಿ ಮಾತ್ರ ಇಂದು ಅನೀತಿಯೇ ನೀತಿಗಳಾಗಿವೆ. ಅಕ್ರಮಗಳೇ ಕ್ರಮಗಳಾಗಿವೆ. ಇವೆಲ್ಲವನ್ನು ತೊಡೆದುಹಾಕಿ ಆದರ್ಶ ಸಮಾಜ ಕಟ್ಟುವಂತಾಗಬೇಕು. ಅಂತಹ ಕವಿತೆಗಳು ಬರಬೇಕು. ಆ ಕೆಲಸ ಕವಿಗಳಿಂದ ಮಾತ್ರ ಸಾಧ್ಯ. ಸಮಾಜದ ರೋಗಗ್ರಸ್ಥ ಅಂಶಗಳನ್ನು ಮೂಲೋತ್ಪಾಟನೆ ಮಾಡುವುದು ಕವಿಗಳ ಜವಾಬ್ದಾರಿಯಾಗಿದೆ. ಸಮಾಜವನ್ನು ಶುದ್ಧೀಕರಣ ಮಾಡುವಂತಹ ಕವಿತೆಗಳನ್ನು ಬರೆಯುವಂತೆ ಮನವಿ ಮಾಡಿದರು.

**ಕನ್ನಡಕ್ಕೆ ಭದ್ರವಾದ ಬೇರಿದೆ:** ಕನ್ನಡಕ್ಕೆ ಭದ್ರವಾದ ಬೇರಿದೆ. ಕನ್ನಡವನ್ನು ಎಂದೂ ನಾಶಮಾಡಲು ಸಾಧ್ಯವಿಲ್ಲ. ಸೂರ್ಯ ಇರುವವರೆಗೆ ಕನ್ನಡ ಇದ್ದೇ ಇರುತ್ತದೆ. ಭವ್ಯ ಪರಂಪರೆ ಇರುವ ಕನ್ನಡವನ್ನು ಉಳಿಸುವ ಕೆಲಸ ಕವಿಗಳದ್ದಾಗಿದೆ. ಕನ್ನಡವನ್ನು ಪುನರ್ನಿರ್ಮಿಸುವ, ಕನ್ನಡಕ್ಕೆ ಕಾಯಕಲ್ಪ ನೀಡುವಂತಹ ಕನ್ನಡ ಕವಿತೆಗಳು ಬರಬೇಕಿದೆ ಎಂದು ಆಶಿಸಿದರು.

ಸುಪ್ರಸಿದ್ಧ ವಾಗ್ಮಿ ಎಂ.ಕೃಷ್ಣೇಗೌಡ ಮಾತನಾಡಿ, ಪ್ರತಿಯೊಂದು ಊರಿಗೂ ಒಂದೊಂದು ಹೆಸರಿನ ವಿಶೇಷತೆ ಇರುತ್ತದೆ. ದಾವಣಗೆರೆ ಬೆಣ್ಣೆ ದೋಸೆ, ಧಾರವಾಡ ಕುಂದ, ಇಳಕಲ್ ಸೀರೆ ಹೀಗೆ ಪ್ರತಿಯೊಂದು ಊರಿಗೂ ಒಂದೊಂದು ವಿಶೇಷತೆಯಿಂದ ಕರೆಯಲಾಗುತ್ತದೆ. ಆ ಪೈಕಿ ಮೈಸೂರಿಗೆ ಮಾತ್ರ 18ಕ್ಕೂ ಹೆಚ್ಚು ವಿಶೇಷತೆ ಇದೆ ಎಂಬುದಕ್ಕೆ ನಾವು ಹೆಮ್ಮೆ ಪಡಬೇಕು. ಮೈಸೂರು ಮಲ್ಲಿಗೆ, ಮೈಸೂರು ಪೇಟ, ಮೈಸೂರು ಪಾಕ್, ವಿಳ್ಯೆದೆಲೆ, ರಸಬಾಳೆ, ಇನ್‌ಲೇ ಆರ್ಟ್, ಭರತನಾಟ್ಯ, ನೃತ್ಯ ಹೀಗೆ ಅನೇಕ ವಿಶೇಷತೆಗಳು ಮೈಸೂರು ಜೊತೆಗೆ ಅಂಟಿ ಕೊಂಡಿವೆ. ಅಂತಹ ಮೈಸೂರು ನಗರವನ್ನು ಬೆಳೆಸಿದ ಶಿಲ್ಪಿ ಮೈಸೂರು ಮಹಾರಾಜರದ್ದು. ಕುಸ್ತಿ ಕಲೆಗೂ ಮೈಸೂರು ಬಹಳ ಹೆಸರುವಾಸಿ.

ಜಗತ್ತಿನ ಯಾವುದೇ ಕಾಸ್ಮೋಪಾಲಿಟನ್ ನಗರಗಳ ಮುಖ್ಯ ಲಕ್ಷಣವೆಂದರೆ ಬಹಳ ಬೇಗ ನಗರವನ್ನು ಹಾಳು ಮಾಡುತ್ತವೆ. ಆದರೆ ಮೈಸೂರು ರಾಯಲ್ ಸಿಟಿಯಾಗಿದ್ದು, ತನ್ನ ಸಂಸ್ಕೃತಿ ಉಳಿಸಿ, ಬೆಳೆಸುತ್ತಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ಕಳೆದ ಎರಡು ವರ್ಷಗಳಿಂದ ಸರಳ ದಸರಾ ಆಚರಿಸಲಾಗಿತ್ತು. ಈ ಬಾರಿ ಅದ್ದೂರಿ ದಸರಾ ಹಿನ್ನೆಲೆಯಲ್ಲಿ ಕವಿಗೋಷ್ಠಿಯನ್ನು ಉತ್ತಮವಾಗಿ ನಡೆಸಲಾಗುತ್ತಿದೆ. ಕವಿಗಳಿಂದ ಉತ್ತಮ ಕವಿತೆಗಳು ಬರುತ್ತವೆಂಬ ವಿಶ್ವಾಸವಿದೆ ಎಂದು ಹೇಳಿದರು.

ನಂತರ ನಡೆದ 'ಹಾಸ್ಯ ಕವಿಗೋಷ್ಠಿ'ಯಲ್ಲಿ ದುಂಡಿರಾಜ್, ಭುವನೇಶ್ವರಿ ಹೆಗಡೆ, ಸುಕನ್ಯಾ ಕಳಸ, ರಾಮನಾಥ, ಶಾಂತಾರಾಮ ಶೆಟ್ಟಿ ಆರತಿ ಘಟಿಕಾರ್, ಮೋಹನ್ ಕಳಸಾಪುರ, ಮಧುರಾಣಿ, ಭಾಸ್ಕರ್ ಹೆಬ್ಬಾರ್, ನಿತಿನ್ ರಾಜಾರಾಂ (ಗಾಯಕ) ಅವರು ತಮ್ಮ ಹಾಸ್ಯ ಕವಿತೆಗಳನ್ನು ಮಂಡಿಸಿ, ಪ್ರೇಕ್ಷಕರನ್ನು ರಂಜಿಸಿದರು. ಖ್ಯಾತ ಹಾಸ್ಯ ಸಾಹಿತಿ ಬಿ.ಆರ್.ಲಕ್ಷ್ಮಣ್ ರಾವ್ ಹಾಸ್ಯ ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಮೇಯರ್ ಶಿವಕುಮಾರ್, ಉಪಮೇಯರ್ ರೂಪಾ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಮಾಜಿ ಅಧ್ಯಕ್ಷ ಅಪ್ಪಣ್ಣ, ದಸರಾ ಕವಿಗೋಷ್ಠಿ ಅಧ್ಯಕ್ಷ ಸಿ.ಬಿ.ಬಸವರಾಜಪ್ಪ ಉಪಾಧ್ಯಕ್ಷರಾದ ಎನ್.ರವಿ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ದಸರಾ ಉಪ ವಿಶೇಷಾಧಿಕಾರಿ ಡಾ.ಎಂ.ದಾಸೇಗೌಡ, ಕಾರ್ಯಾಧ್ಯಕ್ಷ ಡಾ.ಎಂ.ಜಿ.ಮಂಜುನಾಥ್, ಕಾರ್ಯದರ್ಶಿ ಹೆಚ್.ಡಿ.ಗಿರೀಶ್ ಇನ್ನಿತರರು ಉಪಸ್ಥಿತರಿದ್ದರು.

## ದಸರಾ ಉದ್ಘಾಟನೆಯ ವೇದಿಕೆಯಲ್ಲಿ ಮೇಯರ್, ಕ್ಷೇತ್ರದ ಶಾಸಕರಿಗಿಲ್ಲದ ಅವಕಾಶ

### ರಾಜ್ಯಪಾಲರಿಗೆ ಪತ್ರ ಚಳವಳಿ ಮುಖೇನ ಒತ್ತಾಯ



ಮೈಸೂರು,ಸೆ.28(ಪಿಎಂ)– ದಸರಾ ಉದ್ಘಾಟನಾ ಸಮಾರಂಭದಲ್ಲಿ ರಾಷ್ಟ್ರಪತಿ ಅವರೊಂದಿಗೆ ಮೇಯರ್ ಹಾಗೂ ಕ್ಷೇತ್ರದ ಶಾಸಕರು ವೇದಿಕೆ ಹಂಚಿಕೊಳ್ಳಲು ಅವಕಾಶ ನೀಡದೇ ಶಿಷ್ಟಾಚಾರ ಉಲ್ಲಂಘಿಸಲಾಗಿದ್ದು, ಇನ್ನು ಮುಂದಾದರೂ ಶಿಷ್ಟಾಚಾರದ ಕ್ರಮವನ್ನು ಪಾಲಿಸಲು ಸರ್ಕಾರಕ್ಕೆ ಸೂಚನೆ ನೀಡಬೇಕೆಂದು ದಲಿತ ಪ್ರಗತಿಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಪತ್ರ ಚಳವಳಿ ಮೂಲಕ ರಾಜ್ಯಪಾಲರನ್ನು ಒತ್ತಾಯಿಸಲಾಯಿತು.

ರಾಜ್ಯಪಾಲರಿಗೆ ಬರೆದ ಪತ್ರಗಳನ್ನು ಮೈಸೂರು ಮಹಾನಗರ ಪಾಲಿಕೆ ಎದುರಿನ ಅಂಚೆ ಪೆಟ್ಟಿಗೆಗೆ ಬುಧವಾರ ಹಾಕುವ ಮೂಲಕ ಚಳವಳಿ ನಡೆಸಲಾಯಿತು. ದಸರಾ ಉದ್ಘಾಟನಾ ಸಮಾರಂಭದಲ್ಲಿ ರಾಜ್ಯಪಾಲರು, ಕೇಂದ್ರ ಸಚಿವರು, ಮುಖ್ಯಮಂತ್ರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮಾತ್ರ ಅವಕಾಶ ನೀಡಲಾಗಿತ್ತು

ಆದರೆ ಕ್ಷೇತ್ರದ ಶಾಸಕರು ಹಾಗೂ ಮೇಯರ್ ಅವರಿಗೆ ವೇದಿಕೆಯಲ್ಲಿ ಅವಕಾಶ ನೀಡದೇ ದಸರಾ ಉದ್ಘಾಟನಾ ಸಮಾರಂಭದ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಶಿಷ್ಟಾಚಾರ ಉಲ್ಲಂಘಿಸಲಾಗಿದೆ. ವೇದಿಕೆಯಲ್ಲಿ ಮೈಸೂರಿನ ಪ್ರಥಮ ಪ್ರಜೆ ಮೇಯರ್ ಶಿವಕುಮಾರ್ ಮತ್ತು ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರಿಗೆ ಆಸೀನರಾಗಲು ಅವಕಾಶ ನೀಡಬೇಕಿತ್ತು. ಆದರೆ ಈ ಇಬ್ಬರು ಗಣ್ಯರಿಗೆ ವೇದಿಕೆಯಲ್ಲಿ ಆಸೀನರಾಗಲು ಅವಕಾಶ ನೀಡದೇ ಶಿಷ್ಟಾಚಾರ ಉಲ್ಲಂಘಿಸಲಾಗಿದೆ. ಈವರೆಗೆ ಮೈಸೂರಿಗೆ ಭೇಟಿ ನೀಡಿರುವ ಎಲ್ಲಾ ರಾಷ್ಟ್ರಪತಿಗಳಿಗೂ ಮೈಸೂರಿನ ಪರವಾಗಿ ಮೇಯರ್ ಸ್ಥಾನದಲ್ಲಿದ್ದವರು ಸ್ವಾಗತಕೋರಿ ಅವರ ಕಾರ್ಯಕ್ರಮಗಳಲ್ಲಿಯೂ ಭಾಗಿಯಾಗಿರುವುದನ್ನು ಕಾಣಬಹುದು.


ಇಂತಹ ಶಿಷ್ಟಾಚಾರ ಉಲ್ಲಂಘನೆ ಮೂಲಕ ಮೈಸೂರಿನ ಜನತೆ, ಸಂವಿಧಾನದ ನೀತಿ–ನಿಯಮ ಮತ್ತು ಆಶಯಕ್ಕೆ ಅಪಮಾನ ಮಾಡಲಾಗಿದೆ. ಇಂತಹ ಬೆಳವಣಿಗೆ ಮರುಕಳಿಸದಂತೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ರಾಜ್ಯಪಾಲರಲ್ಲಿ ಚಳವಳಿಗಾರರು ಒತ್ತಾಯಿಸಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ.ನಂಜರಾಜೇ ಅರಸ್, ಒಕ್ಕೂಟದ ಸಂಚಾಲಕ ಪಿ.ರಾಜು, ಮೈಸೂರು ನಗರ ಮಡಿವಾಳ ಸಂಘದ ಅಧ್ಯಕ್ಷ ಮಹದೇವ ವರುಣ, ಡಿಎಸ್‌ಎಸ್ ಜಿಲ್ಲಾ ಸಂಘಟನಾ ಸಂಚಾಲಕ ಕೆ.ಶಿವಕುಮಾರ್, ಡಾ.ಬಿ.ಆರ್.ಅಂಬೇಡ್ಕರ್ ಮಹಿಳಾ ಸಂಘದ ಬಬಿತಾ, ಜಿಪಂ ಮಾಜಿ ಸದಸ್ಯ ಪುಟ್ಟಮಾದಯ್ಯ, ಮುಖಂಡ ಸ್ವಾಮಿ ನಾಯಕ ಮತ್ತಿತರರು ಪಾಲ್ಗೊಂಡಿದ್ದರು.

# ಅರಮನೆ ಆವರಣದಲ್ಲಿ ನೂರಾರು ಮಂದಿ ಯೋಗ ಪ್ರದರ್ಶನ

## ಯೋಗದಿಂದ ಆರೋಗ್ಯದ ಜೊತೆಗೆ ಶಿಸ್ತು: ಸುತ್ತೂರು ಶ್ರೀಗಳು





ಮೈಸೂರು, ಸೆ.28(ಎಂಟಿವೈ)– ನಾಡಹಬ್ಬ ದಸರಾ ಅಂಗವಾಗಿ ಮೈಸೂರು ಅರಮನೆ ಆವರಣದಲ್ಲಿ ಬುಧವಾರ ಆಯೋಜಿಸಿದ್ದ ಯೋಗ ದಸರಾ ಕಾರ್ಯಕ್ರಮದಲ್ಲಿ ನೂರಾರು ಯೋಗಪಟುಗಳು ಪಾಲ್ಗೊಂಡು ವಿವಿಧ ಆಸನಗಳನ್ನು ಪ್ರದರ್ಶಿಸಿದರು.

ಯೋಗ ದಸರಾ ಉಪಸಮಿತಿ ವತಿಯಿಂದ ಆಯೋಜಿಸಿದ್ದ ಯೋಗ ಸಂಭ್ರಮ ಕಾರ್ಯಕ್ರಮವನ್ನು ಸುತ್ತೂರು ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು. ಮೈಸೂರಿನ ವಿವಿಧ ಯೋಗ ಶಾಲೆಗಳ ಯೋಗಪಟುಗಳು, ವಿವಿಧ ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಪಾಲ್ಗೊಂಡು ಯೋಗ ದಸರಾಗೆ ಮೆರಗು ನೀಡಿದರು.

**ಶಿಸ್ತು ಪಾಲನೆಗೆ ಸಹಕಾರಿ:** ಯೋಗ ದಸರಾ ಉದ್ಘಾಟಿಸಿದ ಬಳಿಕ ಸುತ್ತೂರು ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಕೇವಲ ಆರೋಗ್ಯ ಕಾಪಾಡಿಕೊಳ್ಳುವುದಕ್ಕೆ ಮಾತ್ರವಲ್ಲದೇ ಜೀವನದಲ್ಲಿ ಶಿಸ್ತು ಅಳವಡಿಸಿಕೊಳ್ಳುವುದಕ್ಕೂ ಯೋಗಾಭ್ಯಾಸ ಸಹಕಾರಿ. ಮಾನಸಿಕ ಮತ್ತು ದೈಹಿಕ ಆರೋಗ್ಯದ ಜೊತೆಗೆ ಜೀವನದಲ್ಲಿ ಶಿಸ್ತು ರೂಢಿಸಿಕೊಳ್ಳುವುದಕ್ಕೂ ಯೋಗಾಭ್ಯಾಸ ಅನುಕೂಲಕಾರಿ ಎಂದು ಎಲ್ಲರಿಗೂ ಮನವರಿಕೆಯಾಗುತ್ತಿದೆ. 50 ವರ್ಷ ಮೇಲ್ಪಟ್ಟ ಹಿರಿಯರಷ್ಟೇ ಯೋಗಾಭ್ಯಾಸ ಮಾಡುತ್ತಾರೆ ಅಂದುಕೊಂಡಿದ್ದರು. ಈಗ ಎಲ್ಲಾ ವಯೋಮಾನದವರೂ ಮಾಡುವುದನ್ನು ಕಾಣಬಹುದು. ದಸರಾ ಮಹೋತ್ಸವದಲ್ಲಿ ಯೋಗ ದಸರಾ ಆಚರಿಸುತ್ತಿರುವುದು ಶ್ಲಾಘನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ನಮ್ಮ ದೇಶದಲ್ಲಿ ಪ್ರವರ್ಧಮಾನಕ್ಕೆ ಬಂದ ಯೋಗವನ್ನು ಇದೀಗ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಅನುಸರಿಸಲಾಗುತ್ತಿದೆ. ಅನೇಕ ಆರೋಗ್ಯ ಸಮಸ್ಯೆಗಳನ್ನು ಯೋಗದಿಂದ ನಿವಾರಣೆ ಮಾಡಬಹುದು ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದೆ. ಅಂತಾರಾಷ್ಟ್ರೀಯ ಯೋಗ ದಿನವನ್ನು ಆಚರಿಸುವ ಮೂಲಕ ಯೋಗವನ್ನು ವಿಶ್ವಮಟ್ಟಕ್ಕೆ ಕೊಂಡೊಯ್ಯಲಾಯಿತು. ಯೋಗದ ಮಹತ್ವ ತಿಳಿದು ವಿದೇಶಿಗರು ಹೆಚ್ಚಿನ ಸಂಖ್ಯೆಯಲ್ಲಿ ಯೋಗ ಕಲಿಯಲು ಮುಂದಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಯೋಗ ದಸರಾ ಮೂಲಕ ಯೋಗಾಭ್ಯಾಸಕ್ಕೆ ಉತ್ತೇಜನ ನೀಡಲಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.

**75 ಆಸನ ಪ್ರದರ್ಶನ:** ಯೋಗ ಪ್ರದರ್ಶನದಲ್ಲಿ ಯೋಗಪಟುಗಳು ಕ್ಲಿಷ್ಟ ಹಾಗೂ ವಿಶೇಷವಾದ 75 ಆಸನಗಳನ್ನು ಪ್ರದರ್ಶಿಸಿದರು. ಬೆಳಗ್ಗೆ 6.15ಕ್ಕೆ ಆರಂಭವಾದ ಯೋಗ ಪ್ರದರ್ಶನ 8.20ಕ್ಕೆ ಪೂರ್ಣಗೊಂಡಿತು. ಇದೇ ವೇಳೆ ವಿವಿಧ ಯೋಗ ಸ್ಪರ್ಧೆಯಲ್ಲಿ ಪಾಲ್ಗೊಂಡು ವಿಜೇತರಾದ ಯೋಗಪಟುಗಳಿಗೆ ಬಹುಮಾನ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಪರಕಾಲ ಮಠದ ಶ್ರೀಕಾರ್ಯಂ ಶ್ರೀ ವೀರರಾಘವಾಚಾರ್ ಸ್ವಾಮಿ, ಸರ್ಕಾಜಿ ತಜಮುಲ್ ತನ್ವೀರ್, ಉಪ ಮೇಯರ್ ಡಾ.ರೂಪ, ಯೋಗ ಉಪಸಮಿತಿ ಉಪ ವಿಶೇಷಾಧಿಕಾರಿ ಸೀಮಂತಿನಿ, ಸಮಿತಿಯ ಅಧ್ಯಕ್ಷ ಬಾಲಕೃಷ್ಣ, ಉಪಾಧ್ಯಕ್ಷರಾದ ಈಶ್ವರ್, ಯೋಗೇಶ್‌ಕುಮಾರ್, ಕೆ.ವೈ.ಮಂಜು, ಅರುಣ್‌ಕುಮಾರ್, ಯೋಗ ಸಂಸ್ಥೆಗಳ ಮುಖ್ಯಸ್ಥರಾದ ಗಣೇಶ್ ಕುಮಾರ್, ಜಲೇಂದ್ರ ಕುಮಾರ್, ಶಶಿಕುಮಾರ್, ಬಿ.ಪಿ.ಮೂರ್ತಿ, ರಮೇಶ್ ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.



# ಮೈಸೂರು ದಸರಾದಲ್ಲಿ ಪುಸ್ತಕ ಪ್ರದರ್ಶನಕ್ಕೆ ಕೊಕ್

- ರಾಜ್ಯ ಬಿಜೆಪಿ ಸರಕಾರಕ್ಕೆ ಹೆಚ್.ಡಿ.ಕುಮಾರಸ್ವಾಮಿ ತರಾಟೆ
- ಕೂಡಲೇ ಪುಸ್ತಕ ಪ್ರದರ್ಶನ ಆಯೋಜಿಸಲು ಆಗ್ರಹ



ಬೆಂಗಳೂರು: ಜಗದ್ವಿಖ್ಯಾತ ನಾಡಹಬ್ಬ ಮೈಸೂರು ದಸರಾ ಉತ್ಸವದಲ್ಲಿ ಈ ವರ್ಷ ಕನ್ನಡ ಪುಸ್ತಕ ಪ್ರದರ್ಶನವನ್ನು ಕೈಬಿಟ್ಟಿರುವ ರಾಜ್ಯ ಬಿಜೆಪಿ ಸರಕಾರದ ವರ್ತನೆಯನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಕಟು ಶಬ್ದಗಳಲ್ಲಿ ಖಂಡಿಸಿದ್ದಾರೆ. ಈ ಬಗ್ಗೆ ಟ್ವೀಟ್ ಮಾಡಿರುವ ಅವರು ಸರಕಾರದ ನಡೆಯನ್ನು ಟೀಕಿಸಿದ್ದಾರಲ್ಲದೆ, ಮಾಧ್ಯಮ ಹೇಳಿಕೆಯನ್ನೂ ಬಿಡುಗಡೆ ಮಾಡಿದ್ದಾರೆ.

ಕನ್ನಡ ನಾಡಿನ ಶ್ರೀಮಂತ ಪರಂಪರೆ, ಸಾಹಿತ್ಯ ಸಿರಿ ಸಂಪತ್ತಿನ ಹೆಗ್ಗುರುತು ನಾಡಹಬ್ಬ ಮೈಸೂರು ದಸರಾ ಬಗ್ಗೆ ರಾಜ್ಯ ಬಿಜೆಪಿ ಸರಕಾರದ ನೀತಿ ಅತ್ಯಂತ ಖಂಡನೀಯ. ಕನ್ನಡ ಭಾಷೆ, ಸಂಸ್ಕೃತಿಯ ಕುರಿತು ಆಡಳಿತ ನಡೆಸುವವರ ದಿವ್ಯನಿರ್ಲಕ್ಷ್ಯ ಮಾತೃಭಾಷೆಗೆ ಮಾಡಿರುವ ಅಪಮಾನ ಮತ್ತು ದ್ರೋಹ ಎಂದು ಅವರು ಕಿಡಿಕಾರಿದ್ದಾರೆ.

ಮೈಸೂರು ದಸರೆಯಲ್ಲಿ ಕನ್ನಡ ಪುಸ್ತಕ ಪ್ರದರ್ಶನ ಅನಾದಿ ಕಾಲದಿಂದ ಅವಿಚ್ಛಿನ್ನವಾಗಿ ನಡೆದುಕೊಂಡು ಬರುತ್ತಿರುವ ಕನ್ನಡ ತಾಯಿಯ ಸೇವಾ ಕೈಂಕರ್ಯ. ಆದರೆ, ಬಿಜೆಪಿ ಸರಕಾರ ಕನ್ನಡ ಪುಸ್ತಕ ಪ್ರದರ್ಶನಕ್ಕೇ ಕೊಕ್ ಕೊಟ್ಟು, ತನ್ನ ಕನ್ನಡ ವಿರೋಧಿ ನೀತಿಯನ್ನು ಮತ್ತೊಮ್ಮೆ ಸಾರಿದೆ. ಪುಸ್ತಕ ಸಂಸ್ಕೃತಿಗೆ ಧಕ್ಕೆ ತಂದಿದೆ ಎಂದು ಅವರು ಹೇಳಿದ್ದಾರೆ.

ಮೈಸೂರು ಸಾಂಸ್ಕೃತಿಕ ನಗರಿ. ದಸರಾ, ಜಗದ್ವಿಖ್ಯಾತ ಸಾಂಸ್ಕೃತಿಕ ಉತ್ಸವ. ಹೀಗಿದ್ದೂ ರಾಜ್ಯ ಬಿಜೆಪಿ ಸರಕಾರವು ಕನ್ನಡವನ್ನು ಧಿಕ್ಕರಿಸಿ ತನ್ನ 'ರಹಸ್ಯ ಕಾರ್ಯಸೂಚಿ'ಯನ್ನು ಹೇರಲು ಹೊರಟಿದೆ. ಹಿಂದಿ ಭಾಷೆಯ ವಕ್ತಾರಿಕೆ ಮಾಡುವ ಬಿಜೆಪಿ ಪಕ್ಷದಿಂದ ಇನ್ನೇನು ನಿರೀಕ್ಷೆ ಮಾಡಲು ಸಾಧ್ಯ ಎಂದು ಕುಮಾರಸ್ವಾಮಿ ಅವರು ಪ್ರಶ್ನಿಸಿದ್ದಾರೆ.

ಕನ್ನಡವನ್ನು ಮುಗಿಸುವುದನ್ನೇ ರಾಜ್ಯ ಬಿಜೆಪಿ ಸರಕಾರದ ಸರಕಾರ ನಿತ್ಯಕಾಯಕ ಮಾಡಿಕೊಂಡಿದೆ. ಸಮಯ ಸಿಕ್ಕಾಗಲೆಲ್ಲಾ ಕನ್ನಡಕ್ಕೆ ಕೊಡಲಿ ಪೆಟ್ಟು ಕೊಡುವ ಕೆಲಸ ಮಾಡುತ್ತಲೇ ಇದೆ. ಕನ್ನಡಿಗರ ಶಾಂತಿ, ಸಹನೆಯನ್ನು ಬಿಜೆಪಿ ಪರೀಕ್ಷೆ ಮಾಡುತ್ತಿದೆ. ಬೇಕೆಂದೇ, ಉದ್ದೇಶಪೂರ್ವಕವಾಗಿ ಕನ್ನಡ ಪುಸ್ತಕ ಪ್ರದರ್ಶನವನ್ನು ಕೈಬಿಟ್ಟಂತೆ ಕಾಣುತ್ತಿದೆ. ರಾಜ್ಯ ಬಿಜೆಪಿ ಸರಕಾರ ಮತ್ತು ಕನ್ನಡ ಸಂಸ್ಕೃತಿ ಖಾತೆ ಸಚಿವ ಸುನೀಲ್ ಕುಮಾರ್ ಅವರೇ ಈ ಬಗ್ಗೆ ಕನ್ನಡಿಗರಿಗೆ ಉತ್ತರ ಕೊಡಬೇಕು. ತಕ್ಷಣ ಕನ್ನಡ ಪುಸ್ತಕ ಪ್ರದರ್ಶನವನ್ನು ಆಯೋಜನೆ ಮಾಡಬೇಕು ಎಂದು ಮಾಜಿ ಮುಖ್ಯಮಂತ್ರಿಗಳು ಒತ್ತಾಯ ಮಾಡಿದ್ದಾರೆ.

# ಗ್ರಾಮೀಣ ಜನರಿಗೆ ನಾಡಹಬ್ಬದಲ್ಲಿ ಪಾಲ್ಗೊಳ್ಳುವ ಅವಕಾಶ 'ದಸರಾ ದರ್ಶನ'

- ಮೂರು ದಿನ ಅವಕಾಶ
- 81 ಬಸ್‌ಗಳ ವ್ಯವಸ್ಥೆ



ದಸರಾ ದರ್ಶನ ಕಾರ್ಯಕ್ರಮದ ಬಸ್‌ಗಳಿಗೆ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು



ದಸರಾ ದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಆಗಮಿಸಿದ ಗ್ರಾಮೀಣ ಮಹಿಳೆಯರು.

ಮೈಸೂರು,ಸೆ28(ಎಂಟಿವೈ)– ದಸರಾ ಕಾರ್ಯಕ್ರಮಗಳನ್ನು ಗ್ರಾಮೀಣ ಪ್ರದೇಶದ ಜನರು ವೀಕ್ಷಿಸಲು ಅನುಕೂಲವಾಗುವಂತೆ 'ದಸರಾ ದರ್ಶನ' ಕಾರ್ಯಕ್ರಮಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು.

ಮೈಸೂರು ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ಬುಧವಾರ ಸಾರಿಗೆ ಬಸ್‌ಗಳಿಗೆ ಹಸಿರು ನಿಶಾನೆ ಪ್ರದರ್ಶಿಸುವ ಮೂಲಕ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಎರಡು ವರ್ಷದ ನಂತರ ನಾಡಹಬ್ಬ ದಸರಾ ಮಹೋತ್ಸವವನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಗ್ರಾಮೀಣ ಪ್ರದೇಶದ ಜನರು ವೀಕ್ಷಿಸಲು ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ದಸರಾ ದರ್ಶನ ಆಯೋಜಿಸಲಾಗಿದೆ. ಜಿಲ್ಲೆಯ 9 ತಾಲೂಕಿನ ಮಹಿಳೆಯರು, ಮಕ್ಕಳು ಹಾಗೂ ಆರ್ಥಿಕವಾಗಿ ಹಿಂದುಳಿದ ಗ್ರಾಮೀಣ ಜನರ ಕರೆತಂದು ದಸರಾ ದರ್ಶನ ಮಾಡಿಸಲಾಗುತ್ತಿದೆ

ದಸರಾ ದರ್ಶನ ಇಂದಿನಿಂದ 3 ದಿನ ನಡೆಯಲಿದ್ದು, ಸಾರಿಗೆ ಸಂಸ್ಥೆಯ 81 ಬಸ್‌ಗಳಲ್ಲಿ 4455 ಜನರನ್ನು ಕರೆತಂದು ಅರಮನೆ, ಮೃಗಾಲಯ, ಜೆ.ಕೆ.ಗ್ರೌಂಡ್ಸ್‌ನಲ್ಲಿ ನಡೆಯುವ ಮಹಿಳಾ ಮತ್ತು ಮಕ್ಕಳ ದಸರಾ ಮತ್ತು ಚಾಮುಂಡಿಬೆಟ್ಟದಲ್ಲಿ ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ದಸರಾ ಕಾರ್ಯಕ್ರಮಗಳ ಯಶಸ್ಸಿಗಾಗಿ 21 ಸಮಿತಿಗಳನ್ನು ರಚಿಸಲಾಗಿದೆ. ಎಲ್ಲಾ ಉಪ ಸಮಿತಿಗಳ ಪ್ರಗತಿ ಪರಿಶೀಲನೆ ನಡೆಸಿದ್ದೇನೆ. ಎಲ್ಲಿಯೂ ಲೋಪ, ಅವ್ಯವಸ್ಥೆ ಆಗದಂತೆ ಕಟ್ಟೆಚ್ಚರ ವಹಿಸುವಂತೆ ಸೂಚನೆ ನೀಡಲಾಗಿದೆ. ಇದಕ್ಕಾಗಿ ಸಾರ್ವಜನಿಕರ ಸಲಹೆ–ಸೂಚನೆ ಪಡೆದುಕೊಳ್ಳಲಾಗಿದೆ. ಅಧಿಕಾರಿಗಳ ಜೊತೆಗೆ ಅಧಿಕಾರೇತರರನ್ನು ಸೇರಿಸಿಕೊಂಡು ದಸರಾ ಯಶಸ್ವಿಗೊಳಿಸುವಂತೆ ಸೂಚಿಸಲಾಗಿದೆ. ಕಳೆದ ರಾತ್ರಿ ನಗರಪ್ರದಕ್ಷಿಣೆ ಮಾಡಿ ಸ್ವಚ್ಛತಾ ಕಾರ್ಯ ಪರಿಶೀಲನೆ ನಡೆಸಿದ್ದೇನೆ. ಸ್ವಚ್ಛತಾ ತಂಡವು ಮುಂಜಾನೆ 3 ಗಂಟೆಯವರೆಗೆ ಕೆಲಸ ಮಾಡುತ್ತಿದೆ. ಆಹಾರ ಮೇಳಕ್ಕೆ 25 ರಿಂದ 30 ಸಾವಿರಕ್ಕೂ ಹೆಚ್ಚು ಜನ ಆಗಮಿಸಿದ್ದರು. ಯಾವುದೇ ಆಹಾರ ಪದಾರ್ಥ ವ್ಯರ್ಥ ಆಗಿಲ್ಲ. ಅಂದಿನ ದಿನದ ಕಸವನ್ನು ಅಂದೇ ವಿಲೇವಾರಿ ಮಾಡುವಂತೆ ಸೂಚನೆ ನೀಡಲಾಗಿದೆ ಎಂದು ಸ್ಪಷ್ಟಪಡಿಸಿದರು.

ಪ್ರತಿ ತಾಲೂಕಿನಲ್ಲಿ ಆಯಾ ತಾಲೂಕು ಕಚೇರಿಯಿಂದ ಆಯ್ದ ಗ್ರಾ.ಪಂಗಳಿಗೆ ಟಿಕೆಟ್ ನೀಡಲಾಗಿದ್ದು, ಅದನ್ನು ತಾ.ಪಂ ಇಓ ಮೂಲಕ ಕೃಷಿ ಇಲಾಖೆ ಮೂಲಕ ವಿತರಿಸಲಾಗಿದೆ. ದಸರಾ ದರ್ಶನದಲ್ಲಿ ಪಾಲ್ಗೊಳ್ಳಲು ಹೆಸರು ನೋಂದಾಯಿಸಿದವರಿಗೆ ಟಿಕೆಟ್ ನೀಡಲಾಗಿದೆ. ಪ್ರತಿದಿನ ಬೆಳಗ್ಗೆ ಆಯಾ ತಾಲೂಕಿನಿಂದ ಜನರನ್ನು ಕರೆತಂದು, ಮಧ್ಯಾಹ್ನ ಊಟದ ವ್ಯವಸ್ಥೆ ಮಾಡಿಸಿ, ಸಂಜೆ ವೇಳೆ ವಾಪಸ್ಸು ಕರೆದೊಯ್ಯಲಾಗುತ್ತದೆ.

ಈ ಸಂದರ್ಭದಲ್ಲಿ ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ ಉಪಮೇಯರ್ ರೂಪಾ, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಸಾರಿಗೆ ಸಂಸ್ಥೆಯ ಉಪವಿಭಾಗಾಧಿಕಾರಿ ಆರ್.ಅಶೋಕ್ ಕುಮಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಜೆಎಲ್‌ಆರ್ ಮಾಜಿ ಅಧ್ಯಕ್ಷ ಅಪ್ಪಣ್ಣ, ಮೈಸೂರು ನಗರ ಬಿಜೆಪಿ ಅಧ್ಯಕ್ಷ ಶ್ರೀವತ್ಸ ಇನ್ನಿತರರು ಉಪಸ್ಥಿತರಿದ್ದರು.

### ಸಾರಿಗೆ ಸಚಿವ ಶ್ರೀರಾಮುಲು ಗೈರು

ದಸರಾ ದರ್ಶನ ಕಾರ್ಯಕ್ರಮ ಉದ್ಘಾಟನೆ ಮಾಡಬೇಕಾಗಿದ್ದ, ಸಾರಿಗೆ ಸಚಿವ ಬಿ.ಶ್ರೀರಾಮುಲು ಗೈರು ಹಾಜರಿಯಲ್ಲಿ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು. ಇದುವರೆಗೂ ಸಾರಿಗೆ ಸಚಿವರು ಯಾವುದೇ ಕಾರ್ಯಕ್ರಮಕ್ಕೂ ಗೈರಾಗಿರಲಿಲ್ಲ. ಅವರಿಗೆ ಆಹ್ವಾನ ನೀಡಲಾಗಿತ್ತು. ಆದರೆ ಅನಿವಾರ್ಯ ಕಾರಣಗಳಿಂದ ಗೈರಾಗಿದ್ದಾರೆ ಎಂದು ಸೋಮಶೇಖರ್ ಸ್ಪಷ್ಟನೆ ನೀಡಿದರು.

# ಕಾಂಗ್ರೆಸ್‌ನಿಂದ ಪೇಸಿಎಂ ಪ್ರತಿಭಟನೆ

## ಪೇಸಿಎಂ ಭಿತ್ತಿ ಪತ್ರ ಅಂಟಿಸಲೆತ್ನಿಸಿದವರ ಬಂಧನ, ಬಿಡುಗಡೆ



ಮಡಿಕೇರಿ,ಸೆ.28– ರಾಜ್ಯ ಬಿಜೆಪಿ ಸರ್ಕಾರ 40 ಪರ್ಸೆಂಟ್ ಕಮಿಷನ್ ಪಡೆಯುವ ಮೂಲಕ ಭ್ರಷ್ಟಾಚಾರ ನಡೆಸುತ್ತಿದೆ ಎಂದು ಆರೋಪಿಸಿ ಕೊಡಗು ಜಿಲ್ಲಾ ಕಾಂಗ್ರೆಸ್ ಮಡಿಕೇರಿಯಲ್ಲಿ 'ಪೇಸಿಎಂ' ಹೆಸರಲ್ಲಿ ಪ್ರತಿಭಟನೆ ನಡೆಸಿತು.

ಇಂದಿರಾ ಗಾಂಧಿ ವೃತ್ತದಿಂದ ಜನರಲ್ ತಿಮ್ಮಯ್ಯ ವೃತ್ತದವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ ಕಾಂಗ್ರೆಸ್ ಪಕ್ಷದ ಪ್ರಮುಖರು ಮತ್ತು ಕಾರ್ಯಕರ್ತರು, ರಾಜ್ಯ ಬಿಜೆಪಿ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯದಲ್ಲಿ ಒಡೆದು ಆಳುವ ನೀತಿ ಮೂಲಕ ಅಧಿಕಾರಕ್ಕೆ ಬಂದಿರುವ ಬಿಜೆಪಿ ಇದೀಗ ಭ್ರಷ್ಟಾಚಾರವನ್ನೇ ತನ್ನ ಆಡಳಿತವನ್ನಾಗಿಸಿದೆ ಎಂದು ಪ್ರತಿಭಟನಾಕಾರರು ಟೀಕಿಸಿದರು. ಬಳಿಕ ಜನರಲ್ ತಿಮ್ಮಯ್ಯ ವೃತ್ತದ ಬಳಿ ಕೆಲಕಾಲ ಮಾನವ ಸರಪಳಿ ರಚಿಸಿ ಸರಕಾರದ ವಿರುದ್ಧ ಧಿಕ್ಕಾರದ ಘೋಷಣೆ ಮೊಳಗಿಸಿದರು. ಪೇಸಿಎಂ ಭಿತ್ತಿ ಪತ್ರ ಪ್ರದರ್ಶಿಸಿ ಬಿಜೆಪಿ ಸರಕಾರ, ಮುಖ್ಯಮಂತ್ರಿಗಳು ಹಾಗೂ ಸಚಿವರ ವಿರುದ್ಧ ಕಾಂಗ್ರೆಸ್ ಪ್ರತಿಭಟನಾಕಾರರು ಆಕ್ರೋಶ ಹೊರಗೆಡವಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ ರಾಜ್ಯ ಬಿಜೆಪಿ ಸರ್ಕಾರದ ದುರ್ನೀತಿಗಳನ್ನು ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ ನಡೆಸುತ್ತಿದೆ. ಆ ಮೂಲಕ ಜನರಲ್ಲಿ ಅರಿವು ಮೂಡಿಸಲಾಗುತ್ತಿದೆ. ಜಿಲ್ಲಾಡಳಿತ ಭವನದ ತಡೆಗೋಡೆ ಕಾಮಗಾರಿಯಲ್ಲೂ 40 ಪರ್ಸೆಂಟ್ ಕಮಿಷನ್ ಪಡೆಯಲಾಗಿದೆ. ಪರಿಣಾಮ ಕಳಪೆ ಕಾಮಗಾರಿಯಿಂದ ತಡೆಗೋಡೆ ಕುಸಿಯುವ ಹಂತಕ್ಕೆ ತಲುಪಿದೆ. ಇಂಥ ಸರ್ಕಾರವನ್ನು ಕಿತ್ತೊಗೆದು ಉತ್ತಮ ಆಡಳಿತ ನೀಡುವ ಕಾಂಗ್ರೆಸ್‌ಗೆ ಜನರು ಬೆಂಬಲ ವ್ಯಕ್ತಪಡಿಸಬೇಕು ಎಂದು ಮನವಿ ಮಾಡಿದರು. ಕೆಪಿಸಿಸಿ ವಕ್ತಾರ ಟಿ.ಪಿ. ರಮೇಶ್, ನಗರ ಸಭಾ ಸದಸ್ಯ ರಾಜೇಶ್ ಯಲ್ಲಪ್ಪ ಮಾತನಾಡಿದರು.

**ಪ್ರತಿಭಟನಾಕಾರರ ಬಂಧನ:** ಜಿಲ್ಲಾಡಳಿತ ಭವನದ ತಡೆಗೋಡೆಗೆ 'ಪೇಸಿಎಂ' ಎಂಬ ಭಿತ್ತಪತ್ರ ಅಂಟಿಸುವ ಸಲುವಾಗಿ ಮಂಗಳೂರು ರಸ್ತೆ ಕಡೆ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ತೆರಳುವ ಸಂದರ್ಭ ಪೊಲೀಸರು ತಡೆ ಒಡ್ಡಿದರು. ಈ ವೇಳೆ ಅಲ್ಲೇ ಪಕ್ಕದಲ್ಲಿದ್ದ ಸಾರ್ವಜನಿಕರ ಬಸು ತಂಗುದಾಣದತ್ತ ಪೇಸಿಎಂ ಭಿತ್ತಿ ಪತ್ರ ಅಂಟಿಸಲು ಕೆಲ ಕಾರ್ಯಕರ್ತರು ಮುಂದಾದಾಗ ತಕ್ಷಣವೇ ಪೊಲೀಸರು ಅವರನ್ನು ತಡೆದು ಭಿತ್ತಿ ಪತ್ರ ವಶಕ್ಕೆ ಪಡೆದರಲ್ಲದೇ, ಕಾರ್ಯಕರ್ತರನ್ನು ಬಂಧಿಸಿದರು. ಬಳಿಕ ಪ್ರತಿಭಟನೆಯಲ್ಲಿ ಭಾಗಿಯಾದ ಎಲ್ಲಾ ಮುಖಂಡರು ಮತ್ತು ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು. ಪೊಲೀಸ್ ಸಮುದಾಯ ಭವನ ಮೈತ್ರಿ ಭವನಕ್ಕೆ ಪ್ರತಿಭಟನಾಕಾರರನ್ನು ಕರೆದೊಯ್ದು ಪೊಲೀಸರು ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಸಂಜೆ ವೇಳೆ ಎಲ್ಲರನ್ನು ಬಿಡುಗಡೆಗೊಳಿಸಿದರು.

ಪ್ರತಿಭಟನೆಯಲ್ಲಿ ಪಕ್ಷ ಪ್ರಮುಖರಾದ ಅಬ್ದುಲ್ ರಝಾಕ್, ಸೂರಜ್ ಹೊಸೂರು, ಗಣೇಶ್, ಮುನೀರ್ ಅಹಮದ್, ಕೆಜೆ ಪೀಟರ್, ಕಾನೆಹಿತ್ಲು ಮೊಣ್ಣಪ್ಪ, ಹನೀಫ್, ಉದಯ್ ಕುಮಾರ್, ಪ್ರಕಾಶ್ ಆಚಾರ್ಯ, ಮಹಿಳಾ ಘಟಕದ ಫ್ಯಾನ್ಸಿ ಮುತ್ತಣ್ಣ, ಮೀನಾಝ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

## ಅಕ್ರಮ ಲಾಟರಿ ಮಾರಾಟ: ಇಬ್ಬರ ಬಂಧನ

ವಿರಾಜಪೇಟೆ, ಸೆ.28– ವಿರಾಜಪೇಟೆ ಪೊಲೀಸರು ಅಕ್ರಮವಾಗಿ ಲಾಟರಿ ಟಿಕೇಟ್‌ಗಳನ್ನು ಮಾರಾಟ ಮಾಡುತ್ತಿದ್ದ ಇಬ್ಬರನ್ನು ಬಂಧಿಸಿದ್ದಾರೆ. ಕೇರಳದ ಕಾಸರಗೋಡು ನಿವಾಸಿ ಜಾನ್ ತ್ರಿಮೋತಿ ಕ್ರಾಸ್ತ (42) ಮತ್ತು ವಿರಾಜಪೇಟೆ ತಾಲೂಕಿನ ಅರ್ಜಿ ಗ್ರಾಮದ ವಾಸಿ ವಿ.ಎಸ್.ಅಶೋಕ್ ಕುಮಾರ್ (39) ಬಂಧಿತ ಆರೋಪಿಗಳು.

ಇವರಿಬ್ಬರು ಬುಧವಾರ ಬೆಳಗ್ಗೆ ಇಲ್ಲಿನ ಖಾಸಗಿ ಬಸ್ ನಿಲ್ದಾಣದ ಪಕ್ಕದಲ್ಲಿರುವ ಸ್ವಾಗತ್ ಬಿಲ್ಡಿಂಗ್ ಮಳಿಗೆ ಮುಂದೆ ಅಕ್ರಮವಾಗಿ ಕೇರಳ ರಾಜ್ಯದ 3000 ಲಾಟರಿ ಟಿಕೆಟ್‌ಗಳನ್ನು ಮಾರಾಟ ಮಾಡುತ್ತಿರುವ ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ತೆರಳಿದ ವಿರಾಜಪೇಟೆ ಪೊಲೀಸರು ಲಾಟರಿ ಟಿಕೆಟ್‌ಗಳನ್ನು ವಶಪಡಿಸಿಕೊಂಡು ಇಬ್ಬರನ್ನು ಬಂಧಿಸಿದರು. ವಿರಾಜಪೇಟೆ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಸಿ.ವಿ.ಶ್ರೀಧರ್ ಮತ್ತು ಸಿಬ್ಬಂದಿ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

## ನಕ್ಷತ್ರ ಆಮೆ ಮಾರಾಟ ಯತ್ನ: ಓರ್ವ ಬಂಧನ



ಮಡಿಕೇರಿ, ಸೆ.28– ಅಳಿವಿನ ಅಂಚಿನಲ್ಲಿರುವ ಜೀವಂತ ನಕ್ಷತ್ರ ಆಮೆಯನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಆರೋಪಿಯೊಬ್ಬನನ್ನು ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕ ಬಂಧಿಸಿದೆ. ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ನಿವಾಸಿ ಯಾಸಿನ್ ಪಾಷಾ(28) ಬಂಧಿತ ಆರೋಪಿ.

ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದ ಬಳಿಯಿಂದ ಸುದರ್ಶನ ಅತಿಥಿ ಗೃಹಕ್ಕೆ ತೆರಳುವ ಮಾರ್ಗದಲ್ಲಿ ಜೀವಂತ ನಕ್ಷತ್ರ ಆಮೆಯನ್ನು ಮಾರಾಟ ಮಾಡಲು ಯತ್ನಿಸುತ್ತಿರುವ ಬಗ್ಗೆ ಸಿಐಡಿ ಪೊಲೀಸ್ ಅರಣ್ಯ ಘಟಕಕ್ಕೆ ಮಾಹಿತಿ ಲಭಿಸಿತ್ತು. ಈ ಸುಳಿವು ಅರಿತ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ದಾಳಿ ನಡೆಸಿ ಆರೋಪಿಯನ್ನು ಆಮೆಯ ಸಹಿತ ವಶಕ್ಕೆ ಪಡೆದಿದ್ದಾರೆ. ಬಂಧಿತ ಆರೋಪಿ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಐಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಕೆ.ವಿ.ಶರತ್‌ಚಂದ್ರ ನಿರ್ದೇಶನದ ಮೇರೆಗೆ ಮಡಿಕೇರಿ ಸಿ.ಐ.ಡಿ ಪೊಲೀಸ್ ಅರಣ್ಯ ಘಟಕದ ಪೊಲೀಸ್ ಅಧೀಕ್ಷಕ ಕೆ.ಬಿ ವಿಶ್ವನಾಥ್ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮಡಿಕೇರಿ ಅರಣ್ಯ ಸಂಚಾರಿ ದಳದ ಪಿ.ಎಸ್.ಐ ಸಿ.ಯು.ಸವಿ ಹೆಡ್‌ಕಾನ್ಸೇಬಲ್‌ಗಳಾದ ಶೇಖರ್, ರಾಜೇಶ್, ರಾಘವೇಂದ್ರ, ಯೋಗೇಶ್, ಮೋಹನ ಹಾಗೂ ಕಾನ್ಸ್‌ಟೇಬಲ್ ಸ್ವಾಮಿ, ಮಂಜುನಾಥ ಅವರುಗಳು ಪಾಲ್ಗೊಂಡಿದ್ದರು.

## ಕುಶಾಲನಗರದಲ್ಲಿ ಕಾಂಗ್ರೆಸ್ ಪ್ರತಿಭಟನೆ



ಕುಶಾಲನಗರ, ಸೆ.28– ಕಾಂಗ್ರೆಸ್ ವತಿಯಿಂದ ನಡೆಯುತ್ತಿರುವ ಪೆ ಸಿಎಂ ಅಭಿಯಾನದ ಅಂಗವಾಗಿ ಕುಶಾಲನಗರ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರು ರಾಜ್ಯ ಬಿಜೆಪಿ ಸರಕಾರದ ವಿರುದ್ಧ ಕುಶಾಲನಗರದಲ್ಲಿ ಪ್ರತಿಭಟನೆ ನಡೆಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್ ನೇತೃತ್ವದಲ್ಲಿ ಕುಶಾಲನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದಲ್ಲಿ ಪ್ರತಿಭಟನೆ ಪಕ್ಷದ ಪ್ರಮುಖರು ಹಾಗೂ ಕಾರ್ಯಕರ್ತರು ರಾಜ್ಯ ಸರಕಾರದ ವಿರುದ್ಧ ಧಿಕ್ಕಾರ ಕೂಗಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್, ಬಿಜೆಪಿ ಕೋಮುವಾದ, ಕಾಮವಾದಕ್ಕೆ ಹೆಸರುವಾಸಿ. ಇದೀಗ ಮುಖ್ಯಮಂತ್ರಿ ಬೊಮ್ಮಾಯಿ ನೇತೃತ್ವದ ರಾಜ್ಯ ಸರಕಾರ ಲಂಚಗುಳಿತನ, ಭ್ರಷ್ಟಾಚಾರದಲ್ಲಿ ಹೊಸ ಅಧ್ಯಾಯ ಆರಂಭಿಸಿದೆ ಲೋಕಾಯುಕ್ತ ನ್ಯಾಯಾಲಯದಿಂದ ಮಾಜಿ ಮುಖ್ಯಮಂತ್ರಿಯೊಬ್ಬರು ನೇರವಾಗಿ ಜೈಲಿಗೆ ಹೋದ ನಿದರ್ಶನವಿದೆ. ಪಿಎಸ್‌ಐ ಹಗರಣ ಮೂಲಕ ಉಳ್ಳವರಿಗೆ ಮಾತ್ರ ಹುದ್ದೆಗಳು ಎಂಬ ಸ್ಪಷ್ಟ ಸಂದೇಶ ಈ ಸರಕಾರ ರವಾನಿಸಿದೆ. ಬಂಡವಾಳಶಾಹಿ ಅಧಿಕಾರಿಗಳಿಂದಾಗಿ ಸಮಾಜ ಅಧಃಪತನ ಕಾಣಲಿದೆ.

ನಗರ ಕಾಂಗ್ರೆಸ್ ಅಧ್ಯಕ್ಷ ಪ್ರಮೋದ್ ಮುತ್ತಪ್ಪ ಮಾತನಾಡಿ, ರಾಜ್ಯಾದ್ಯಂತ ಕಾಂಗ್ರೆಸ್ ಹಮ್ಮಿಕೊಂಡಿರುವ ಈ ಆಂದೋಲನ ಅಂಗವಾಗಿ ಕುಶಾಲನಗರದಲ್ಲೂ ಕೂಡ ಪ್ರತಿಭಟನೆ ಹಮ್ಮಿಕೊಳ್ಳುವ ಮೂಲಕ ಇಲ್ಲಿನ ಶಾಸಕರ ಭ್ರಷ್ಟಾಚಾರವನ್ನು ಖಂಡಿಸಲಾಗುತ್ತಿದೆ ಎಂದರು.

ಈ ಸಂದರ್ಭ ಕಾಂಗ್ರೆಸ್ ಮುಖಂಡರಾದ ಬಿ.ಜಿ.ಮಂಜುನಾಥ್, ಜೋಸೆಫ್ ವಿಕ್ಟರ್ ಸೋನ್ಸ್, ಶೇಖ್ ಕಲೀಮುಲ್ಲಾ, ಶಿವಶಂಕರ್, ಚಂದ್ರು, ಎಂ.ಎಂ.ಪ್ರಕಾಶ್, ಮುಸ್ತಾಫ ಆದಂ, ಅಬ್ದುಲ್ ರಜಾಕ್, ಭೀಮಯ್ಯ ಮತ್ತಿತರರು ಇದ್ದರು. ಪ್ರತಿಭಟನೆ ಕೊನೆಯಲ್ಲಿ ಪೇಸಿಎಂ ಪೋಸ್ಟರ್ ಪ್ರದರ್ಶಿಸಿದ ಪ್ರತಿಭಟನಾಕಾರರು ಪೋಸ್ಟರ್ ಅಂಟಿಸಲು ಮುಂದಾದ ಸಂದರ್ಭ ಪೊಲೀಸರು ವಶಕ್ಕೆ ಪಡೆದುಕೊಂಡರು.

## ಸರ್ಕಾರದ ಸವಲತ್ತು ಪಡೆಯಲು ಕಾರ್ಮಿಕರಿಗೆ ಕರೆ

### ಕಾರ್ಮಿಕರಿಗೆ ಗುರುತಿನ ಚೀಟಿ, ಅಸಂಘಟಿತ ಕಾರ್ಮಿಕರಿಗೆ ಇ-ಶ್ರಮ್ ಕಾರ್ಡ್ ವಿತರಣೆ



ವಿರಾಜಪೇಟೆ, ಸೆ.28– ಅಸಂಘಟಿತ ಕಾರ್ಮಿಕರು ಸರ್ಕಾರ ನೀಡುತ್ತಿರುವ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳುವ ಮೂಲಕ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ಮೈಸೂರಿನ ಕಾರ್ಮಿಕ ಇಲಾಖೆಯ ಹಿರಿಯ ಕಾರ್ಮಿಕ ನಿರೀಕ್ಷಕ ಜಯಣ್ಣ ತಿಳಿಸಿದ್ದಾರೆ.

ಓಂ ಶಕ್ತಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಹಾಗೂ ಅಸಂಘಟಿತ ವಲಯದ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘಟನೆ ವತಿಯಿಂದ ವಿರಾಜಪೇಟೆ ಪುರಭವನದಲ್ಲಿ ಆಯೋಜಿಸಿದ್ದ 'ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರಿಗೆ ಗುರುತಿನ ಚೀಟಿ ಮತ್ತು ಅಸಂಘಟಿತ ಕಾರ್ಮಿಕರಿಗೆ ಇ-ಶ್ರಮ್ ಕಾರ್ಡ್ ವಿತರಣಾ ಕಾರ್ಯಕ್ರಮ'ದಲ್ಲಿ ಮುಖ್ಯಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ಕಾರ್ಮಿಕರ ಮಕ್ಕಳ ಶಿಕ್ಷಣಕ್ಕಾಗಿ ಕಾರ್ಮಿಕ ಮಂಡಳಿಯಿಂದ ವಿದ್ಯಾರ್ಥಿವೇತನ ಹಾಗೂ ವಿವಾಹ ಸಹಾಯಧನ ಹೆಚ್ಚಿಸಲಾಗಿದ್ದು, ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಏನಾದರೂ ಅಘಾತಕಾರಿ ಘಟನೆಗಳು ನಡೆದಲ್ಲಿ ಆಸ್ಪತ್ರೆಯ ಖರ್ಚು ಮತ್ತು ಇತರ ಸಹಾಯಧನ ನೀಡಲಾಗುವುದು. ಅದರಿಂದ ಕಾರ್ಮಿಕರು ತಮ್ಮ ಗುರುತಿನ ಚೀಟಿಯನ್ನು ಪ್ರತಿವರ್ಷ ನವೀಕರಣಗೊಳಿಸುವ ಮೂಲಕ ಸೌಲಭ್ಯ ಪಡೆದುಕೊಳ್ಳಲು ಮುಂದಾಗಬೇಕು ಎಂದರು.

ಮಡಿಕೇರಿಯ ಹಿರಿಯ ಕಾರ್ಮಿಕ ನಿರೀಕ್ಷಕ ಎಂ.ಎಂ.ಯತ್ನಟ್ಟಿ ಅವರು ಕಾರ್ಮಿಕರನ್ನುದ್ದೇಶಿಸಿ ಮಾತನಾಡಿ, ಸರ್ಕಾರದ ಸೌಲಭ್ಯ ಪಡೆದುಕೊಳ್ಳಲು ಕಾರ್ಮಿಕರು ಬರಿ ಅರ್ಜಿ ಸಲ್ಲಿಸಿದರೆ ಸಾಲದು. ಅದಕ್ಕೆ ಸರಿಯಾದ ದಾಖಲಾತಿಗಳನ್ನು ಒದಗಿಸಬೇಕು. ಕೇಂದ್ರ ಸರ್ಕಾರ ವಿಕಲ ಚೇತನರು ಅಸಂಘಟಿತ ವಲಯದಲ್ಲಿರುವ ಬಡ ಕುಟುಂಬದವರು ಉದ್ಯೋಗದ ಅವಶ್ಯವಿದ್ದಲ್ಲಿ ಇ-ಶ್ರಮ್ ಕಾರ್ಡ್ ಪಡೆದುಕೊಳ್ಳಬೇಕು. ಕಾರ್ಮಿಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರೊಂದಿಗೆ ದುಷ್ಚಟಗಳನ್ನು ಬಿಟ್ಟು ಮಕ್ಕಳ ಭವಿಷ್ಯದ ಕಡೆಗೆ ಗಮನಹರಿಸುವಂತಾಗಬೇಕು ಎಂದರು.

ಸಭೆಯಲ್ಲಿ ಹಿರಿಯ ಕಾರ್ಮಿಕ ನಿರೀಕ್ಷಕರಾದ ಎಂ.ಎಂ.ಯತ್ನಟ್ಟಿ ಮತ್ತು ಜಯಣ್ಣ ಅವರುಗಳಿಗೆ ಸಂಘಟನೆ ವತಿಯಿಂದ ಸನ್ಮಾನಿಸಲಾಯಿತು. ಓಂ ಶಕ್ತಿ ಕಟ್ಟಡ ಮತ್ತು ಇತರೆ ನಿರ್ಮಾಣ ಹಾಗೂ ಅಸಂಘಟಿತ ವಲಯದ ಕಾರ್ಮಿಕರ ಸಂಘಟನೆಯ ಜಿಲ್ಲಾ ಅಧ್ಯಕ್ಷ ಎಂ.ಸೇದು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೇದಿಕೆಯಲ್ಲಿ ಸಂಘಟನೆಯ ಕಾರ್ಯದರ್ಶಿ ಪೆರಿಯಾಸ್ವಾಮಿ, ಸದಸ್ಯರಾದ ಕುರಿಯಾಕೊಸ್, ರಾಣಿ, ರಾಧಾಕೃಷ್ಣ, ಕರ್ಣ, ರಾಮಕೃಷ್ಣ, ವಿಶ್ವನಾಥ್, ರಾಮದಾಸ್, ಉಪಸ್ಥಿತರಿದ್ದರು. ಶಿಕ್ಷಕಿ ಅನುಪಮ ಸ್ವಾಗತಿಸಿ ನಿರೂಪಿಸಿದರೆ, ಸೌಮ್ಯ ಸೇದು ವಂದಿಸಿದರು.

## ಇಂದು ಜನ ಸಂಪರ್ಕ ಸಭೆ

ಮಡಿಕೇರಿ, ಸೆ.28– ಕುಶಾಲನಗರ ಉಪ ವಿಭಾಗ ವ್ಯಾಪ್ತಿಯ ವಿದ್ಯುತ್ ಗ್ರಾಹಕರ ಕುಂದುಕೊರತೆ ನಿವಾರಿಸಲು ಸೆ.29 ರಂದು ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 12 ಗಂಟೆವರೆಗೆ ಕುಶಾಲನಗರ ಉಪವಿಭಾಗ ಕಚೇರಿ ಆವರಣದಲ್ಲಿ ಸಭೆಯನ್ನು ಕರೆಯಲಾಗಿದೆ.

ಹಾಗೆಯೇ ಸೋಮವಾರಪೇಟೆ ವ್ಯಾಪ್ತಿಯ ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ನಿವಾರಿಸಲು ಸಭೆಯು ಸೆ29 ರಂದು ಮಧ್ಯಾಹ್ನ 3 ಗಂಟೆಯಿಂದ ಸಂಜೆ 4 ಗಂಟೆವರೆಗೆ ಸೋಮವಾರಪೇಟೆ ಉಪವಿಭಾಗ ಕಚೇರಿ ಆವರಣದಲ್ಲಿ ನಡೆಯಲಿದೆ. ಈ ಎರಡು ಸಭೆಯು ಸೆಸ್ಕ್ ಕಾರ್ಯನಿರ್ವಾಹಕ ಎಂಜಿನಿಯರ್ ಅಧ್ಯಕ್ಷತೆಯಲ್ಲಿ ಜರುಗಲಿದೆ.

ಸೋಮವಾರಪೇಟೆ ಮತ್ತು ಕುಶಾಲನಗರ ವ್ಯಾಪ್ತಿಯ ಸಾರ್ವಜನಿಕರು, ವಿದ್ಯುತ್ ಗ್ರಾಹಕರ ವಿದ್ಯುಚ್ಛಕ್ತಿಗೆ ಸಂಬಂಧಿಸಿದ ಸಮಸ್ಯೆ ಅಥವಾ ದೂರುಗಳು ಇದ್ದಲ್ಲಿ ಈ ಸಭೆಯಲ್ಲಿ ಚರ್ಚಿಸಿ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರು ಈ ಸಭೆಗೆ ಹಾಜರಾಗುವಂತೆ ಸೆಸ್ಕ್ ಕಾರ್ಯನಿರ್ವಾಹಕ ಎಂಜಿನಿಯರ್ ಅನಿತಾ ಬಾಯಿ ಅವರು ತಿಳಿಸಿದ್ದಾರೆ.

## ಅರೆಕಾಡು ಗ್ರಾಮದಲ್ಲಿ ಯುವಕರ ಮೇಲೆ ಸಹೋದರರಿಂದ ಮಾರಣಾಂತಿಕ ಹಲ್ಲೆ

ಮಡಿಕೇರಿ,ಸೆ.28– ಹಳೇ ದ್ವೇಷ ವೈಷಮ್ಯವನ್ನು ಮುಂದಿಟ್ಟುಕೊಂಡು ಮೂವರು ಸಹೋದರರು ಇಬ್ಬರು ಯುವಕರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿರುವ ಘಟನೆ ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಅರೆಕಾಡು ಗ್ರಾಮದಲ್ಲಿ ನಡೆದಿದೆ.

ಅರೆಕಾಡುವಿನ ಟೀ ಅಂಗಡಿಯೊಂದರಲ್ಲಿ ಯಶ್ವಂತ್ ಹಾಗೂ ಚಂದನ್ ಅಪ್ಪಯ್ಯ ಎಂಬವರು ಟೀ ಕುಡಿಯುತ್ತಿದ್ದ ಸಂದರ್ಭ ಸ್ಥಳಕ್ಕೆ ಆಗಮಿಸಿದ ಮೂವರು ಸಹೋದರರಾದ ಪ್ರಭುಶೇಖರ್, ಅಪ್ಪು ರವೀಂದ್ರ ಮತ್ತು ಆನಂದ್ ರಘು ಎಂಬವರು ಇಬ್ಬರು ಯುವಕರ ಮೇಲೆ ಕತ್ತಿಯಿಂದ ಹಲ್ಲೆ ಮಾಡಿದ್ದಾರೆ. ಪರಿಣಾಮ ಯಶ್ವಂತ್ ಎಂಬಾತನ ಎರಡೂ ಕೈಗಳಿಗೆ ಗಂಭೀರವಾಗಿ ಗಾಯವಾಗಿದೆ.

ಗಾಯಾಳುಗಳನ್ನು ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಿ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಈ ಘಟನೆ ಕುರಿತು ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

# ಚಾಮರಾಜನಗರ ದಸರಾ: ಫಲಪುಷ್ಪ ಪ್ರದರ್ಶನ ಸೇರಿ ವಿವಿಧ ಕಾರ್ಯಕ್ರಮಗಳಿಗೆ ಸಚಿವರ ಚಾಲನೆ





ಚಾಮರಾಜನಗರ, ಸೆ.28–ಚಾಮರಾಜನಗರ ದಸರಾ ಮಹೋತ್ಸವದ ಅಂಗವಾಗಿ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಸೆ.28ರಿಂದ 30ರವರೆಗೆ ಆಯೋಜಿಸಿರುವ ಮೂರು ದಿನಗಳ ಫಲಪುಷ್ಪ ಪ್ರದರ್ಶನ, ವಿವಿಧ ಇಲಾಖೆ ಮಳಿಗೆಗಳ ಪ್ರದರ್ಶನ ಸೇರಿದಂತೆ ವಿವಿಧ ಕಾರ್ಯಕ್ರಮಗಳಿಗಿಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಪಂ, ತೋಟಗಾರಿಕೆ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಚಿವರು, ಜಿಲ್ಲೆಯ ಬೆಳವಣಿಗೆ ದೃಷ್ಟಿಯಿಂದ ಫಲಪುಷ್ಪ ಪ್ರದರ್ಶನ ಆಯೋಜನೆ ಅಗತ್ಯವಿದೆ. ಇನ್ನೂ ವಿಸ್ತಾರವಾದ ಜಾಗದಲ್ಲಿ ಪ್ರದರ್ಶನ ಏರ್ಪಡಿಸಿ ಜನಾಕರ್ಷಿಸಬೇಕು. ಹೆಚ್ಚಿನ ಜನರು ವೀಕ್ಷಿಸುವಂತಿರಬೇಕು. ಮುಂದಿನ ದಿನಗಳಲ್ಲಿ ಇನ್ನೂ ಉತ್ತಮವಾಗಿ ಫಲಪುಷ್ಪ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಿ ಚಾಮರಾಜನಗರ ಜಿಲ್ಲೆಯ ತೋಟಗಾರಿಕಾ ಕ್ಷೇತ್ರದಲ್ಲಿ ಹೆಸರು ಗಳಿಸಬೇಕು. ಜಿಲ್ಲೆ ಅಭಿವೃದ್ಧಿಯತ್ತ ಸಾಗಲು ಹಂತ ಹಂತವಾಗಿ ಬೆಳವಣಿಗೆಯಾಗಬೇಕು ಎಂದು ಸಚಿವರು ತಿಳಿಸಿದರು.

ಈ ಬಾರಿ ಅತಿವೃಷ್ಟಿಯಿಂದ ಜಿಲ್ಲೆಯಲ್ಲಿ ಕೃಷಿ ಹಾಗೂ ತೋಟಗಾರಿಕೆ ಬೆಳೆ ಹಾನಿಯಾಗಿರುವುದರಿಂದ ರೈತರು ಸಂಕಷ್ಟದಲ್ಲಿದ್ದಾರೆ. ರೈತರು ಇದರಿಂದ ಎದೆಗುಂದಬೇಕಾಗಿಲ್ಲ. ಸರ್ಕಾರ ರೈತರ ಪರವಾಗಿದೆ. ರೈತರಿಗೆ ಆಗಿರುವ ನಷ್ಟ ಭರಿಸಲು ಸರ್ಕಾರ ನೇರವಾಗಿ ರೈತರ ಖಾತೆಗೆ ಹಣ ಜಮೆ ಮಾಡುತ್ತಿದೆ ಎಂದು ವಿ.ಸೋಮಣ್ಣ ತಿಳಿಸಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ನಗರಸಭೆ ಅಧ್ಯಕ್ಷ ಸಿ.ಎಂ. ಆಶಾ, ಡಿಸಿ ಚಾರುಲತಾ ಸೋಮಲ್, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಜಿಪಂ ಮಾಜಿ ಉಪಾಧ್ಯಕ್ಷ ಶಿವಕುಮಾರ್, ಮಾಜಿ ಸದಸ್ಯ ಬಾಲರಾಜು, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಶಿವಪ್ರಸಾದ್ ಇತರರು ಕಾರ್ಯಕ್ರಮದಲ್ಲಿದ್ದರು.

ಫಲಪುಷ್ಪ ಪ್ರದರ್ಶನ ಕಾರ್ಯಕ್ರಮದ ಉದ್ಘಾಟನೆಗೂ ಮುನ್ನ ಸಚಿವ ಸೋಮಣ್ಣ, ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರಲ್ಲದೆ, ಫಲಪುಷ್ಪ ಪ್ರದರ್ಶನದ ಕಲಾಕೃತಿಗಳು, ಮಹಿಳಾ ಸ್ವ ಸಹಾಯ ಸಂಘಗಳು ತಯಾರಿಸಿದ ಉತ್ಪನ್ನಗಳ ಮಾರಾಟ ಪ್ರದರ್ಶನ, ವಿವಿಧ ಇಲಾಖೆಗಳು ತೆರೆದಿರುವ ಮಾಹಿತಿ ಮಳಿಗೆಗಳನ್ನು ಸಚಿವರು ವೀಕ್ಷಿಸಿದರು.

**ಮಹಿಳಾ ದಸರಾ ಉದ್ಘಾಟನೆ:** ದಸರಾ ಮಹೋತ್ಸವದ ಅಂಗವಾಗಿ ನಗರದ ಶ್ರೀ ಚಾಮರಾಜೇಶ್ವರ ದೇವಾಲಯದ ಪಕ್ಕದ ರಥಬೀದಿಯಲ್ಲಿ ಜಿಲ್ಲಾಡಳಿತ ಹಾಗೂ ದಸರಾ ಮಹೋತ್ಸವ ಸಮಿತಿ ಸಹಯೋಗದಲ್ಲಿ ಆಯೋಜಿಸಿದ್ದ ಮಹಿಳಾ ದಸರಾವನ್ನು ದೀಪ ಬೆಳಗುವ ಮೂಲಕ ಸೋಮಣ್ಣ ಉದ್ಘಾಟಿಸಿ ಮಾತನಾಡಿದರು. ಮಹಿಳಾ ದಸರಾ ಅಂಗವಾಗಿ ಹಮ್ಮಿಕೊಂಡಿರುವ ರಂಗೋಲಿ ಸ್ಪರ್ಧೆ ಮಹಿಳೆಯರ ಬುದ್ಧಿವಂತಿಕೆ, ಪ್ರತಿಭೆ, ಪ್ರದರ್ಶಿಸಲು ಉತ್ತಮ ವೇದಿಕೆ. ಸ್ಪರ್ಧೆ ಆತ್ಮೀಯತೆಯ ಸಂಕೇತ. ಸ್ಪರ್ಧೆ ಇನ್ನೊಬ್ಬರನ್ನು ನೋಡಿ ಕಲಿಯುವುದಲ್ಲ. ಅದನ್ನು ನಾವೇ ರೂಢಿಸಿಕೊಳ್ಳಬೇಕು ಎಂದು ಸಚಿವರು ಕಿವಿಮಾತು ಹೇಳಿದರು.

ಕೊನೆಯ ಸ್ಥಾನದ ಸ್ಪರ್ಧಿಗಳನ್ನು ಸಹ ಉತ್ತೇಜಿಸುವ ನಿಟ್ಟಿನಲ್ಲಿ ಸಚಿವರು ರಂಗೋಲಿ ಸ್ಪರ್ಧೆಯಲ್ಲಿ ಮೂರನೇ ವಿಜೇತರಿಗೆ 5 ಸಾವಿರ ರೂ., ಎರಡನೇ ವಿಜೇತರಿಗೆ 4 ಸಾವಿರ ರೂ., ಮೊದಲನೇ ವಿಜೇತರಿಗೆ 3 ಸಾವಿರ ರೂ. ನಗದು ಬಹುಮಾನವನ್ನು ವೈಯುಕ್ತಿಕವಾಗಿ ವಿತರಿಸಿದರು. ಈ ಸಂದರ್ಭದಲ್ಲಿ ಜನಪ್ರತಿನಿಧಿಗಳು, ಅಧಿಕಾರಿಗಳಿದ್ದರು.

## ಗಮನ ಸೆಳೆದ ದಸರಾ ಪಾರಂಪರಿಕ ನಡಿಗೆ



**ಚಾಮರಾಜನಗರ:** ಚಾಮರಾಜನಗರ ದಸರಾ ಮಹೋತ್ಸವದ ಅಂಗವಾಗಿ ನಗರದಲ್ಲಿಂದು ಹಮ್ಮಿಕೊಂಡಿದ್ದ ದಸರಾ ಪಾರಂಪರಿಕ ನಡಿಗೆ(ಮ್ಯಾರಥಾನ್) ನಾಗರಿಕರ ಗಮನ ಸೆಳೆಯಿತು. ನಗರದ ಶ್ರೀ ಚಾಮರಾಜೇಶ್ವರ ದೇಗುಲ ಮುಂಭಾಗ ಸಚಿವ ವಿ.ಸೋಮಣ್ಣ ಅವರು ದಸರಾ ಪಾರಂಪಾರಿಕ ನಡಿಗೆಗೆ ಹಸಿರು ನಿಶಾನೆ ತೋರಿದರಲ್ಲದೆ, ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರೊಂದಿಗೆ ದಸರಾ ಪಾರಂಪರಿಕ ನಡಿಗೆಯಲ್ಲಿ ಪಾಲ್ಗೊಂಡರು. ಜನಪ್ರತಿನಿಧಿಗಳು, ಅಧಿಕಾರಿಗಳು, ವಿದ್ಯಾರ್ಥಿಗಳು ಬಿಳಿಬಣ್ಣದ ಟೀ ಶರ್ಟ್ ಹಾಗೂ ಕ್ಯಾಪ್ ಧರಿಸಿ ಬೆಳಿಗ್ಗೆಯೇ ದಸರಾ ಪಾರಂಪರಿಕ ನಡಿಗೆಯಲ್ಲಿ ಉತ್ಸಾಹದಿಂದ ಭಾಗವಹಿಸಿದರು.

ಚಾಮರಾಜೇಶ್ವರ ದೇವಾಲಯದ ಅವರಣದಿಂದ ಪ್ರಾರಂಭವಾದ ದಸರಾ ಪಾರಂಪರಿಕ ನಡಿಗೆ ನಗರದ ಜೈಭುವನೇಶ್ವರಿ (ಪಚ್ಚಪ್ಪ) ವೃತ್ತದ ಮೂಲಕ ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ನ್ಯಾಯಾಲಯ ರಸ್ತೆ ಮೂಲಕ ಪ್ರವಾಸಿ ಮಂದಿರದಲ್ಲಿ ಮುಕ್ತಾಯಗೊಂಡಿತು. ಪಾರಂಪರಿಕ ನಡಿಗೆಯ ವೇಳೆ ಕೋರ್ಟ್ ರಸ್ತೆ ಕಾಮಗಾರಿ ಕುಂಠಿತವಾಗಿರುವುದನ್ನು ಗಮನಿಸಿದ ಸಚಿವರು, ಆದಷ್ಟು ಬೇಗನೆ ರಸ್ತೆ ಕಾಮಗಾರಿ ಕೈಗೊಳ್ಳಲು ಪ್ರಕ್ರಿಯೆ ಮುಂದುವರೆಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.



ಚಾಮರಾಜನಗರ ದಸರಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಯುವಕಲಾವಿದರು ನಟ ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರದೊಂದಿಗೆ ನೃತ್ಯ ಮೂಲಕ ಅವರನ್ನು ಸ್ಮರಿಸಿದರು.

## ಇಂದಿನ ದಸರಾ ಕಾರ್ಯಕ್ರಮಗಳು...

### ಚಾಮರಾಜೇಶ್ವರ ದೇಗುಲ ವೇದಿಕೆ

ಮಧ್ಯಾಹ್ನ 3ಕ್ಕೆ ಡೊಳ್ಳುಕುಣಿತ, 3.30ಕ್ಕೆ ನಾದಸ್ವರ, ಸಾಯಂಕಾಲ 4ಕ್ಕೆ ವಾದ್ಯ ಸಂಗೀತ, 4.30ಕ್ಕೆ ನೃತ್ಯರೂಪಕ, 5.30ಕ್ಕೆ ಭರತನಾಟ್ಯ, 6ಕ್ಕೆ ಕನ್ನಡ ಚಿತ್ರಗೀತೆಗಳು, 6.30ಕ್ಕೆ ಭಕ್ತಿ ಸಂಗೀತ, ರಾತ್ರಿ 7ಕ್ಕೆ ಸುಗಮ ಸಂಗೀತ, 7.30ಕ್ಕೆ ಸಂಗೀತ 8.30ಕ್ಕೆ ಜನಪದ ಸಂಗೀತ, 9ಕ್ಕೆ ಕಾಮಿಡಿ ಕಿಲಾಡಿಗಳು ಕಾರ್ಯಕ್ರಮ.

### ಜೆ.ಹೆಚ್.ಪಟೇಲ್ ಸಭಾಂಗಣ

ಬೆಳಗ್ಗೆ 9.45ಕ್ಕೆ ನಾದಸ್ವರ, 10.15ಕ್ಕೆ ಕಂಸಾಳೆ, 10.30ಕ್ಕೆ ಭಕ್ತಿಗೀತೆಗಳು, 11ಕ್ಕೆ ಪರಿವರ್ತನಾ ಗೀತೆ, 11.30ರಿಂದ 1.15ರವರೆಗೆ ವಿವಿಧ ತಂಡಗಳಿಂದ ತಂಬೂರಿಪದ, 1.15ಕ್ಕೆ ಭಜನೆ, 2ಕ್ಕೆ ಸುಗಮ ಸಂಗೀತ, 2.30ಕ್ಕೆ ಜನಪದ ನೃತ್ಯ, 3ರಿಂದ 16 ತಂಡಗಳಿಂದ ಸೋಬಾನೆ ಸಂಭ್ರಮ, ಸಾಯಂಕಾಲ 5ಕ್ಕೆ ಜಾನಪದ ನೃತ್ಯ, 5.30ಕ್ಕೆ ಹೋರಾಟದ ಗೀತೆ, 6ಕ್ಕೆ ಜನಪದ ಗೀತ ಗಾಯನ ಕಾರ್ಯಕ್ರಮ

### ಡಾ.ರಾಜ್‌ಕುಮಾರ್ ರಂಗಮಂದಿರ

ಬೆಳಗ್ಗೆ 10ಕ್ಕೆ ವಿಕ್ರಮರಾಜ ಪೌರಾಣಿಕ ನಾಟಕ, ಮಧ್ಯಾಹ್ನ 1ಕ್ಕೆ ರಂಗಗೀತೆ ಗಾಯನ, 1.30ಕ್ಕೆ ಭಕ್ತ ಪ್ರಹ್ಲಾದ ನಾಟಕ, ಸಾಯಂಕಾಲ 4.30ಕ್ಕೆ ರಂಗಗೀತೆ ಗಾಯನ, 5.30ಕ್ಕೆ ಕುರುಕ್ಷೇತ್ರ ಪೌರಾಣಿಕ ನಾಟಕ ಪ್ರದರ್ಶನ.

## ಗುಂಡ್ಲುಪೇಟೆಯಲ್ಲಿ ಗ್ರಾಮೀಣ ದಸರಾ



ಗುಂಡ್ಲುಪೇಟೆ,ಸೆ.28–ಪಟ್ಟಣದ ಪುರಸಭೆಯ ಬಯಲು ರಂಗಮಂದಿರದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಗ್ರಾಮೀಣ ದಸರಾ ಕಾರ್ಯಕ್ರಮವನ್ನು ಶಾಸಕ ಸಿ.ಎಸ್. ನಿರಂಜನಕುಮಾರ್ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ನಾಡಿನ ಸಂಸ್ಕೃತಿಯ ಪ್ರತೀಕವಾದ ನಾಡಹಬ್ಬ ದಸರಾವನ್ನು ರಾಜ್ಯಾದ್ಯಂತ ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತಿದ್ದು, ತಾಲೂಕಿನಲ್ಲಿಯೂ ಗ್ರಾಮೀಣ ದಸರಾ ಆಚರಿಸಲಾಗುತ್ತಿದೆ. ಕೊರೊನಾ ಕಾರಣದಿಂದ ಕಳೆದ ಬಾರಿ ಸರಳವಾಗಿ ಆಚರಿಸಲಾಗಿದ್ದರೂ ಈ ಬಾರಿ ನಾಡಿನಲ್ಲಿ ಉತ್ತಮ ಮಳೆ-ಬೆಳೆಗಾಗಿದ್ದು, ಅದ್ದೂರಿಯಾಗಿ ನಾಡಹಬ್ಬ ಆಚರಿಸಲಾಗುತ್ತಿದೆ ಎಂದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಪಟ್ಟಣದ ಅಧಿದೇವರಾದ ವಿಜಯನಾರಾಯಣಸ್ವಾಮಿ ದೇವಸ್ಥಾನದಿಂದ ತಾಯಿ ಚಾಮುಂಡೇಶ್ವರಿ ಭಾವಚಿತ್ರವನ್ನು ಅಲಂಕೃತ ವಾಹನದಲ್ಲಿ ನಂದಿಧ್ವಜ, ಮಂಗಳವಾದ್ಯ ಹಾಗೂ ಚಿತ್ತಾಕರ್ಷಕ ಕಲಾತಂಡಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ವಿವಿಧ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನ ನೀಡಲಾಯಿತು. ಈ ಸಂದರ್ಭದಲ್ಲಿ ತಹಸೀಲ್ದಾರ್ ರವಿಶಂಕರ್, ಪುರಸಭೆ ಮುಖ್ಯಾಧಿಕಾರಿ ಆರ್.ಹೇಮಂತರಾಜ್, ತಾಪಂ ಇಓ ಅರಸು, ಬಿಇಓ ಎಸ್.ಸಿ. ಶಿವಮೂರ್ತಿ, ಪುರಸಭೆ ಸದಸ್ಯ ನಾಗೇಶ್, ಪಿಕಾರ್ಡ್ ಬ್ಯಾಂಕ್ ಉಪಾಧ್ಯಕ್ಷ ಮಹೇಶ್, ನಿರ್ದೇಶಕ ಮಲ್ಲಿಕಾರ್ಜುನ ಸೇರಿದಂತೆ ಹಲವರಿದ್ದರು.

## ರಸ್ತೆ ಅಪಘಾತ; ಯುವಕ ಸಾವು

### ನೇತ್ರದಾನದ ಮೂಲಕ ಸಾರ್ಥಕತೆ ಮೆರೆದ ಕುಟುಂಬ..!



ಹನೂರು/ಕೊಳ್ಳೇಗಾಲ, ಸೆ.28– ಸ್ನೇಹಿತನ ಬರ್ತ್‌ಡೇ ಪಾರ್ಟಿ ಮುಗಿಸಿ ಬರುವಾಗ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಯುವಕ ಮೃತಪಟ್ಟಿದ್ದು, ಮೃತನ ಇಚ್ಛೆಯಂತೆ ಆತನ ಕಣ್ಣುಗಳನ್ನು ದಾನ ಮಾಡುವ ಮೂಲಕ ಕುಟುಂಬಸ್ಥರು ಸಾರ್ಥಕತೆ ಮೆರೆದಿದ್ದಾರೆ.

ಹನೂರು ತಾಲೂಕಿನ ಹೊಸದೊಡ್ಡಿ ಗ್ರಾಮದ ಚಂದ್ರಶೇಖರ್(21) ಮೃತ ಯುವಕ. ಚಾಮರಾಜನಗರ ಜಿಲ್ಲಾ ಕೇಂದ್ರದ ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕ ನಂಜುಂಡಸ್ವಾಮಿ ಅವರ ಪುತ್ರ ಚಂದ್ರಶೇಖರ್ ಡಿಪ್ಲೋಮಾ ಮುಗಿಸಿ ಮೈಸೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿಕೊಂಡು ಮೈಸೂರಿನಲ್ಲೇ ವಾಸವಾಗಿದ್ದ. ಮಂಗಳವಾರ ರಾತ್ರಿ ಮೈಸೂರಿನಲ್ಲಿ ತಮ್ಮ ಗೆಳೆಯನ ಹುಟ್ಟುಹಬ್ಬ ಮುಗಿಸಿ ಮನೆಗೆ ವಾಪಸ್ಸಾಗುತ್ತಿದ್ದ ವೇಳೆ ರಸ್ತೆ ಅಪಘಾತ ಸಂಭವಿಸಿ ತೀವ್ರ ಗಾಯಗೊಂಡಿದ್ದ.

ಬುಧವಾರ ಬೆಳಗ್ಗೆ ಚಿಕಿತ್ಸೆ ಫಲಕಾರಿಯಾಗದೆ ಖಾಸಗಿ ಆಸ್ಪತ್ರೆಯಲ್ಲಿ ಅಸುನೀಗಿದ್ದಾನೆ. ತಂದೆ ನಂಜುಂಡಸ್ವಾಮಿ ಪುತ್ರನ ಇಚ್ಛೆಯಂತೆ ಮೈಸೂರಿನ ಲಯನ್ಸ್‌ಸಂಸ್ಥೆಗೆ ನೇತ್ರದಾನ ಮಾಡಿದ್ದಾರೆ. ಆ ಮೂಲಕ ಹೊಸದೊಡ್ಡಿಯ ನಂಜುಂಡಸ್ವಾಮಿ ಕುಟುಂಬ ಪುತ್ರ ಶೋಕದ ನಡುವೆಯೂ ಸಾರ್ಥಕತೆ ಮೆರೆದಿದೆ. ಮರಣೋತ್ತರ ಪರೀಕ್ಷೆ ಬಳಿಕ ಸ್ವಗ್ರಾಮ ಹೊಸದೊಡಿಯಲ್ಲಿ ಬುಧವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು.

## ಭಾರತ್ ಜೋಡೋ ಯಾತ್ರೆ: ಬದಲಿ ಮಾರ್ಗಕ್ಕೆ ಡಿಸಿ ಆದೇಶ

ಚಾಮರಾಜನಗರ, ಸೆ.28–ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಗುಂಡ್ಲುಪೇಟೆಯಲ್ಲಿ ಭಾರತ್ ಜೋಡೋ ಯಾತ್ರೆ ನಡೆಯುವುದರಿಂದ ಕೇರಳ ಹಾಗೂ ತಮಿಳುನಾಡು ರಾಜ್ಯಗಳಿಂದ ರಾಜ್ಯಕ್ಕೆ ಬರುವ ಮತ್ತು ಹೋಗುವ ವಾಹನಗಳು ಸೆ.30 ಶುಕ್ರವಾರ ಹಾಗೂ ಅ.1ರ ಶನಿವಾರ ಬದಲಿ ರಸ್ತೆಯಲ್ಲಿ ಸಂಚರಿಸುವಂತೆ ಸೂಚಿಸಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಆದೇಶ ಹೊಡಿಸಿದ್ದಾರೆ.

**ಮಾರ್ಗ-1:** ಕೇರಳದ ಸುಲ್ತಾನ್ ಬತ್ತೇರಿಯಿಂದ ಮೂಲೆಹೊಳೆ ಮಾರ್ಗವಾಗಿ ಮೈಸೂರಿಗೆ ಹೋಗಲಿರುವ ವಾಹನಗಳನ್ನು ಗುಂಡ್ಲುಪೇಟೆ ಪೊಲೀಸ್ ಠಾಣೆಯ ವ್ಯಾಪ್ತಿಯ ಯಳದಹುಂಡಿ ಗ್ರಾಮದ ಕ್ರಾಸ್ ಬಳಿಯಿಂದ ಚೆನ್ನಮಲ್ಲಿಪುರ-ಹೊಂಗಹಳ್ಳಿ-ಮೂಕಹಳ್ಳಿ-ಮುಂಟಿಪುರ-ಬರಗಿ ಮಾರ್ಗವಾಗಿ ಚಲಿಸಿ, ಬೇಗೂರು ಠಾಣಾ ಸರಹದ್ದಿನ ದೇಶಿಪುರ ಕಾಲೋನಿ ಕ್ರಾಸ್-ದೇಶಿಪುರ-ಆಲತ್ತೂರು-ಹಸಗೂಲಿ ಮಾರ್ಗವಾಗಿ ಗರಗನಹಳ್ಳಿ ಗೇಟ್‌ಗೆ ಬಂದು ಮೈಸೂರಿಗೆ ತೆರಳುವುದು.

**ಮಾರ್ಗ-2:** ಕೇರಳದ ಸುಲ್ತಾನ್ ಬತ್ತೇರಿಯಿಂದ ಮೂಲೆಹೊಳೆ ಮಾರ್ಗವಾಗಿ ಊಟಿ ಕಡೆಗೆ ತೆರಳುರುವ ಹಾಗೂ ಊಟಿಯಿಂದ ಸುಲ್ತಾನ್ ಬತ್ತೇರಿಗೆ ತೆರಳುರುವ ವಾಹನಗಳನ್ನು ಗುಂಡ್ಲುಪೇಟೆ ಪೊಲೀಸ್ ಠಾಣಾ ಸರಹದ್ದಿನ ಕಗ್ಗಳದಹುಂಡಿ ಗ್ರಾಮದ ಕ್ರಾಸ್ ಬಳಿಯಿಂದ ಬೇರಂಬಾಡಿ-ಬೀಚನಹಳ್ಳಿ-ಲಕ್ಕಿಪುರ-ಗೋಪಲಾಪುರ-ಕಲುಣಗಳ್ಳಿ ಕಳ್ಳಿಪುರ-ದೇವರಹಳ್ಳಿ-ಹಂಗಳ ಮಾರ್ಗವಾಗಿ ಊಟಿಗೆ ಹಾಗೂ ಕೇರಳದ ಕಡೆಗೆ ತೆರಳುವುದು.

ಊಟಿ ಕಡೆಯಿಂದ ಮೈಸೂರಿಗೆ ಸಂಚರಿಸಲಿರುವ ವಾಹನಗಳು ಹಂಗಳ-ಹಂಗಳಪುರ-ಶಿವಪುರ ಕೋಡಹಳ್ಳಿ-ಅಣ್ಣೂರುಕೇರಿ ಮಾರ್ಗ ಗುಂಡ್ಲುಪೇಟೆ ಪಟ್ಟಣದ ಕೋಡಹಳ್ಳಿ ಸರ್ಕಲ್‌ಗೆ ಬಂದು ಚಾಮರಾಜನಗರ ರಸ್ತೆಯ ಮಾರ್ಗವಾಗಿ ಮೈಸೂರಿಗೆ ತೆರಳುವುದು.

**ಮದ್ಯ ಮಾರಾಟ ನಿಷೇಧ:** ಭಾರತ್ ಜೋಡೋ ಯಾತ್ರೆ ಹಿನ್ನೆಲ ಶಾಂತಿ ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಸೆ.29 ಮಧ್ಯರಾತ್ರಿಯಿಂದ ಅ.1ರ ಮಧ್ಯರಾತ್ರಿಯವರೆಗೆ ಜಿಲ್ಲೆಯಾದ್ಯಂತ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ ತಾವು ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.




# ದೇಶಭಕ್ತಿ ಗೀತೆಯೊಂದಿಗೆ ನೆರೆದ ಪ್ರೇಕ್ಷಕರ ಮೋಡಿ ಮಾಡಿದ ವಾಯುದಳ ಯೋಧರ ಆರ್ಕೆಸ್ಟ್ರಾ

## ಮುಂಗಾರು ಮಳೆ ಗೀತೆ ಹಾಡಿ ಅಭಿಮಾನದ ಮಳೆ ಸುರಿಸಿದ ಮಣಿಪುರ ಯೋಧ



ಮೈಸೂರು, ಸೆ.28(ಎಸ್‌ಬಿಡಿ)– ವಾಯುದಳ ಯೋಧರ ಭಾವಪ್ರಧಾನ ಆರ್ಕೆಸ್ಟ್ರಾ ದಸರಾ ಸಾಂಸ್ಕೃತಿಕ ಪ್ರಧಾನ ವೇದಿಕೆಯ ಘನತೆ ಹೆಚ್ಚಿಸಿತು.

ಮೈಸೂರು ಅರಮನೆ ಮುಂಭಾಗದ ಸಾಂಸ್ಕೃತಿಕ ವೇದಿಕೆಯಲ್ಲಿ ಬುಧವಾರ ಪೂರ್ವ ನಿಗದಿತ ಕಾರ್ಯಕ್ರಮಗಳಿಗೆ ಮುನ್ನ ಬೆಂಗಳೂರಿನ ಜಾಲಹಳ್ಳಿಯಲ್ಲಿರುವ ತರಬೇತಿ ಕಮಾಂಡ್ ಹೆಡ್ ಕ್ವಾರ್ಟರ್ಸ್ ಮತ್ತು ಏರ್ ಫೋರ್ಸ್ ಸ್ಟೇಷನ್ ಆಶ್ರಯದೊಂದಿಗೆ ಸ್ವಾತಂತ್ರ್ಯ ಅಮೃತ ಮಹೋತ್ಸವ ಪ್ರಯುಕ್ತ ಏರ್ ವಾರಿಯರ್ ಸಿಂಫನಿ ಆರ್ಕೆಸ್ಟ್ರಾ(ಎಡಬ್ಲ್ಯುಎಸ್‌ಓ) ತಂಡ ನೆರೆದಿದ್ದ ಪ್ರೇಕ್ಷಕರಲ್ಲಿ ಸಂಚಲನ ಸೃಷ್ಟಿಸಿತು.

ದೇಶೀಯ ಹಾಗೂ ಪಾಶ್ಚಿಮಾತ್ಯ ವಾದ್ಯಮೇಳದ ಉನ್ಮಾದದ ನಡುವೆ ಸೈನಿಕರು ದೇಶಭಕ್ತಿ ಗೀತೆಗಳು ಹಾಗೂ ಕನ್ನಡದ ಪ್ರಸಿದ್ಧ ಚಿತ್ರಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ ನಿಬ್ಬೆರಗಾಗಿಸಿದರು. ವೃತ್ತಿಪರ ಹಿನ್ನೆಲೆ ಗಾಯಕರು, ವಿದ್ವತ್ ಗಳಿಸಿಕೊಂಡಿರುವ ವಾದ್ಯ ಸಂಗೀತಗಾರರಂತೆ ಮನಮುಟ್ಟುವ ಸಂಗೀತ ಕಚೇರಿಯನ್ನು ನಡೆಸಿಕೊಟ್ಟರು. ವಾಯುದಳದ ಜೂನಿಯರ್ ಕಮಿಷನ್ಡ್ ರ‍್ಯಾಂಕ್ ಫ್ಲೈಟ್ ಲೆಫ್ಟಿನೆಂಟ್ ರೂಪಚಂದ್ರ, ಜೂನಿಯರ್ ವಾರಂಟ್ ಆಫೀಸರ್ ಆರ್.ಸಿಂಗ್, ಸಾರ್ಜೆಂಟ್ ಅಲೆಕ್ಸ್ ಇನ್ನಿತರ ಅಧಿಕಾರಿಗಳ ನೇತೃತ್ವದಲ್ಲಿ ಪ್ರಸ್ತುತಗೊಂಡ ಶಿಸ್ತುಬದ್ಧ, ಲಯಬದ್ಧ, ಸುಶ್ರಾವ್ಯ ಭಾವನಾತ್ಮಕ ಸಂಗೀತ ಕಾರ್ಯಕ್ರಮಕ್ಕೆ ಪ್ರೇಕ್ಷಕರಿಂದ ಅಮೋಘ ಪ್ರತಿಕ್ರಿಯೆ ವ್ಯಕ್ತವಾಯಿತು. ಪ್ರತಿ ವಾದ್ಯ ಸಂಗೀತ ಹಾಗೂ ಗಾಯನ ಪ್ರಸ್ತುತಿಗೂ ನಿರಂತರ ಚಪ್ಪಾಳೆ, ಘೋಷಣೆ ಮೂಲಕ ಸಂತಸ ವ್ಯಕ್ತಪಡಿಸಿದರು.

### ಸೈನಿಕರಿಂದ ಕನ್ನಡ ಕಂಪು

ಏರ್ ವಾರಿಯರ್ ಸಿಂಫನಿ ಆರ್ಕೆಸ್ಟ್ರಾದಲ್ಲಿ ಕನ್ನಡದ ಕಂಪು ಪಸರಿಸಿತು. ಮಣಿಪುರ ಮೂಲದ ಸೈನಿಕರೊಬ್ಬರು ದಸರಾ ವೇದಿಕೆಗೆಂದೇ 'ಮುಂಗಾರು ಮಳೆ' ಚಿತ್ರದ 'ಅನಿಸುತಿದೆ ಯಾಕೋ ಇಂದು ನೀನೇನೆ ನನ್ನವಳೆಂದು...' ಗೀತೆಯನ್ನು ಅಭ್ಯಾಸ ಮಾಡಿ ಸುಮಧುರವಾಗಿ ಪ್ರಸ್ತುತಪಡಿಸಿದರು. ಭಾವಪರವಶರಾಗಿ ಹಾಡಿದ್ದನ್ನು ನಿಬ್ಬೆರಗಾಗಿ ಆಲಿಸಿದ ಪ್ರೇಕ್ಷಕರು ಚಪ್ಪಾಳೆ ಮೂಲಕ ಅಭಿನಂದಿಸಿದರು. ಮತ್ತೊಬ್ಬರು ಪುನೀತ್ ರಾಜ್‌ಕುಮಾರ್ ಅಭಿನಯದ 'ರಾಜಕುಮಾರ' ಚಿತ್ರದ 'ಬೊಂಬೆ ಹೇಳುತೈತೆ ಮತ್ತೆ ಹೇಳುತೈತೆ ನೀನೇ ರಾಜಕುಮಾರ...', 'ಆಕಸ್ಮಿಕ' ಚಿತ್ರದ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು...' ಗೀತೆಗಳನ್ನು ಹಾಡುವಾಗ ನೆರೆದಿದ್ದವರು ಹೋ... ಎಂದು ಉದ್ಘರಿಸಿ, ಚಪ್ಪಾಳೆ ಸುರಿಮಳೆಗರೆದರು.

ಗಡಿಯಲ್ಲಿ ಶತ್ರುಗಳನ್ನು ಎದುರಿಸುವ ಯೋಧರ ಸವಾಲುಗಳು, ಕೆಚ್ಚೆದೆಯ ಹೋರಾಟವನ್ನು ವರ್ಣಿಸುವ 'ರಂಗ ಸೇನಾನಿ' ಗೀತೆ, 'ಕೇಸರಿ' ಚಿತ್ರದ 'ತೇರಿ ಮಿಟ್ಟಿ' ದೇಶಭಕ್ತಿ ಗೀತೆ, ವಿಮಾನ ಪ್ರದರ್ಶನ ಕುಶಲತೆ ಸಾರುವ 'ಸಾರಂಗ್ ಫ್ಯೂಷನ್', 'ರೋಜಾ' ಚಿತ್ರದ 'ಭಾರತ್ ಹಮ್‌ಕೋ ಜಾನ್‌ಸೆ...', 'ರಾಜಿ' ಚಿತ್ರದ 'ಏ ವತನ್...', ಬಾಗ್ ಮಿಲ್ಕಾ ಬಾಗ್ ಆಲ್ಬಂನ 'ಜಿಂದಾ...', 'ಅಮರ್ ಚೆಟ್ಟನ್...', 'ಉರಿ' ಚಿತ್ರದ 'ಜಿಗ್ರಾ...', ಭಾರತೀಯ ವಾಯುಪಡೆಯ ಸಮರ್ಪಣಾ ಗೀತೆ 'ಮಿಷನ್ ಉಡಾನ್...' ಸೇರಿದಂತೆ ಹಲವು ಗೀತೆಗಳನ್ನು ವಾದ್ಯ ಸಂಗೀತ ಹಾಗೂ ಗಾಯನದ ಮೂಲಕ ಪ್ರಸ್ತುತಪಡಿಸಿದರು. ದೇಶಭಕ್ತಿಯ 'ರಕ್ಷಕ್' ರಾಗದೊಂದಿಗೆ ಸಂಗೀತ ಕಾರ್ಯಕ್ರಮ ಸಂಪನ್ನಗೊಂಡಿತು.

ಇದೇ ವೇಳೆ ವಾಯುಪಡೆ ಅಧಿಕಾರಿಗಳಾದ ಸರವಣನ್, ರೂಪಚಂದ್ರ ಎ.ಪಾಲ್ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಶಾಸಕ ಎಲ್.ನಾಗೇಂದ್ರ ಅಭಿನಂದಿಸಿದರು. ಇದೇ ವೇಳೆ ಸಚಿವರನ್ನೂ ವಾಯುದಳದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.




## ವಾದ್ಯ ಸಂಗೀತ, ನೃತ್ಯ ವೈಭವ

**ಮೈಸೂರು:** ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂರನೇ ದಿನವಾದ ಇಂದು ಸಂಗೀತ ವೈಭವ ಮೇಳೈಸಿತು. ಮೊದಲಿಗೆ ಬೆಂಗಳೂರಿನ ಕರ್ನಾಟಕ ಕಲಾಶ್ರೀ ವಿದ್ವಾನ್ ಸಿ.ರಾಮದಾಸ್ ಅವರು ಪಕ್ಕವಾದ್ಯಕಾರರ ಸಹಕಾರದೊಂದಿಗೆ ಹಾರ್ಮೋನಿಯಂ ನುಡಿಸಿದರು. 'ಜಗದ್ದೋದ್ಧಾರನಾ....', 'ತಂಬೂರಿ ಮೀಟಿದವಾ...', 'ಭಾಗ್ಯದ ಲಕ್ಷ್ಮೀ ಬಾರಮ್ಮ...' ಸೇರಿದಂತೆ ಹಲವು ಕೃತಿಗಳನ್ನು ಹಾರ್ಮೋನಿಯಂ ಮೂಲಕ ನುಡಿಸಿ ಪ್ರೇಕ್ಷಕರ ಮನತಣಿಸಿದರು. ನಂತರ ಯಲ್ಲಾಪುರದ ಪಂಡಿತ್ ಗಣಪತಿ ಭಟ್ ಹಾಸಣಗಿ ಅವರು 'ದಾಸರ ಪದ' ಕಾರ್ಯಕ್ರಮ ಪ್ರಸ್ತುತಪಡಿಸಿದರು. ವಿಘ್ನ ವಿನಾಶಕನ ಸ್ಮರಿಸುವ ಪುರಂದರದಾಸರ ಪದದೊಂದಿಗೆ ಆರಂಭಿಸಿ, 'ಗಜವದನ ನಾ ಬೇಡುವೆ ಗೌರಿ ತನಯ ಬೇಡುವೆ...', 'ಯಾದವ ನೀ ಬಾ ಯದುಕುಲ ನಂದನಾ ಮಾಧವ...' ಹೀಗೆ ಹತ್ತಾರು ದಾಸರ ಪದಗಳನ್ನು ಭಾವನಾತ್ಮಕವಾಗಿ ಹಾಡಿದರು. ಕರ್ನಾಟಕ ಕಲಾಶ್ರೀ ಸತ್ಯನಾರಾಯಣರಾಜು ನೇತೃತ್ವದಲ್ಲಿ ಕಲಾವಿದರು ಪ್ರಸ್ತುತಪಡಿಸಿದ 'ಭರತನಾಟ್ಯ' ಅತ್ಯಾಕರ್ಷಕವಾಗಿತ್ತು. ಕೊನೆಯಲ್ಲಿ ಮುಂಬೈನ ಉಸ್ತಾದ್ ಫಝಲ್ ಖುರೇಷಿ ಅವರ 'ತಬಲವಾದನ'ವನ್ನು ನೆರೆದಿದ್ದವರು ತಲೆದೂಗಿ ಆಸ್ವಾಧಿಸಿದರು.







## ಮಹಿಳೆಯರಿಗೆ ಮನರಂಜನೆ ಜೊತೆಗೆ ಬಹುಮಾನ ಗೆಲ್ಲುವ ಸದವಕಾಶ



ಮೈಸೂರು,ಸೆ.28(ಎಂಟಿವೈ)– ಮೈಸೂರಿನ ಜೆ.ಕೆ.ಮೈದಾನದಲ್ಲಿ ಬುಧವಾರ ನಡೆದ ಮಹಿಳಾ ಮತ್ತು ಮಕ್ಕಳ ದಸರಾದ ಎರಡನೇ ದಿನ ಕಾರ್ಯಕ್ರಮದಲ್ಲಿ ಮಹಿಳೆಯರು ವಿವಿಧ ಸ್ಪರ್ಧೆಗಳಲ್ಲಿ ಪಾಲ್ಗೊಂಡು, ಗಮನ ಸೆಳೆದರು.

ಮೈಸೂರಿನ ಜೆ.ಕೆ.ಮೈದಾನದಲ್ಲಿ ನಡೆಯುತ್ತಿರುವ ಮಹಿಳಾ ಮತ್ತು ಮಕ್ಕಳ ದಸರಾ ಕಾರ್ಯಕ್ರಮದಲ್ಲಿ ಇಂದು ಮಹಿಳೆಯರಿಗಾಗಿ ವಿವಿಧ ಸ್ಪರ್ಧೆ ಆಯೋಜಿಸಲಾಗಿತ್ತು. ವೇಷಭೂಷಣ ಸ್ಪರ್ಧೆ, ರಾಗಿ ಬೀಸುವ ಸ್ಪರ್ಧೆ, ಒಲೆ ರಹಿತ ಅಡುಗೆ ಸ್ಪರ್ಧೆ ಆಯೋಜಿಸಲಾಗಿತ್ತು. ಮೂರು ಸ್ಪರ್ಧೆಯಲ್ಲೂ ಸಕ್ರಿಯವಾಗಿ ಪಾಲ್ಗೊಂಡ ಮಹಿಳೆಯರು ಕ್ರೀಡಾ ಮನೋಭಾವದಿಂದ ತಮ್ಮ ಸಾಮರ್ಥ್ಯ ಅನಾವರಣಗೊಳಿಸಿದರು. ಅದರಲ್ಲೂ ಗ್ರಾಮೀಣ ಪ್ರದೇಶದ ಮಹಿಳೆಯರು, ನಗರ ಪ್ರದೇಶದ ಮಹಿಳೆಯರಿಗೆ ಸರಿಸಮನಾಗಿ ಸ್ಪರ್ಧೆಯಲ್ಲಿ ಪಾಲ್ಗೊಂಡು ಪೈಪೋಟಿ ನೀಡಿದರು.

**ಸಾಂಪ್ರದಾಯಿಕ ಗೀತೆಯೊಂದಿಗೆ ರಾಗಿ ಬೀಸಿದ ಮಹಿಳೆಯರು:** ಆಧುನಿಕತೆ ಹಾಗೂ ಮುಂದುವರೆದ ತಂತ್ರಜ್ಞಾನದಿಂದಾಗಿ ಸಾಂಪ್ರದಾಯಿಕ ಕಲೆಗಳ ಕಣ್ಮರೆಯಾಗುತ್ತಿರುವ ಸಂದರ್ಭದಲ್ಲಿ ಗ್ರಾಮೀಣ ಕಲೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಮಹಿಳಾ ದಸರಾದಲ್ಲಿ ಮಹಿಳೆಯರಿಗಾಗಿ ರಾಗಿ ಬೀಸುವ ಸ್ಪರ್ಧೆ ಆಯೋಜಿಸಲಾಗಿತ್ತು. ಸ್ಪರ್ಧೆಯಲ್ಲಿ ಹಲವು ಮಂದಿ ಮಹಿಳೆಯರು ಪಾಲ್ಗೊಂಡಿದ್ದರು. ರಾಗಿ ಕಲ್ಲಿನಿಂದ ರಾಗಿ ಬೀಸಿ ಮಹಿಳೆಯರು ತಮ್ಮ ಸಾಂಪ್ರದಾಯಿಕ ಹಾಗೂ ಗ್ರಾಮೀಣ ಕಲೆಗೆ ಜೀವಂತಿಕೆ ಇರುವುದನ್ನು ಸಾಬೀತು ಮಾಡಿದರು. ಸ್ಪರ್ಧೆಯಲ್ಲಿ ನಂಜನಗೂಡಿನ ಮರಳೂರಿನ ಕೆಂಪಮ್ಮ ಪ್ರಥಮ ಬಹುಮಾನ, ಹುಣಸೂರಿನ ಯಶೋಧ ದ್ವಿತೀಯ ಬಹುಮಾನ, ತಳೂರಿನ ಕೆಂಪಮ್ಮಣ್ಣಿ ತೃತೀಯ ಬಹುಮಾನ ಪಡೆದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ವಿಜೇತರಿಗೆ ಶುಭ ಕೋರಿದರು.

**ವೇಷಭೂಷಣ ಸ್ಪರ್ಧೆ:** ಮಹಿಳೆಯರಿಗೆ ಆಯೋಜಿಸಿದ್ದ ವಿವಿಧ ವೇಷಭೂಷಣ ಸ್ಪರ್ಧೆಯಲ್ಲಿ ಹಲವು ಮಹಿಳೆಯರು ವಿವಿಧ ವೇಷಧಾರಿಗಳಾಗಿ, ಕೆಲ ಸಂಭಾಷಣೆಯನ್ನು ಪ್ರಸ್ತುತಪಡಿಸುವ ಮೂಲಕ ಗಮನ ಸೆಳೆದರು. ಸ್ಪರ್ಧೆಯಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಪಾತ್ರಧಾರಿಯಾಗಿದ್ದ ಮೈಸೂರಿನ ವಿಜಯನಗರದ ಸೌಮ್ಯ ಪ್ರಥಮ ಬಹುಮಾನ ಪಡೆದರು. ಮಂಥರೆ ಪಾತ್ರಧಾರಿ ಮೈಸೂರಿನ ಅಗ್ರಹಾರದ ಸರೋಜ ಗಣೇಶ್ ದ್ವಿತೀಯ, ಶಕುಂತಲೆ ವೇಷ ಧರಿಸಿದ್ದ ಸೌಮ್ಯ ಸತೀಶ್ ಮೂರನೇ ಬಹುಮಾನ ತನ್ನದಾಗಿಸಿಕೊಂಡರು.

**ಒಲೆ ರಹಿತ ಅಡುಗೆ ಸ್ಪರ್ಧೆ:** ಸ್ಥಳದಲ್ಲೇ ಒಲೆ ಬಳಸದೆ ಅಡುಗೆ ಮಾಡುವ ಸ್ಪರ್ಧೆಯಲ್ಲಿ ನಗರ ಪ್ರದೇಶದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಮನೆಯಲ್ಲೇ ಮಸಾಲೆ ತಯಾರಿಸಿಕೊಂಡು ಬಂದಿದ್ದ ಮಹಿಳೆಯರು, ಪಾನಿಪುರಿ, ಬೇಲ್‌ಪುರಿ, ಮಸಾಲೆ ಪಾಪಡ್ ಸೇರಿದಂತೆ ಇನ್ನಿತರ ರುಚಿಕರವಾದ ತಿನಿಸನ್ನು ತಯಾರಿಸಿ ಗಮನ ಸೆಳೆದರು. ಈ ಸ್ಪರ್ಧೆಯಲ್ಲಿ ಕೆ.ಆರ್.ನಗರದ .ಸಿ.ಆರ್.ಕಲಾ ಪ್ರಥಮ ಬಹುಮಾನ, ಮೈಸೂರಿನ ವಿದ್ಯಾರಣ್ಯಪುರಂನ ಎನ್.ಶಿಲ್ಪಶ್ರೀ ದ್ವಿತೀಯ ಹಾಗೂ ಬನ್ನೂರಿನ ವಸಂತಿ ಮೂರನೇ ಬಹುಮಾನ ಪಡೆದರು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ದಸರಾ ಉಪ ಸಮಿತಿ ಅಧ್ಯಕ್ಷೆ ಸುನಂದಾ ರಾಜ್, ಉಪಾಧ್ಯಕ್ಷೆ ಹೇಮ ನಂದೀಶ್, ಸದಸ್ಯೆ ಕವಿತಾ ಕಾಳೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಸವರಾಜ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

### ದಸರಾ ಚಲನಚಿತ್ರೋತ್ಸವದಲ್ಲಿ ಇಡೀ ದಿನ 'ಅಪ್ಪು' ಚಲನಚಿತ್ರಗಳ ಪ್ರದರ್ಶನ

## ಅಪ್ಪು ಭಾವಚಿತ್ರಕ್ಕೆ ಪತ್ನಿಯಿಂದ ಪುಷ್ಪನಮನ



ಮೈಸೂರು, ಸೆ.28(ಆರ್‌ಕೆಬಿ)– ಮೈಸೂರು ದಸರಾ ಚಲನಚಿತ್ರೋತ್ಸವದ ಅಂಗವಾಗಿ ದಸರಾ ಚಲನಚಿತ್ರೋತ್ಸವ ಉಪಸಮಿತಿ ಬುಧವಾರ ಮೈಸೂರಿನ ಐನಾಕ್ಸ್ ಚಿತ್ರಮಂದಿರದಲ್ಲಿ ಏರ್ಪಡಿಸಿದ್ದ 'ಅಪ್ಪು ನಮನ' ಕಾರ್ಯಕ್ರಮಕ್ಕೆ ನಟ ಪುನೀತ್ ರಾಜ್‌ಕುಮಾರ್ ಪತ್ನಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಪುನೀತ್ ರಾಜ್‌ಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಚಾಲನೆ ನೀಡಿದರು. ನಂತರ ಕೆಲ ಕಾಲ ಅಪ್ಪು ಅವರ ಚಿತ್ರಗಳನ್ನು ವೀಕ್ಷಿಸಿದರು.

ಮೈಸೂರು ದಸರಾ ಚಲನಚಿತ್ರೋತ್ಸವದಲ್ಲಿ ನಟ 'ಅಪ್ಪು' ನಟಿಸಿರುವ ಚಲನಚಿತ್ರಗಳಿಗೆ ಒಂದು ದಿನ ಮೀಸಲಿಡಲಾಗಿದ್ದು, ಅವರ ನಟನೆಯ ಹಲವು ಚಿತ್ರಗಳು ಇಂದು ಪ್ರೇಕ್ಷಕರ ಕರತಾಡನ, ಶಿಳ್ಳೆ, ಜೈಕಾರದ ನಡುವೆ ಪ್ರದರ್ಶನಗೊಂಡವು.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ಮೇಯರ್ ಶಿವಕುಮಾರ್, ಉಪಮೇಯರ್ ರೂಪಾ ಯೋಗೇಶ್, ಚಲನಚಿತ್ರ ಉಪ ಸಮಿತಿ ಅಧ್ಯಕ್ಷ ಹೊಸಳ್ಳಿ ವೆಂಕಟೇಶ್, ಉಪಾಧ್ಯಕ್ಷರಾದ ಎಂ.ಮಹದೇವಯ್ಯ, ಪ್ರಕಾಶ್ ಪಾಟೀಲ್, ಕಿರಣ್ ಜಯರಾಮೇಗೌಡ, ಸದಸ್ಯರಾದ ಉದಿತ್ ಗೌಡ, ರಘು, ಆರ್. ಶೇಷಾ, ಕಾರ್ಯದರ್ಶಿ ಟಿ.ಕೆ.ಹರೀಶ್ ಇನ್ನಿತರರು ಉಪಸ್ಥಿತರಿದ್ದರು.



ಉನ್ನತ ಶಿಕ್ಷಣ ಸಚಿವ ಅಶ್ವತ್ಥ ನಾರಾಯಣ್,ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರೊಂದಿಗೆ ಬುಧವಾರ ರಾತ್ರಿ ಅಂಬಾರಿ ಬಸ್‌ನಲ್ಲಿ ಪ್ರಯಾಣಿಸಿ ಮೈಸೂರಲ್ಲಿ ದಸರಾ ದೀಪಾಲಂಕಾರ ವೀಕ್ಷಿಸಿದರು. ಈ ವೇಳೆ ಮೇಯರ್ ಶಿವಕುಮಾರ್, ಬಿಜೆಪಿ ಜಿಲ್ಲಾಧ್ಯಕ್ಷ ಶ್ರೀವತ್ಸ, ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು ಮತ್ತು ಚೆಸ್ಕಾಂ ಅಧಿಕಾರಿಗಳು ಸಾಥ್ ನೀಡಿದರು.

## ದಸರಾ ಕಾರ್ಯಕ್ರಮ ಸ್ಥಳಗಳಲ್ಲಿ ಸಾರ್ವಜನಿಕರಿಗೆ ಸ್ವಚ್ಛತೆಯ ಅರಿವು



ಮೈಸೂರು, ಸೆ.28(ಜಿಎ)–ದಸರಾ ಮಹೋತ್ಸವ ಮುಕ್ತಾಯವಾಗುವವರೆಗೂ ಕಾರ್ಯಕ್ರಮಗಳು ನಡೆಯುತ್ತಿರುವ ಸ್ಥಳಗಳಲ್ಲಿ ಸಾರ್ವಜನಿಕರಿಗೆ ವಿಭಿನ್ನ ರೀತಿಯಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಲಾಗುವುದು ಎಂದು ದಸರಾ ಸ್ವಚ್ಛತಾ ಉಪಸಮಿತಿ ಉಪ ವಿಶೇಷಾಧಿಕಾರಿ ಹಾಗೂ ಪಾಲಿಕೆ ಆಯುಕ್ತರೂ ಆದ ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.

ಮಹಾನಗರ ಪಾಲಿಕೆಯ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೆ.24 ರಿಂದ ಅ.5ರವರೆಗೂ ಬೀದಿ ನಾಟಕ, ರಂಗೋಲಿ ಬಿಡಿಸುವುದು, ಸ್ವಚ್ಛತೆ ಕುರಿತು ಗೋಡೆಗಳ ಮೇಲೆ ಚಿತ್ರ ಬಿಡಿಸುವುದು, ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಸೇರಿದಂತೆ ವಿಶೇಷ ಕಾರ್ಯಕ್ರಮಗಳ ಮೂಲಕ ಸಾರ್ವಜನಿಕರಿಗೆ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುತ್ತೇವೆ. ಈಗಾಗಲೇ ಅರಿವು ಅಭಿಯಾನ ಆರಂಭವಾಗಿದ್ದು, ಕಾರ್ಯಕ್ರಮಗಳು ನಡೆಯುವ ಸ್ಥಳಗಳಿಗೆ ತೆರಳಿ ಭಿತ್ತಿಪತ್ರ ಹಂಚುವುದರ ಮೂಲಕ ಅರಿವು ಮೂಡಿಸುತ್ತಿದ್ದೇವೆ ಎಂದರು.

ಈಗಾಗಲೇ ರಸ್ತೆಗಳ ಸ್ವಚ್ಛತಾ ಕಾರ್ಯಕ್ಕಾಗಿ 245 ಮಂದಿ ಮತ್ತು ಕಾರ್ಯಕ್ರಮದ ಸ್ಥಳಗಳಲ್ಲಿ ಸ್ವಚ್ಛತೆ ಮಾಡಲು 120 ಮಂದಿ ಗುತ್ತಿಗೆ ಕಾರ್ಮಿಕರನ್ನು ಬಳಸಿಕೊಳ್ಳಲಾಗುತ್ತಿದೆ. ಇದರೊಟ್ಟಿಗೆ 62 ಆಟೋ, 18 ಕಾಂಪಾಕ್ಟರ್ ಮತ್ತು ಕಸಗುಡಿಸಲು 1 ಯಂತ್ರವನ್ನು ಬಳಸಲಾಗುತ್ತಿದ್ದು, ಕಾರ್ಯಕ್ರಮದ ಸ್ಥಳಗಳಲ್ಲಿ 20ಕ್ಕೂ ಹೆಚ್ಚು ಸಂಚಾರಿ ಶೌಚಾಲಯಗಳನ್ನು ಅಳವಡಿಸಲಾಗಿದೆ. ಇವುಗಳ ಜೊತೆಗೆ ಸ್ವಚ್ಛತಾ ಅರಿವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಪ್ರತಿ ನಿತ್ಯ ಕಸ ಬೀಳುವ ಸ್ಥಳಗಳನ್ನು ಸ್ವಚ್ಛಗೊಳಿಸಿ ಆ ಸ್ಥಳಗಳಲ್ಲಿ ಸ್ವಚ್ಛತೆಯ ಕುರಿತು ರಂಗೋಲಿ ಬಿಡಿಸುವ ಮೂಲಕ ಅರಿವು ಮೂಡಿಸಲಾಗುತ್ತಿದೆ. ಸೆ.30 ರಂದು ಆಹಾರ ಮೇಳ, ಕುಪ್ಪಣ್ಣ ಪಾರ್ಕ್ ಮತ್ತು ಚಿಕ್ಕ ಗಡಿಯಾರದ ಬಳಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಲು ಬೀದಿ ನಾಟಕದ ಮೂಲಕ ಅರಿವು ಮೂಡಿಸಿದರೆ, ರಾಮಸ್ವಾಮಿ ವೃತ್ತದ ಬಳಿ ಗೋಡೆಗಳಿಗೆ ಸ್ವಚ್ಛತೆ ಕುರಿತಾದ ಪೇಂಟಿಂಗ್ಸ್ ಮಾಡಲಾಗುವುದು ಎಂದರು.

ಅ.2 ರಂದು ಗಾಂಧೀ ಜಯಂತಿ ಅಂಗವಾಗಿ ಬೆಳಗ್ಗೆ 6 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಸ್ವಚ್ಛತಾ ಶ್ರಮದಾನ ಮತ್ತು ಬೆಳಗ್ಗೆ 8 ಗಂಟೆಗೆ ಟೌನ್‌ಹಾಲ್ ಆವರಣದಲ್ಲಿ ಶಾಲಾ ಮಕ್ಕಳಿಗಾಗಿ ಸ್ವಚ್ಛತೆ ಕುರಿತಾದ ಚಿತ್ರಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿದ್ದು, 5ರಿಂದ 10 ವರ್ಷದ ಮಕ್ಕಳಿಗೆ ಮತ್ತು 10 ರಿಂದ 15 ವರ್ಷದ ಮಕ್ಕಳಿಗೆ ಏರ್ಪಡಿಸಲಾಗಿದೆ. ಈ ಕುರಿತು ಸಂಬಂಧಪಟ್ಟ ಬಿಇಓ ಬಳಿ ಚರ್ಚಿಸಲಾಗಿದೆ. ಚಿತ್ರಕಲೆಯಲ್ಲಿ ಆಸಕ್ತಿ ಹೊಂದಿರುವ ಮಕ್ಕಳನ್ನು ಅವರು ಆಯ್ಕೆ ಮಾಡಲಿದ್ದಾರೆ. ದಸರಾ ಮಹೋತ್ಸವ ಪೂರ್ಣಗೊಂಡ ನಂತರ ಅ.7 ನಿವೃತ್ತಿ ಅಂಚಿನಲ್ಲಿರುವ ಸುಮಾರು 10ರಿಂದ 15 ಪೌರಕಾರ್ಮಿಕರಿಗೆ ಪೌರ ಸನ್ಮಾನ ಮಾಡಲಾಗುವುದು ಎಂದು ಸಮಿತಿಯ ಕಾರ್ಯಾಧ್ಯಕ್ಷೆ ಸವಿತ ತಿಳಿಸಿದರು.

> ಪಾಲಿಕೆಗೆ ಬಂದಿರುವ ಅನುದಾನದಲ್ಲಿ 18 ಪ್ರಮುಖ ರಸ್ತೆಗಳನ್ನು ಡಾಂಬರೀಕರಣ ಮಾಡಲಾಗುತ್ತಿದೆ. ಇದರಲ್ಲಿ ಈಗಾಗಲೇ 15 ರಸ್ತೆಗಳ ಡಾಂಬರೀಕರಣ ಮುಕ್ತಾಯವಾಗಿದ್ದು, ನಾರಾಯಣ ಶಾಸ್ತ್ರಿ ರಸ್ತೆ, ಅಜೀಜ್ ಸೇಠ್ ರಸ್ತೆ ಮತ್ತು ನ್ಯೂ ಕಾಂತರಾಜ ಅರಸ್ ರಸ್ತೆಗಳ ಡಾಂಬರೀಕರಣ ಮಾಡಬೇಕಿದೆ. ಸದ್ಯದಲ್ಲಿಯೇ ಅದು ಪೂರ್ಣಗೊಳ್ಳಲಿದೆ. ಸ್ವಚ್ಛತೆಗಾಗಿ ಮೈಸೂರಿಗೆ ಪ್ರಶಸ್ತಿ ಲಭಿಸಿದೆ. ಆದರೆ, ಅದು ಯಾವ ವರ್ಗದಲ್ಲಿ ಬಂದಿದೆ ಎಂದು ಅವರು ತಿಳಿಸಿಲ್ಲ. ಅದರ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಅ.1 ರಂದು ದೆಹಲಿಯಲ್ಲಿ ನಡೆಯಲಿದ್ದು, ಅಂದು ತಿಳಿಯಲಿದೆ. ಪ್ರಶಸ್ತಿ ಸ್ವೀಕರಿಸಲು ಮೇಯರ್ ಮತ್ತು ಉಪ ಮೇಯರ್ ತೆರಳಲಿದ್ದಾರೆ.
>
> -ಲಕ್ಷ್ಮೀಕಾಂತ ರೆಡ್ಡಿ, ಉಪ ವಿಶೇಷಾಧಿಕಾರಿ, ದಸರಾ ಸ್ವಚ್ಛತಾ ಉಪಸಮಿತಿ, ಪಾಲಿಕೆ ಆಯುಕ್ತ



ದಸರಾ ವಸ್ತು ಪ್ರದರ್ಶನದಲ್ಲಿ ಮೈಸೂರು ಕೇಂದ್ರ ಕಾರಾಗೃಹದ ಕೈದಿಗಳು ತಯಾರಿಸಿದ ವಿವಿಧ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ 'ಪರಿವರ್ತನ ಉತ್ಪನ್ನ' ಮಳಿಗೆಯನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ಎಲ್. ರಘುನಾಥ್ ಅವರು ಉದ್ಘಾಟಿಸಿದರು. ಈ ವೇಳೆ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ, ಮೈಸೂರು ಜಿಲ್ಲಾ ಕಾರಾಗೃಹ ಅಧೀಕ್ಷಕಿ ಕೆ.ಸಿ.ದಿವ್ಯಶ್ರೀ, ಸಹಾಯಕ ಅಧೀಕ್ಷಕ ವಿಜಯ್ ಎಸ್ ರೋಡ್ಕರ್ ಉಪಸ್ಥಿತರಿದ್ದರು.

# ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

## WANTED
Female Telecaller - 10
Data Entry Operators - 12
For More Information
9743283001
9980959598

## ವ್ಯಾಪಾರಕ್ಕೆ ಸೂಕ್ತವಾದ ಹೊಸ ಮಳಿಗೆ / ಮನೆ / ಬಾಡಿಗೆಗೆ
ಸುಮಾರು ಉದ್ದ 20 ಅಡಿ, ಅಗಲ 15 ಅಡಿ ಇರುವ ಮಳಿಗೆ (Shop) ಮುಖ್ಯ ರಸ್ತೆಗೆ ಹೊಂದಿಕೊಂಡಂತೆ ಇರುತ್ತದೆ. ಇದು ಜುವೆಲರ್ಸ್ ಶಾಪ್, ಡಾ|| ಕ್ಲಿನಿಕ್, ಮೆಡಿಕಲ್, ಫ್ಯಾನ್ಸಿಸ್ಟೋರ್, ಪ್ರಾವಿಷನ್ ಸ್ಟೋರ್, ಪ್ಲೇವುಡ್ / ಪೇಯಿಂಟ್ಸ್, ಸ್ಟೇಷನರಿ, ಕ್ರಾಫರಿಶಾಪ್, ಬೇಕರಿ ಸ್ವೀಟ್ ಸ್ಟಾಲ್, ಬಟ್ಟೆ ಅಂಗಡಿ, ಟೈಲರಿಂಗ್, ರೆಡಿಮೆಡ್ ಶಾಪ್, ಇಷ್ಟು ವ್ಯಾಪಾರಕ್ಕೆ ಸೂಕ್ತವಾದ ಈ ಬಿಲ್ಡಿಂಗ್‌ಗೆ ಹೊಂದಿಕೊಂಡಂತೆ ವಾಸದ ಮನೆಯೂ ಬಾಡಿಗೆಗೆ ಲಭ್ಯವಿರುತ್ತದೆ. ಸ್ಥಳ: ಬನ್ನಿಮಂಟಪ ರಿಂಗ್ ರಸ್ತೆ, ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಹತ್ತಿರ, ಮೈಸೂರು. ಸಂಪರ್ಕಿಸಿ:
8553501505 / 9611240336

## WANTED FEMALE TELECALLERS
Language: Kannada, English & Hindi,
Qualification: SSLC / PUC / Degree / Post Graducation,
Salary: Rs.10,000 to 20,000 including Incentive
9538688412

## ಮಾರಾಟಕ್ಕಿದೆ
3 ಬೆಡ್ ರೂಂ ಇಟಾಲಿಯನ್ ಕಿಚನ್ 30x40 ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ. ಬೆಲೆ 85 ಲಕ್ಷ ಫೈನಲ್, ಹೊಸ ಮನೆ – ಹಳೇಮನೆ – ಸೈಟ್ ಮಾರುವವರು ಕೊಳ್ಳುವವರು ಸಂಪರ್ಕಿಸಿ:
9945042875

## ತಕ್ಷಣ ಬೇಕಾಗಿದ್ದಾರೆ
ಮೈಸೂರು KSRTC ಸಬರ್ಬ್ ಬಸ್ ಸ್ಟಾಂಡ್ ಸಮೀಪ ಚಿಕ್ಕ ಕುಟುಂಬಕ್ಕೆ ಅಡುಗೆ ಕೆಲಸ ಮನೆ ಕೆಲಸಕ್ಕೆ ಮಹಿಳೆ Cook ಬೇಕಾಗಿದ್ದಾರೆ ಮತ್ತು ಬಟ್ಟೆ ಅಂಗಡಿ ಕೆಲಸಕ್ಕೆ ಹುಡುಗ Sales Boy ಬೇಕಾಗಿದ್ದಾರೆ. ವಾಸಿಸಲು ಉಚಿತವಾಗಿ ಔಟ್‌ಹೌಸ್ ಇದೆ. ಒಂದೇ ಕುಟುಂಬದವರಿಗೆ ಆದ್ಯತೆ.
7349480337

## ಶ್ರೀ ಗೌರೀಶಂಕರ ಟ್ರಾವೆಲ್ಸ್
8–10–22 (14 ದಿನ): ಗಂಗೋತ್ರಿ, ಯಮುನೋತ್ರಿ, ಬದರೀನಾಥ್, ಕೇದಾರ್‌ನಾಥ್, ದೆಹಲಿ, ಹರಿದ್ವಾರ್ ಇತ್ಯಾದಿ.
1–11–22 (8 ದಿನ): ದೆಹಲಿ, ಆಗ್ರಾ, ಅಲಹಾಬಾದ್, ವಾರಣಾಸಿ, ಗಯಾ, ಅಯೋಧ್ಯ ಇತ್ಯಾದಿ.
10–11–22 (4 ದಿನ): ಬಾಂಬೆ, ಭೀಮಶಂಕರ, ಶಿರಡಿ, ನಾಸಿಕ್, ತ್ರಯಂಬಕೇಶ್ವರ್, ಘೃಷ್ಣೇಶ್ವರ, ಎಲ್ಲೋರ ಇತ್ಯಾದಿ.
ವಿಮಾನ/ಬಸ್/ಊಟ/ರೂಂ ಸೇರಿರುತ್ತದೆ.
Mob: 9620002114

## HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC
Sales & Service
Contact: Srinivas
9379699229

## ತಕ್ಷಣ ಬೇಕಾಗಿದ್ದಾರೆ
ಯಾವುದೇ ಶುಲ್ಕ ಇಲ್ಲದೆ ಬಂದ ದಿನವೇ ನೇರ ನೇಮಕಾತಿ
(ಯುವತಿಯರು ಮಾತ್ರ)
ಆಫೀಸ್ ವರ್ಕ್ :– ಟೆಲಿಕಾಲಿಂಗ್
ಸಂಬಳ: 7000+ Incentives
ಸಮಯ: 9.30 am to 6.00 pm,
ಆದ್ಯತೆ: Freshers / Experienced.
9632600132 / 9611650720

## LEASE / RENT
1) One BHK Out House for Lease in Saraswathipuram.
2) Three BHK Main House for Rent in Saraswathipuram Suitable for PG in 54x43.
Contact:
9606962010

## SITE FOR SALE
Instalment available
MUDA Shop for Sale Ramakrishna Nagar.
Contact:
9483358399 / 9535601201

## ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

## ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ, ವಿದ್ಯಾರ್ಹತೆ:– ಕನಿಷ್ಠ ಓದು / ಬರಹ ಗೊತ್ತಿರಬೇಕು. ವೇತನ:– 12,818 + ESI & PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502 / 9108100117

## ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿಗೆ SSLC/ PUC Pass or Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
BENAKA - ITI College, Near Cauvery Circle, Dr. Rajkumar Road, Raghavendra Nagar, Mysore
9342123467
9141756695

## SRA Package Tours
4 ದಿನಗಳ ಕೇರಳ ಪ್ರವಾಸ ಅನಂತ ಪದ್ಮನಾಭ ದೇವಸ್ಥಾನ, ಅಲ್ಲೆಪಿ, ಕೊಚಿನ್, ಕೋವಲಂ ಬೀಚ್, ಗುರುವಾಯೂರು, ಚೋಟಾನಿಕರ ದೇವಿ ದೇವಸ್ಥಾನ, ಜಟಾಯು ಅರ್ಥ ಸೆಂಟರ್.
ಫ್ಯಾಮಿಲಿಗೆ ಪ್ರತ್ಯೇಕ ಕೊಠಡಿ. ಶುದ್ಧ ಸಸ್ಯಾಹಾರ, ಮಿನರಲ್ ವಾಟರ್, ಕಾಫಿ / ಟೀ. ಕೇವಲ ರೂ. 5300/–. ಹೊರಡುವ ದಿನಾಂಕ: 28–10–2022 ಸಂಜೆ 6 ಗಂಟೆಗೆ. ಸಂಪರ್ಕಿಸಿ:
Mob: 70222-71023

## SITE FOR SALE
40x60 West Face 80 Lakhs Negotiable
R.I Layout, Near NPS School, Vijaynagar 4th Stage,
7829472235
9448054390

## ತಕ್ಷಣ ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ಅನುಭವವುಳ್ಳ 1) ಸೌತ್ ಇಂಡಿಯನ್ ಭಟ್ಟರು, 2) ನಾರ್ತ್ ಇಂಡಿಯನ್ ಭಟ್ಟರು + ರೋಟಿ ಮಾಡುವವರು, 3) ಹೆಲ್ಪರ್‌ಗಳು, 4) ಸಪ್ಲೆಯರ್‌ಗಳು, 5) ಕೌಂಟರ್ ಕೆಲಸ ಮಾಡುವವರು, 6) ಟೀ+ಕಾಫಿ ಮಾಡುವವರು, 7) ದೋಸೆ ಭಟ್ಟರು, 8) ಚಾಟ್ಸ್ + ಚೈನೀಸ್ ಮಾಡುವವರು. ಮೊದಲು ಬಂದವರಿಗೆ ಆದ್ಯತೆ ಒಂಟಿಕೊಪ್ಪಲಿನಲ್ಲಿ ಕೆಲಸ
8088337564 / 9380681467

## ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ಎಸ್.ಎಸ್.ಎಲ್.ಸಿ
9538886326
0821-4852002 / 2303459

## SCRAP DEALERS
Bharath Traders, Mysore Karnataka.
We Buy All Kinds of Scrap, Industrial Scrap, Metal, Brass, Vessels, Electronics, Used Furnitures, Old UPS, Batteries and Old Generators, Any condition)
Door Step Pick Up all over Karnataka
98454-31582 / 74113-07269

## ಮನೆ ಮಾರಾಟಕ್ಕಿದೆ
ಮೈಸೂರು ನಗರ, ಶ್ರೀರಾಂಪುರ, 2ನೇ ಹಂತ, ಕಂದಾಯನಗರ, ರಿಂಗ್ ರಸ್ತೆಯ ಪಕ್ಕದಲ್ಲಿ, ಉತ್ತರ ದಿಕ್ಕು, ಪೂರ್ವ ಬಾಗಿಲಿನ 3 ಅಂತಸ್ತಿನ 30x40 (G/F, F/F, S/F, T/F) ಮನೆ ಸುಮಾರು 42,000 ತಿಂಗಳಿಗೆ ಬಾಡಿಗೆ ಬರುವಂತಹ ಎಲ್ಲಾ ಸುಸಜ್ಜಿತ ಸೌಲಭ್ಯಗಳುಳ್ಳ ಮನೆ ಮಾರಾಟಕ್ಕಿದೆ. ಬೆಲೆ 1.75 Cr. (Slightly Negotiable). ಹೆಚ್ಚಿನ ವಿವರಗಳಿಗೆ ಮತ್ತು ವೀಕ್ಷಿಸಲು ಕರೆ ಮಾಡಿ
7996504996

## ಪ್ರವೇಶ ಪ್ರಕಟಣೆ – 2022–23
ಎಂ.ಇ.ಎಸ್. ಕೈಗಾರಿಕಾ ತರಬೇತಿ ಸಂಸ್ಥೆ,
ತಿಲಕ್ ನಗರ, ಮೈಸೂರು – 01 ರಲ್ಲಿ
Electrician, Electronics Mechanic & Fitter
ವೃತ್ತಿಗಳಲ್ಲಿ ಕೆಲವೊಂದು ಸೀಟುಗಳು ಮಾತ್ರ ಲಭ್ಯವಿರುತ್ತದೆ. ಪ್ರವೇಶ ಪಡೆಯಲು ಕೊನೆಯ ದಿನಾಂಕ: 30/09/2022, ಕೂಡಲೇ ಸಂಪರ್ಕಿಸಿ
0821-2494654
9844403929

## Sudarshan Saur
SOLAR WATER HEATER




SUNZONE SOLAR SYSTEM
Vishwamanava Double Road, Kuvempunagar, Mysuru
9845175443

## ಮಾರಾಟಕ್ಕಿದೆ
ಉತ್ತಮವಾಗಿ ನಡೆಯುತ್ತಿರುವ ಕಾಫಿಪುಡಿ ಅಂಗಡಿ ಮಾರಾಟಕ್ಕಿದೆ.
ಸಂಪರ್ಕಿಸಿ:
7676840962

## COMMERCIAL SITE FOR SALE
40x80 Dimension, North Face Road, 1st main, Near Kanti Complex, Saraswathipuram, Mysuru,
Interested Please Call
9449601309

## ಬೇಕಾಗಿದ್ದಾರೆ
ಬಲ್ಲಾಳ್ ಸರ್ಕಲ್ ಹತ್ತಿರದ ಪ್ರತಿಷ್ಠಿತ ರೆಸ್ಟೋರೆಂಟ್ ಒಂದಕ್ಕೆ ಕ್ಲೀನಿಂಗ್ ಕೆಲಸಕ್ಕೆ ಸುತ್ತಮುತ್ತಲಿನ ಜನ ಬೇಕಾಗಿದ್ದಾರೆ. ಉತ್ತಮ ಸಂಬಳ ನೀಡಲಾಗುವುದು. ಸಂಪರ್ಕಿಸಿ:
Mob: 79759 73014

## ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
# 574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

## ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ.
7795560970

## ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

## ವಿವಾಹ ಭಾಗ್ಯ
ಗ್ಲೋಬಲ್ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿಧುರರು
FREE REGISTRATION
79751-42004

## ಬೇಕಾಗಿದ್ದಾರೆ
Ladies PG ಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಕಡ್ಡಾಯವಾಗಿ PG ಯಲ್ಲಿಯೇ ಉಳಿದುಕೊಳ್ಳಬೇಕು. ಊಟ, ವಸತಿ, ಸಂಬಳ ದೊರೆಯುತ್ತದೆ. (ಸಂಬಳ: 8000 ರಿಂದ 8500)
9972567537
9035004605

## SITE FOR SALE
30x45
North West Corner Site Sale, Karle Habitant
(ದಟ್ಟಗಳ್ಳಿ ಪಕ್ಕ ) Call:
9880273834

## St. Paul's English School
Bannimantap
Walk-in interview on 30th September 2022 between 10.30 am to 3 pm.
Required efficient and experienced.
1) Assistant Teacher D.Ed.
2) School Van Driver with heavy licence.
9483477437, 7349732300

## ಬೇಕಾಗಿದ್ದಾರೆ
ಬಲ್ಲಾಳ್ ಸರ್ಕಲ್ ಹತ್ತಿರದ ಪ್ರತಿಷ್ಠಿತ ರೆಸ್ಟೋರೆಂಟ್ ಒಂದಕ್ಕೆ ಆಲ್ ರೌಂಡರ್ ಕೆಲಸಗಾರರು ಬೇಕಾಗಿದ್ದಾರೆ. ಉತ್ತಮ ಸಂಬಳ ನೀಡಲಾಗುವುದು. ಸಂಪರ್ಕಿಸಿ:
Mob: 79759 73014

## HOUSE FOR RENT
2 BHK, G.F., only Vegetarian. Contact:
Mob: 9845966259, 9591170850, 9901841018
Behind Med +, Bogadi Village-570 026

## WANTED
RECOVERY EXECUTIVES
Experienced people at following locations Mysore, Nanjangud, Chamarajanagar, Periyapatna, K.R. Nagar, Mandya, Hassan & Holenarasipura. We offer petrol expense + commission best in the industry. Send your resume at
Email: wmsfinserv@gmail.com
WhatsApp: 9886679107, 7019423223, 6364561519

## ಜಾಗ ಬೇಕಾಗಿದೆ
ಜ್ಯೋತಿವ್ ಇವಿ ಚಾರ್ಜಿಂಗ್ ಸ್ಟೇಷನ್ ಸ್ಥಾಪನೆಗೆ ಅಗತ್ಯವಿರುವ ಭೂಮಿ / ಪ್ಲಾಟ್ / ಕೃಷಿ ಭೂಮಿ / ವಾಣಿಜ್ಯ ಮತ್ತು ವಸತಿ ಆಸ್ತಿ, ಮುಂಗಡ + ಬಾಡಿಗೆ + ಸರ್ಕಾರದ ಸಬ್ಸಿಡಿ ಪ್ರತಿ ಇವಿ ನಿಲ್ದಾಣ ಸ್ಥಾಪನೆಗೆ 5 ರಿಂದ 10 ಲಕ್ಷ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
Mob: 9711355380

## ಬೇಕಾಗಿದ್ದಾರೆ
Full Time / Part Time ಪ್ರಾವಿಷನ್ ಸ್ಟೋರ್‌ನಲ್ಲಿ ಕೆಲಸ ಮಾಡಲು ಮಹಿಳಾ ಕ್ಯಾಷಿಯರ್ ಬೇಕಾಗಿದ್ದಾರೆ. ಹಾಗೂ Helper ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಇಚ್ಛೆ ಉಳ್ಳವರು ಸಂಪರ್ಕಿಸಿ.
ಶ್ರೀ ಗುರು ರಾಘವೇಂದ್ರ ಹೋಂ ನೀಡ್ಸ್, ಶಾರದಾದೇವಿನಗರ.
9972356444

## ಬೇಕಾಗಿದ್ದಾರೆ
ಬ್ರಾಹ್ಮಣ ಮಹಿಳೆ ಅಡುಗೆ ಸಹಾಯಕಿ ಅಥವಾ ಹೆಡ್ ಕುಕ್ ಬೇಕಾಗಿದ್ದಾರೆ.
ಸಂಪರ್ಕಿಸಿ:
9242509325
7026493259

## ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರಚರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

## SITE FOR SALE
Srirampura Ring Road, Mysore.
Mob: 8050345574

## WANTED
Experienced & Passionate HM Teacher's (all subject's) proficient in English, Office Assistant (proficient in computers and accounts) & Drivers for a reputed school near Malavalli. Email resume to smic.af.13@gmail.com
Call: Ashik - 7204765905/ 8197221762

## WANTED
Sales Boys, part time only for a Sports Shop in Mysore.
7760109047, 8105368325

## ಶ್ರೀ ರಾಘವೇಂದ್ರ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಪಂ.ಎಸ್.ಕೆ.ಪ್ರಶಾಂತ್ ಆಚಾರ್ಯ
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ ದಾಂಪತ್ಯ ಸಮಸ್ಯೆ, ನಾಗದೋಷ, ಕುಜ ದೋಷ, ದುಷ್ಟಶಕ್ತಿ, ಪ್ರೇತಬಾಧೆ, ಸಾಲಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ತಿಳಿಸುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ ಕಾಂಪ್ಲೆಕ್ಸ್, ಡಾ|| ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೋಟೆಲ್ ಪಾರ್ಕ್‌ಲೇನ್ ರಸ್ತೆ) ಮೈಸೂರು.
9740947045

## SITE FOR SALE
Site No. 1729, Size 30x40, East Phase Sardhar Vallabai Patel Nagar, Very Close to Ring Road Just 100 mts (Police Employees House Building Society Mysuru) Per Sq. Feet 4500/- Negotiable. Brokers Excuse.
9448342501

## ಹೊಸ ಮನೆ ಮಾರಾಟಕ್ಕಿದೆ
ಡ್ಯೂಪ್ಲೆಕ್ಸ್ ಮನೆ 20x30 ವೆಸ್ಟ್ ಫೇಸ್ ನಾರ್ತ್ ಡೋರ್, ಇಟಾಲಿಯನ್ ಕಿಚನ್ ವಾಡ್ರೋಬ್ ಗ್ರಾನೈಟ್ ಸಿಸಿ ಕ್ಯಾಮೆರಾ ಸೋಲಾರ್ ಚಿಮಿಣಿ, ಹಾಲ್‌ಗೆ ಪಿಓಪಿ ಮತ್ತೆ ರೂಮಿಗೆ ಫ್ಯಾನ್ ಉಯ್ಯಾಲೆ ಹಾಲ್ ಟೀಕುಡ್ ಮರ, ಜಾಗ್ವಾರ್ ಕಮೋಡ್‌ಗಳು, ಬಾತ್ ಟಬ್ ಆರ್ಕಿಟೆಕ್ ಮನೆ ದಟ್ಟಗಳ್ಳಿ ನಿಯರ್ ಶಕ್ತಿ ಗಣಪತಿ ದೇವಸ್ಥಾನ ಪಕ್ಕ ಸಂಪರ್ಕಿಸಿ:
9980325199

## WANTED
Pharmacist (fresher) for Jayadeva Hospital, KRS Road, Kumbarakoppal, Mysore.
Qualification: D.Pharma or B.Pharma. Contact personally with resume:
Mob: +91 63642 16261

## HOUSE FOR LEASE
20x30 house for lease in Vasanthanagar, 308, 4th Main, Behind Vidya Vikas College, Mysore-570 002. Contact:
Mob: 8310427773

## WANTED
1) Security Supervisor - PUC / Degree (Mysore & Chinakurali)
2) Security Guards - SSLC (Mysore). Age between 30 to 45 years. Contact:
9739166772, 9739199355

## FOR SALE
New apartment flat 1200 sq.ft. 2 BHK North face, car parking and lift facility available, near Shanthisagar Complex, Kuvempunagar.
94496-01309

## ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

## ವಧು ವರರ ಮಾಹಿತಿ ಕೇಂದ್ರ
ಒಕ್ಕಲಿಗ / ಲಿಂಗಾಯತ / ಬ್ರಾಹ್ಮಣ ಮತ್ತು ಎಲ್ಲಾ ಜಾತಿಯ BE / B.Tech /MBA / MS / MBBS / MS-MD ಹಾಗೂ ಎಲ್ಲಾ ಡಿಗ್ರಿ / ಮಾಸ್ಟರ್ಸ್ ಡಿಗ್ರಿ ದೇಶಿಯ / ವಿದೇಶಿಯ ವಧು –ವರರ ಮಾಹಿತಿಗಾಗಿ ಸಂಪರ್ಕಿಸಿ: ಅಂಚೆಪೇದೆ ಮ್ಯಾಟ್ರಿಮೋನಿ, ವಿಜಯ ಬ್ಯಾಂಕ್ ಸರ್ಕಲ್, ಕುವೆಂಪುನಗರ, ಮೈಸೂರು.
ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ
7259395800 / 7349224222

## ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
SSLC Pass 45 ವರ್ಷ ಒಳಗೆ ಕಡಕೊಳ, ಸಿಂಧುವಳ್ಳಿ, ಮೈಸೂರು ಬನ್ನೂರು ರಸ್ತೆಯ MNC ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿಗಳು ಬೇಕಾಗಿದ್ದಾರೆ. ಸೇಲ್ಸ್ ಗರ್ಲ್ ಮತ್ತು ಬಾಯ್ಸ್ / ಹೌಸ್ ಕೀಪಿಂಗ್ – ಹುಡುಗ, ಹುಡುಗಿಯರು ಅರಸು ರೋಡ್, ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
9035050656 / 9035050653

## ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ.
ಆಸಕ್ತರು ಸಂಪರ್ಕಿಸಿ:
7676844160
6361056646

## ಆದಿ ಕರ್ನಾಟಕ (SC) ವಿವಾಹ ಮಾಹಿತಿ ಕೇಂದ್ರ
BA, B.Sc, B.Com, MA, M.Com, M.Sc, MBA, MBBS, BE, M.Tech, B.Ed, D.Ed, M.Ed,)
ವಿವಾಹ ನೊಂದಣಿಗೆ ಕರೆ ಮಾಡಿ
(2nd Marriage also)
9164743059

## WANTED IMMEDIATELY
Female Computer Teacher, Qulification :- Diploma in Computer Science / Engineer, Admission open for Fashion Designing
9964487523

## HOUSE FOR SALE
2BHK New Flat, East Facing, 1100 Sqft, 2nd Floor, Fully Furnised, Jayalakshmipuram, VV Mohala, Mysuru - 85 Lakhs
33x40, New 3 BHK Duplex, W/F Site & N/F Door, Vijayanagar 4th Stage, RMP, Mysuru - 1.45 Cr. (Brokers Excuse)
8660105902

## SITE FOR SALE
20x30 & 30x40
Bank Loan upto 80%, Near Gurur Bus Stop, Ramabainagar, Mysore. DTCP approved (Corporation limits) 1.5 kms from J P Nagar Ring Road.
8660105902

## ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಕ್ಯಾಂಟೀನ್ ಅಡುಗೆ ಭಟ್ಟರು ಮತ್ತು ಕೌಂಟರ್ ಕೆಲಸಕ್ಕೆ ಮಹಿಳೆಯರು House Keeping ತಕ್ಷಣ ಬೇಕಾಗಿದ್ದಾರೆ
7829090366
8971662736

## HOUSE FOR SALE
40x26
with 3BHK W/F with all facilities. (Good Location) Vontikoppal (70 Lakhs Negotiable)
9606638899

## WE ARE HIRING FOR IT (MNC)
Pay After Placement
BE / B.Tech, M.Tech (CS/IS/ IT/EC/EEE) BCA, MCA, MSc, BSc, 2018 to 2022 (Pass Out)
Location:- PAN INDIA.
9035836473

## ಬೇಕಾಗಿದ್ದಾರೆ
TATA ACE ಗೆ ಡ್ರೈವರ್‌ಗಳು ಮತ್ತು ಕಛೇರಿಗೆ ಹೆಲ್ಪರ್ಸ್‌ಗಳು ಬೇಕಾಗಿದ್ದಾರೆ. ಉಚಿತ ವಸತಿ ವ್ಯವಸ್ಥೆ ಇರುತ್ತದೆ. ವೇತನ: 12,000/–, ಸಮಯ:– 9.00 am to 6.00 pm
0821-2491755

## ಮ್ಯಾನ್ ಪವರ್ ಏಜೆನ್ಸಿ (ರಿ)
8hr / 24 hr ನಮ್ಮಲ್ಲಿ ವಯಸ್ಸಾದವರನ್ನು ಹಾಗೂ Patient ನೋಡಿಕೊಳ್ಳಲು ಮತ್ತು ಅಡುಗೆ ಮನೆ ಕೆಲಸ ಮಾಡಲು ಮಹಿಳೆಯರು ಸಿಗುತ್ತಾರೆ. ಸಂಪರ್ಕಿಸಿ:
8105149095

## ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

## ತಕ್ಷಣ ಬೇಕಾಗಿದ್ದಾರೆ
ಲಲಿತಾದ್ರಿಪುರ, ಉತ್ತನಹಳ್ಳಿ ಹಾಗೂ ಬಂಡಿಪಾಳ್ಯ ರಿಂಗ್ ರೋಡ್ ಸುತ್ತಮುತ್ತ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC, ಸಂಬಳ: 12,000/- , ವಯೋಮಿತಿ: 50 ವರ್ಷ, ESI ಮತ್ತು PF ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು
9620777819 / 8310520477

## ಸುವರ್ಣಾವಕಾಶ
ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುವ ಯುವಕ / ಯುವತಿಯರಿಗೆ ವಿದ್ಯಾರ್ಥಿಗಳಿಗೆ ಗೃಹಿಣಿಯರಿಗೆ ಮನೆಯಲ್ಲಿಯೇ ಕುಳಿತು ಫಾರಂನಲ್ಲಿ ಅಂಕಿ ತುಂಬುವ ಹಾಗೂ ಬುಕ್ ಬರೆಯುವ ಕೆಲಸ ತಿಂಗಳಿಗೆ 16,000/– ರಿಂದ 18,000/– ಸಂಪಾದಿಸಿ (ಕೋರಿಯರ್ ಸೌಲಭ್ಯವಿದೆ)
8123797899 / 8747978990

## ಇಂದೇ ಸಂಪರ್ಕಿಸಿ
ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಸರಸ್ವತಿಪುರಂ, ನಂಜನಗೂಡು N R Mohalla ಮುಂತಾದ ಏರಿಯಾಗಳಲ್ಲಿನ ಕಂಪನಿಗಳಿಗೆ, ಆಫೀಸ್‌ಗಳಿಗೆ, ಶೋರೂಂಗಳಿಗೆ ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ. Any Qualification (ESI+PF+OT) ಯೊಂದಿಗೆ ಸಂಬಳ 14,000–36,000. ಸಂಪರ್ಕಿಸಿ:
9663704915
7892878915

## ಕೆಲಸಕ್ಕೆ ಬೇಕಾಗಿದ್ದಾರೆ
ವಯಸ್ಸಾದವರು, ರೋಗಿಗಳನ್ನು ನೋಡಿಕೊಳ್ಳಲು ಹೆಂಗಸರು / ಗಂಡಸರು ಮೈಸೂರಿನಲ್ಲಿ ಬೇಕಾಗಿದ್ದಾರೆ. ಸಂಪರ್ಕಿಸಿ:
9880102700

## ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
10/10 :– ಶಿರಡಿ, ಪಂಡರಾಪುರ, ಶನಿಸಿಂಗಾಪುರ, ಎಲ್ಲೋರಾ, ಗೃಷ್ಣೇಶ್ವರ.
3/11:– ಕಾಶಿ, ಗಂಗಾ, ಬುದ್ಧಗಂಗಾ, ಪ್ರಯಾಗ್‌ರಾಜ್, ಅಯೋಧ್ಯ.
14/11:– ಗುಜರಾತ್, ಅಹಮದಬಾದ್, ದ್ವಾರಕಾ, ನಾಗನಾಥ್, ಸೋಮನಾಥ್, ನಿಷ್ಕಲಂಕ್ ಮಹದೇವ, ಸರದಾರ್ ವಲ್ಲಭಾಯಿ ಪಟೇಲ್ ಪ್ರತಿಮೆ ಇತ್ಯಾದಿ.
9591017782
9964527782

## ತಕ್ಷಣ ಬೇಕಾಗಿದ್ದಾರೆ
ಬೆಳವಾಡಿ ಮತ್ತು ಹೂಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು, ಸಂಬಳ: 13,000/- (8hrs) +w/o, ವಯೋಮಿತಿ: 45 ವರ್ಷದ ಒಳಗೆ, ESI ಮತ್ತು PF ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು
9620667819 / 9880727819

## ಶ್ರೀ ನಿಧಿ ಹಾಲಿಡೇಸ್ SINCE (2005)
25–11–2022 ರಂದು 14 ದಿನಗಳ ರೈಲು ಮತ್ತು ವಿಮಾನದಲ್ಲಿ ವೈಷ್ಣೋದೇವಿ, ಕಾಶ್ಮೀರ, ಅಮೃತ್‌ಸರ್, ವಾಘಬಾರ್ಡರ್, ಡೆಲ್ಲಿ, ಕಾಶಿ, ಆಗ್ರ, ಮಥುರ ಮುಂತಾದವು ಈ ಪ್ರವಾಸದಲ್ಲಿ ಇಬ್ಬರಿಗೆ ಒಂದು ರೂಂ, ಕಾಫಿ, ತಿಂಡಿ, ಊಟ, 2+2 A/C ಬಸ್ ಸೇರಿರುತ್ತದೆ.
9740776666
7557553777

## ಶಾದಿಗುರೂಜಿ.ಕಾಂ
ಕರ್ನಾಟಕದ ಎಲ್ಲಾ ಜಾತಿಯ ವಧು ವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ: ಡಾ.ಗುರೂಜಿ
ಮೈಸೂರು / ಬೆಂಗಳೂರು
6361740552
www.shaadiguruji.com
Lady Receptionist ಮತ್ತು Telecaller ಬೇಕಾಗಿದ್ದಾರೆ

## ಕಾರ್ನರ್ ಸೈಟು ಮಾರಾಟಕ್ಕಿದೆ
40x60 ಈಸ್ಟ್ ಫೇಸ್, ರಾಜರಾಜೇಶ್ವರಿನಗರ ಹತ್ತಿರ, ಕ್ರೈಸ್ತ ಪಬ್ಲಿಕ್ ಸ್ಕೂಲ್ ಮುಡಾ ಅಪ್ರೂವಲ್ ಮಧ್ಯವರ್ತಿ ಕ್ಷಮಿಸಿ.
9880791390
9916736102

## WE ARE HIRING URGENTLY
(Vacancy Available) Any Qualification, Age Limit 18 to 45, Languages:- Tamil, Telugu, Hindi, Kannada (Any Two Languages Needed) for Further Details Contact:
8217531829 / 9901269622
Even Pick and Drop Facility available

## ಬೇಕಾಗಿದ್ದಾರೆ
ಶ್ರೀ ಸಿದ್ಧಾರ್ಥ ಹುಣಸೂರು ಅರ್ಬನ್ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಲಿ., SSLC / PUC any Degree Only ಮಹಿಳೆ / ಪುರುಷರು, ಅನುಭವವುಳ್ಳ ಪಿಗ್ಮಿ ಏಜೆಂಟ್ / ಎಕ್ಸಿಕ್ಯೂಟಿವ್ ಆಫೀಸರ್‌ಗಳು ದ್ವಿಚಕ್ರ ವಾಹನ ಹೊಂದಿರಬೇಕು. ಪೆಟ್ರೋಲ್ ಭತ್ಯ ಮತ್ತು ಪ್ರತಿ ಮಾಹೆ ವೇತನ : 9000 ರಿಂದ 15000 ವರೆಗೆ. ಹುಣಸೂರು ತಾ. ನಗರದ ಆಕಾಂಕ್ಷಿಗಳಿಗೆ ಮಾತ್ರ ಅವಕಾಶ. ಸಂಪರ್ಕಿಸಿ: ಹಳೆ ಕಾವೇರಿ ಗ್ರಾಮೀಣ ಬ್ಯಾಂಕ್ ಹತ್ತಿರ ಚಂದ್ರ ಕಾಂಪ್ಲೆಕ್ಸ್ ಮೈಸೂರು ರೋಡ್ ಹುಣಸೂರು. ಕಛೇರಿ ಸಮಯ: 9.30 ರಿಂದ 5.00 ರವರೆಗೆ
8296281922

## ಮಾರಾಟಕ್ಕಿದೆ
20x30 ಡ್ಯೂಪ್ಲೆಕ್ಸ್ ಹೊಸ ಮನೆ ದಟ್ಟಗಳ್ಳಿ ಆಂದೋಲನ ಸರ್ಕಲ್ ಹತ್ತಿರ, ಶಾರದದೇವಿನಗರ, ಆಲ್ ಟೀಕ್ ಇಟಾಲಿಯನ್ ಕಿಚನ್, 3 ಬೆಡ್ ರೂಂ.
9945042875

## 30x40 ಸೈಟು ಮಾರಾಟಕ್ಕಿದೆ
ವಿಜಯನಗರ 4ನೇ ಹಂತ ಹತ್ತಿರ, ಪ್ರೀತಿ ಬಡಾವಣೆ ಪಕ್ಕ, ಬೋಗಾದಿ ಪಟ್ಟಣ ಪಂಚಾಯಿತಿ ನಮೂನೆ – 3
9620563026

## ಮೈಸೂರು ಮಿತ್ರ 43
### ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಮೈಸೂರು ಮಿತ್ರ



# ಭವ್ಯ ಮೆರವಣಿಗೆಯೊಂದಿಗೆ ವಿಜೃಂಭಣೆಯ ಗ್ರಾಮೀಣ ದಸರಾ



ಸರಗೂರು, ಸೆ.28– ವಿವಿಧ ಕಲಾತಂಡಗಳ ವೈಭವದ ಮೆರವಣಿಗೆಯೊಂದಿಗೆ ಪಟ್ಟಣದಲ್ಲಿ ಗ್ರಾಮೀಣ ದಸರಾ ವಿಜೃಂಭಣೆಯಿಂದ ಆಚರಿಸಲಾಯಿತು.

ಪಟ್ಟಣದ ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರು ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ನಂದಿಧ್ವಜಕ್ಕೆ ಪೂಜೆ ಮಾಡುವ ಮೂಲಕ ಗ್ರಾಮೀಣ ದಸರಾಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಚಾಮುಂಡೇಶ್ವರಿ ಅಮ್ಮನವರ ಬೆಟ್ಟದಂತೆ ನಮ್ಮಲ್ಲಿರುವ ಶ್ರೀ ಚಿಕ್ಕ ದೇವಮ್ಮನವರು ಈ ಭಾಗದ ಜನತೆಯನ್ನು ಕಾಪಾಡುತ್ತಿದ್ದು, ಈ ತಾಯಿಗಳ ಆಶೀರ್ವಾದ ಸದಾ ಜನತೆ ಮೇಲಿರಲಿ ಎಂದು ಶುಭ ಹಾರೈಸಿದರು.

ನಂತರ ಬೆಳ್ಳಿ ರಥದ ಪಲ್ಲಕ್ಕಿಯಲ್ಲಿ ಕೂರಿಸಲಾಗಿದ್ದ ಚಾಮುಂಡೇಶ್ವರಿ ಅಮ್ಮನವರ ಭಾವಚಿತ್ರಕ್ಕೆ ಬಿಡಗಲು ಪಡುವಲು ವಿರಕ್ತಮಠದ ಮಹಾದೇವಸ್ವಾಮೀಜಿ ಅವರು ಪುಷ್ಪಾರ್ಚನೆ ಸಲ್ಲಿಸಿ, ಮೆರವಣಿಗೆಗೆ ಚಾಲನೆ ನೀಡಿದರು. ಶಾಲಾ ಮಕ್ಕಳಿಂದ ಪಥಸಂಚಲನ, ವೀರಗಾಸೆ ಕುಣಿತ, ಮಂಗಳವಾದ್ಯ, ಚಂಡೆ, ನಂದಿಧ್ವಜ, ಬುಡಕಟ್ಟು ಸಮುದಾಯದವರ ನೃತ್ಯ, ವಿವಿಧ ಕಲಾತಂಡಗಳ ಮೆರವಣಿಗೆ, ಮಕ್ಕಳ ಛದ್ಮವೇಷಧಾರಿಗಳ ಪ್ರದರ್ಶನ, ಅಖಿಲ ಕರ್ನಾಟಕ ಮಹಾಸಭಾ ಸರಗೂರು ತಾಲೂಕು ಘಟಕದಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿ ಮೆರವಣಿಗೆ, ಪಟ್ಟಣ ಪಂಚಾಯಿತಿಯಿಂದ ಸ್ವಚ್ಛತೆಗೆ ಹೆಚ್ಚು ಒತ್ತು ನೀಡುವ ಸ್ತಬ್ಧ ಚಿತ್ರಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು.

ಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನದಿಂದ ಆರಂಭವಾದ ಮೆರವಣಿಗೆ ಪಟ್ಟಣದ ಮೊದಲನೇ ಮುಖ್ಯ ರಸ್ತೆಯಿಂದ ಹಾದು ಎರಡನೇ ಮುಖ್ಯ ರಸ್ತೆಯ ಮೂಲಕ ಜಯ ಚಾಮರಾಜೇಂದ್ರ ಕ್ರೀಡಾಂಗಣದಲ್ಲಿ ಕೊನೆಗೊಂಡಿತು.

ಈ ವೇಳೆ ಮಹಾದೇವ ಸ್ವಾಮೀಜಿ ಅವರು ಮಾತನಾಡಿ, ನೂತನ ತಾಲೂಕು ಸರಗೂರಿನಲ್ಲಿ ಇದೇ ಮೊದಲು ಗ್ರಾಮೀಣ ದಸರಾ ಆಚರಣೆ ಮಾಡುತ್ತಿರುವುದು ಸಂತಸ ತಂದಿದೆ. ತಾಯಿ ಚಾಮುಂಡೇಶ್ವರಿ ಜನತೆಗೆ ಒಳ್ಳೆಯದನ್ನು ಮಾಡಲಿ. ಗ್ರಾಮೀಣ ಭಾಗವು ಅಭಿವೃದ್ಧಿ ಹೊಂದಲಿ ಎಂದರು.

ಪಟ್ಟಣ ಪಂಚಾಯಿತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್ ಮಾತನಾಡಿದರು. ಉಪಾಧ್ಯಕ್ಷ ವಿನಾಯಕ ಪ್ರಸನ್ನ, ಸದಸ್ಯರಾದ ಸಣ್ಣತಾಯಮ್ಮ, ಹೇಮಾವತಿ, ದಿವ್ಯ, ಚೈತ್ರ ಉಮಾ, ವೀರೇಶ್, ನೂರಾಆರಿಫ್, ಎಸ್.ಎಲ್. ರಾಜಣ್ಣ ಚಲುವಕೃಷ್ಣ ಎಸ್.ನಾರಾಯಣ್, ಎನ್.ಎಸ್. ಪ್ರಭಾಕ್, ಗೋಪು ರಂಗಸ್ವಾಮಿ, ತಾಲೂಕು ಪಂಚಾಯಿತಿ ಇಒ ಮಹದೇವಸ್ವಾಮಿ, ಸಿಡಿಪಿಒ ಎನ್. ಆನಂದ್, ಪಿಎಸ್‌ಐ ಶ್ರವಣದಾಸರೆಡ್ಡಿ, ತಾಲೂಕು ಆರೋಗ್ಯಾಧಿಕಾರಿ ಡಾ.ಟಿ. ರವಿಕುಮಾರ್, ಡಾ.ಸೋಮಣ್ಣ, ಸಾಹಿತಿ ವೈ.ಡಿ.ರಾಜಣ್ಣ, ಬಿಇಒ ಉದಯ ಕುಮಾರ್, ಜಿಪಂ ಮಾಜಿ ಸದಸ್ಯ ಚಿಕ್ಕವೀರನಾಯಕ, ಪಿ.ರವಿ, ದೈಹಿಕ ಶಿಕ್ಷಣ ಪರಿವೀಕ್ಷಕ ರಾಮ್ ಪ್ರಸಾದ್, ಮುಖಂಡರಾದ ನವೀನ್, ಸ್ವಾಮಿ, ರಾಮು, ಸುಬಾನ್, ದೇವಲಾಪುರ ಸಿದ್ದರಾಜು, ವಿಷ್ಣು ಸೇನಾ ಸಮಿತಿ ಅಧ್ಯಕ್ಷ ಶಂಭು, ಅಂಗನವಾಡಿ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

## ಸೂಕ್ಷ್ಮಾತಿಸೂಕ್ಷ್ಮ ಸಮಾಜದ ಜೊತೆ ನಾನಿರುವೆ

ಕೆ.ಆರ್.ನಗರ, ಸೆ.28– ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ ಸೂಕ್ಷ್ಮಾತಿಸೂಕ್ಷ್ಮ ಸಮಾಜದ ಬೆನ್ನಿಗೆ ನಾನು ಸದಾ ನಿಲ್ಲಲಿದ್ದು ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು



ಒದಗಿಸುವುದರ ಜತೆಗೆ ವೈಯಕ್ತಿಕವಾಗಿಯೂ ನಿರಂತರವಾಗಿ ಸಹಾಯ ಮಾಡುತ್ತೇನೆ ಎಂದು ಶಾಸಕ ಸಾ.ರಾ. ಮಹೇಶ್ ಭರವಸೆ ನೀಡಿದರು.

ತಾಲೂಕು (ಬಲಿಜ) ಬಣಜಿಗ ಸಂಘದ ಅಧ್ಯಕ್ಷ ಟಿ. ಎನ್. ದಯಾನಂದ ಅವರ ನೇತೃತ್ವದಲ್ಲಿ ಸಮಾಜದ ಮುಖಂಡರು ಶಾಸಕರನ್ನು ಭೇಟಿ ಮಾಡಿ ಕೆ.ಆರ್.ನಗರ ಪಟ್ಟಣದಲ್ಲಿ ಸಮಾಜದ ವತಿಯಿಂದ ನಿರ್ಮಾಣ ಮಾಡಲು ಉದ್ದೇಶಿಸಿರುವ ಬಲಿಜ ಸಮುದಾಯ ಭವನಕ್ಕೆ ನಿವೇಶನ ಕೊಡಿಸ ಬೇಕೆಂದು ಕೋರಿ ನೀಡಿದ ಮನವಿ ಪತ್ರ ಸ್ವೀಕರಿಸಿ, ಅವರು ತಿಳಿಸಿದರು.

ಸಮಾರಂಭದಲ್ಲಿ ಕೆ. ಆರ್. ನಗರ ಮತ್ತು ಸಾಲಿಗ್ರಾಮ ಎರಡು ತಾಲೂಕಿನ ಹಲವಾರು ಗ್ರಾಮಗಳಲ್ಲಿ ಇರುವ ಬಲಿಜ ಸಮಾಜದವರು ಬಲವರ್ಧನೆಗೆ ಶೀಘ್ರದಲ್ಲಿಯೇ ಸಭೆ ನಡೆಸಿ ಎಲ್ಲರೊಡನೆ ಮಾತನಾಡಿ, ಸಮುದಾಯ ಭವನಕ್ಕೆ ನಿವೇಶನ ಕೊಡಿಸುವುದರ ಜೊತೆಗೆ ಸರ್ಕಾರದಿಂದ ದೊರೆಯುವ ಇತರ ಎಲ್ಲಾ ಸವಲತ್ತು ಕೊಡಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ತಿಳಿಸಿದರು. ಸರ್ಕಾರ ಈಗಾಗಲೇ ಆದೇಶ ಹೊರಡಿಸಿ ಶ್ರೀಕೃಷ್ಣದೇವರಾಯ ಮತ್ತು ಕೈವಾರ ತಾತಯ್ಯನವರ ಜಯಂತಿ ಮಾಡಲು ಸೂಚಿಸಿದ್ದು ನಾನು ಈ ಎರಡೂ ಕಾರ್ಯಕ್ರಮಗಳನ್ನು ವೈಯಕ್ತಿಕ ವೆಚ್ಚದಲ್ಲಿ ಮಾಡಿಕೊಡುತ್ತೇನೆಂದು ಸಮಾಜದ ಮುಖಂಡರಿಗೆ ಅವರು ಹೇಳಿದರು.

ಬಲಿಜ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಪಟ್ಟಣದಲ್ಲಿ ನಿವೇಶನ ಕೊಡಿಸಿ ಕೊಡುವುದರ ಜತೆಗೆ ಗ್ರಾಮಾಂತರ ಪ್ರದೇಶಗಳಲ್ಲೂ ಅಗತ್ಯವಿದ್ದಲ್ಲಿ ನಿವೇಶನ ಕೊಡಿಸಿ ಇದರ ಜತೆಗೆ ಜನಾಂಗಕ್ಕೆ ಮೀಸಲಾತಿಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಲು ಸದನದಲ್ಲಿ ಹೋರಾಟ ಮಾಡುತ್ತೇನೆಂದು ಮುಖಂಡರಿಗೆ ಮಾಹಿತಿ ನೀಡಿದರು. ಸಮಾಜದ ಮುಖಂಡರಾದ ಛೇರ್ಯ ಮಹೇಶ್, ಚಂದಗಾಲು ಮಂಜುನಾಥ್ ರಘುನಾಥ್, ಕರ್ಪೂರವಳ್ಳಿ ಮಂಜುನಾಥ್, ರಾಘುಮಳಲಿ ಮತ್ತಿತರರು ಇದ್ದರು.

## ಗ್ರಾಮೀಣ ದಸರಾ ಆಹ್ವಾನ ಪತ್ರಿಕೆಯಲ್ಲಿ ಉಸ್ತುವಾರಿ ಸಚಿವರ ಹೆಸರೇ ನಾಪತ್ತೆ

### ತಹಸೀಲ್ದಾರನ್ನು ತರಾಟೆಗೆ ತೆಗೆದುಕೊಂಡ ಬಿಜೆಪಿ ಕಾರ್ಯಕರ್ತರು

ತಿ.ನರಸೀಪುರ.ಸೆ.28– ಗ್ರಾಮೀಣ ದಸರಾ ಆಹ್ವಾನ ಪತ್ರಿಕೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರ ಹೆಸರನ್ನು ಕೈಬಿಡಲಾಗಿದೆ ಎಂದು ಆರೋಪಿಸಿ ತಹಶೀಲ್ದಾರ್ ಸಿ.ಜಿ. ಗೀತಾ ಅವರನ್ನು ಬಿಜೆಪಿ ಕಾರ್ಯಕರ್ತರು ತರಾಟೆಗೆ ತೆಗೆದುಕೊಂಡ ಘಟನೆ ನಡೆಯಿತು.



ಗ್ರಾಮೀಣ ದಸರಾ ಆಚರಣೆ ಹಿನ್ನೆಲೆಯಲ್ಲಿ ಪಟ್ಟಣದ ಶ್ರೀ ಗುಂಜಾ ನರಸಿಂಹ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ವಿದ್ಯಾರ್ಥಿಗಳ ಪ್ರಭಾತ್ ಪೇರಿ, ಸ್ತಬ್ದ ಚಿತ್ರಗಳ ಮೆರವಣಿಗೆ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡುವ ಕಾರ್ಯಕ್ರಮಕ್ಕೆ ಸಿದ್ಧತೆ ನಡೆದಿತ್ತು.

ಕಾರ್ಯಕ್ರಮಕ್ಕೆ ಚಾಲನೆ ನೀಡಲು ವಿವಿಧ ಇಲಾಖಾ ಅಧಿಕಾರಿಗಳೊಂದಿಗೆ ತಡವಾಗಿ ಆಗಮಿಸಿದ ತಹಶೀಲ್ದಾರ್ ಸಿ.ಜೆ.ಗೀತಾ ಅವರನ್ನು ಸುತ್ತುವರೆದ ಪುರಸಭಾ ಸದಸ್ಯರಾದ ಎಸ್.ಕೆ.ಕಿರಣ್, ಎನ್.ಲೋಕೇಶ್, ಅಕ್ಕಿನಂಜುಂಡಸ್ವಾಮಿ ಹಾಗೂ ಕ್ಷೇತ್ರ ಬಿಜೆಪಿ ಮಾಜಿ ಅಧ್ಯಕ್ಷ ಹಿರಿಯೂರು ಪರಶಿವಮೂರ್ತಿ, ಆಹ್ವಾನ ಪತ್ರಿಕೆಯಲ್ಲಿ ಉಸ್ತುವಾರಿ ಸಚಿವರ ಹೆಸರನ್ನು ಕೈಬಿಟ್ಟಿದ್ದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿ ಅವರನ್ನು ತರಾಟೆಗೆ ಒಳಪಡಿಸಿದರು.

ಗ್ರಾಮೀಣ ದಸರಾ ಆಚರಣೆ ಮಾಡಲು ಉಸ್ತುವಾರಿ ಸಚಿವರ ಶ್ರಮ ಸಾಕಷ್ಟಿದೆ. ಇಂದು ಇದು ಕಾರ್ಯರೂಪಕ್ಕೆ ಬಂದಿದೆ ಎಂದರೆ ಅದಕ್ಕೆ ಸಚಿವರೇ ಕಾರಣ .ಆದರೆ ನೀವು ಅವರ ಹೆಸರನ್ನು ಆಹ್ವಾನ ಪತ್ರಿಕೆಯಿಂದ ಕೈಬಿಟ್ಟು ಅವಮಾನ ಮಾಡಲೊರಟಿದ್ದೀರಿ ಎಂದು ಕಿಡಿಕಾರಿದರು.

ಬಿಜೆಪಿ ಕಾರ್ಯಕರ್ತರ ತರಾಟೆಯಿಂದ ವಿಚಲಿತರಾದ ತಹಶೀಲ್ದಾರ್ ಈ ಬಗ್ಗೆ ನನಗೇನು ಗೊತ್ತಿಲ್ಲ. ಆಹ್ವಾನ ಪತ್ರಿಕೆ ಸಿದ್ಧಪಡಿಸುವಲ್ಲಿ ವ್ಯತ್ಯಾಸವಾಗಿದೆ. ಉದ್ದೇಶಪೂರ್ವಕವಾಗಿ ಮಾಡಿದ ಕೆಲಸ ಇದಲ್ಲ ಎನ್ನುತ್ತಿದ್ದಂತೆ ಮತ್ತಷ್ಟು ಕೆರಳಿದ ಮುಖಂಡರು, ಉದ್ದೇಶಪೂರ್ವಕವಾಗಿಯೇ ನಮ್ಮ ನಾಯಕರ ಹೆಸರನ್ನು ಕೈ ಬಿಡಲಾಗಿದೆ. ಇದಕ್ಕೆ ಕಾರಣರಾದವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ತಹಶೀಲ್ದಾರ್ ಸಿ.ಜೆ.ಗೀತಾ ಈ ಸಂಬಂಧ ಶಿರಸ್ತೇದಾರ್‌ರೊಂದಿಗೆ ಮಾತನಾಡಿ, ಆಗಿರುವ ಪ್ರಮಾದಕ್ಕೆ ಕಾರಣ ಕೇಳಿದರಾದರೂ ಸಮರ್ಪಕವಾಗಿ ಉತ್ತರ ಬಾರದ ಹಿನ್ನೆಲೆಯಲ್ಲಿ ಸಚಿವರ ಹೆಸರು ಬಿಟ್ಟು ತಪ್ಪೆಸಗಿರುವ ಶಿರಸ್ತೇದಾರ್‌ರಿಗೆ ನೋಟೀಸ್ ನೀಡುತ್ತೇನೆ ಎಂದು ಮುಖಂಡರ ಮನವೊಲಿಕೆಗೆ ಮುಂದಾದರು.

ಕೊನೆಗೆ ಸಚಿವರ ಹೆಸರು ಬಿಟ್ಟು ಪ್ರಮಾದ ಎಸಗಿದ ಶಿರಸ್ತೇದಾರರಿಗೆ ನೋಟೀಸ್ ನೀಡದಿದ್ದಲ್ಲಿ ತಾಲೂಕು ಕಚೇರಿ ಮುಂದೆ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದ ನಂತರ ಗ್ರಾಮೀಣ ದಸರಾ ಕಾರ್ಯಕ್ರಮಕ್ಕೆ ಚಾಲನೆ ನೀಡಲು ಅನುವು ಮಾಡಿಕೊಟ್ಟರು.

## ಹೃದಯವಂತರನ್ನು ಸೃಷ್ಟಿಸಲು ಕಾವ್ಯ ಬೇಕು: ಡಾ. ಜಯಪ್ಪ ಹೊನ್ನಾಳಿ

### ಹೆಚ್.ಡಿ.ಕೋಟೆಯಲ್ಲಿ ಗ್ರಾಮೀಣ ದಸರಾ ಕವಿಗೋಷ್ಠಿ ಉದ್ಘಾಟನೆ




ಹೆಚ್.ಡಿ.ಕೋಟೆ, ಸೆ.28– ಜಾತ್ಯತೀತ, ಧರ್ಮಾತೀತನಾಗಿ ಯೋಚಿಸದವರು ಉತ್ತಮ ಕವಿಯಾಗಲಾರರು ಎಂದು ಸಾಹಿತಿ ಡಾ. ಜಯಪ್ಪ ಹೊನ್ನಾಳಿ ತಿಳಿಸಿದ್ದಾರೆ.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ನಡೆದ ಗ್ರಾಮೀಣ ದಸರಾ ಕವಿಗೋಷ್ಠಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಹೃದಯವಂತ ವ್ಯಕ್ತಿಗಳನ್ನು ಸೃಷ್ಟಿ ಮಾಡಲಿಕ್ಕೆ ಕಾವ್ಯ ಬೇಕು, ಕಾವ್ಯಕ್ಕೆ ಅಂತಹ ಶಕ್ತಿ ಇದೆ ಎಂದು ಕಾವ್ಯ ರಚಿಸುವಾಗ ಭಾಷೆಯನ್ನು ಹಿತ, ಮಿತ, ಮೃದುವಾಗಿ ಬಳಸಿದಾಗ ಉತ್ತಮ ಕಾವ್ಯ ರಚಿಸಬಹುದು. ಪ್ರಸ್ತುತ ದಿನದಲ್ಲಿ ನಾವೆಲ್ಲ ಒಂದು, ವಿಶ್ವದಲ್ಲಿರುವವರೆಲ್ಲ ಬಂಧು ಎಂದು ಭಾವಿಸಿದಾಗ ಯಾವುದೇ ಆತಂಕ, ತಲ್ಲಣ, ಬೇಗುದಿ ಇಲ್ಲದೆ ನೆಮ್ಮದಿಯಿಂದ ನಿದ್ರೆ ಮಾಡಬಹುದು. ಪ್ರತಿಯೊಂದು ದೇಶವು ಇಡೀ ಜಗತ್ತನ್ನೇ ನಾಶ ಮಾಡುವ ಶಕ್ತಿಯನ್ನು ಹೊಂದಿದ್ದು, ತಮ್ಮ ಆದಾಯದ ಶೇ. 50ರಷ್ಟು ಹಣವನ್ನು ಯುದ್ಧಕ್ಕೆ ವ್ಯಯ ಮಾಡುತ್ತಿರುವುದು ವಿಪರ್ಯಾಸವಾಗಿದೆ ಎಂದು ಅವರು ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಕವಿಗಳು ಇಂದಿನ ವ್ಯವಸ್ಥೆ ಮತ್ತು ಆಗು–ಹೋಗುಗಳ ಬಗ್ಗೆ ಕವಿತೆಗಳಲ್ಲಿ ಬೆಳಕು ಚೆಲ್ಲಬೇಕು. ಈ ಹಿಂದೆ ಕವಿತೆಗಳು ಪ್ರೇಮ ಮತ್ತು ಪ್ರಣಯ ಗೀತೆಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡುತ್ತಿದ್ದರು. ಈಗಿನ ಕವಿಗಳು ಸಮಾಜದ ವ್ಯವಸ್ಥೆಯನ್ನು ಸರಿಪಡಿಸುವ ದಿಕ್ಕಿನಲ್ಲಿ ಕವಿತೆಗಳನ್ನು ರಚಿಸುತ್ತಿರುವುದನ್ನು ಕಾಣಬಹುದು. ಹೆಚ್.ಡಿ. ಕೋಟೆ ತಾಲೂಕು ಪುಣ್ಯ ಭೂಮಿಯಾಗಿದ್ದು, ಇಲ್ಲಿ ನಾಲ್ಕು ಜಲಾಶಯಗಳನ್ನು ನಿರ್ಮಿಸಿ ನಾಡಿಗೆ ಮತ್ತು ಪಕ್ಕದ ರಾಜ್ಯಗಳಿಗೆ ನೀರನ್ನು ನೀಡುತ್ತಿರುವುದು ಹೆಮ್ಮೆಯ ವಿಚಾರ. ಹಾಗೆಯೇ ಆರ್ಥಿಕವಾಗಿ ತಾಲೂಕು ಹಿಂದುಳಿದಿದ್ದು, ಕೈಗಾರಿಕೆಗಳು ಸ್ಥಾಪನೆಯಾಗಬೇಕು ಎಂದರು.

ಪ್ರಾಂಶುಪಾಲರಾದ ಡಾ. ಕೆ.ಪಿ. ಪ್ರಸನ್ನ ಮಾತನಾಡಿ, ಕವಿ ಬಡವನಾಗಿದ್ದಾಗ ಕಾವ್ಯ ಶ್ರೀಮಂತಿಕೆಯಿಂದ ಕೂಡಿತ್ತು ಕವಿ ಶ್ರೀಮಂತನಾದಾಗ ಕಾವ್ಯ ಬಡವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ದೇಶದಲ್ಲಿ ಭರತನಿಂದ ಕಾವ್ಯ ಮೀಮಾಂಸೆ ಆರಂಭವಾಗಿ ನಂತರ ಹಳಗನ್ನಡ, ನಡುಗನ್ನಡ, ಹೊಸಗನ್ನಡ, ದಲಿತ ಸಾಹಿತ್ಯ ಮತ್ತು ಬಂಡಾಯ ಸಾಹಿತ್ಯ, ಮಹಿಳಾ ಸಾಹಿತ್ಯ ರಚನೆಯಾಯಿತು. ರನ್ನ, ಜನ್ನ, ಪಂಪ, ಕುಮಾರವ್ಯಾಸ, ಕನಕದಾಸ, ಪುರಂದರದಾಸರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕನ್ನಡ ಪ್ರಮೋದ, ಪುರಸಭೆ ಸದಸ್ಯ ರಾಜು ವಿಶ್ವಕರ್ಮ, ತಾಲೂಕು ಪತ್ರಕರ್ತರ ಸಂಘದ ಉಪಾಧ್ಯಕ್ಷ ಮಂಜು ಕೋಟೆ, ಕಸಾಪ ಗೌರವ ಕಾರ್ಯದರ್ಶಿ ಗಿರೀಶ್‌ಮೂರ್ತಿ, ಪ್ರಾಧ್ಯಾಪಕ ಡಿ. ಕಾಳೇಗೌಡ, ಸೋಮಪ್ಪ, ದಮ್ಮೂರಪ್ಪ, ಪುಟ್ಟರಾಜು, ಜೀವಿಕ ಬಸವರಾಜು, ರವಿ ಆರಾಧ್ಯ ಭಾಗವಹಿಸಿದ್ದರು.

### ಬ್ರಹ್ಮನು ಬೆದರಿದ, ಇಂದ್ರನು ನಾಚಿದ....

ಕವಿಗೋಷ್ಠಿಯಲ್ಲಿ ಡಾ. ಕಿರಣ್‌ಸಿಡ್ಲೇಹಳ್ಳಿ ತಮ್ಮ ಕವನದಲ್ಲಿ ಪಕ್ಕದ ಮನೆಯ ದೀಪಗಳ ಸಾಲುಗಳಲ್ಲಿ ದೀಪಾವಳಿ ಕಂಡವರು ನಾವು ಎಂದು ಬದುಕಿನ ಚಿತ್ರಣವನ್ನು ಹೇಳಿದರೆ, ರಮೇಶ್ ಕೆ. ರವರು ಬ್ರಹ್ಮನು ಬೆದರಿದ, ಇಂದ್ರನು ನಾಚಿದ ಎಂದು ವಿಜಯ ದಶಮಿಯ ಹಬ್ಬವನ್ನು ಬಣ್ಣಿಸಿದರು. ಭಾಸ್ಕರ್ ಕಿತ್ತೂರು ಅವರ ಹುಲಿ ಬಂತು ಹುಲಿ ನಾಡಿಗೆ ಬಂದ ಹುಲಿಯ ಕುರಿತು ಕವನ ವಾಚಿಸಿದರು. ಶ್ರೀಮತಿ ಎಂ. ಕುಮಾರಿ ನಮ್ಮ ಹೆಮ್ಮೆಯ ದಸರಾ ವೈಭವವನ್ನು ಅಭಿಮಾನಪೂರ್ವಕವಾಗಿ ವರ್ಣಿಸಿದರು. ಎಸ್.ಎಸ್. ಮಹದೇವಯ್ಯ ಮರೆಯದ ಮಾಣಿಕ್ಯ ಅಪ್ಪು ಪುನೀತ್‌ರನ್ನು ಸ್ಮರಿಸಿದರು. ಕುಮಾರ್ ಅತ್ತುಬಿಡು ಇಲ್ಲವೇ ನಕ್ಕು ಬಿಡು ಎಂದು ಕವನ ವಾಚನ ಮಾಡಿದರು. ಬಾಲಸುಬ್ರಹ್ಮಣ್ಯಂ ಚಿಂತೆ, ಚಿಂತನ ಮಂಥನಗಳ ಕವಿತೆಗಳನ್ನು ವಾಚಿಸಿದರು. ಬಾಲಕವಿ ಸುಪ್ರಿತ್, ಇರುವೆ ಕುರಿತು ಎಲ್ಲಿರುವೆ ಸಕ್ಕರೆ ತಂದಿರುವೆ ಬಾ ಇರುವೆ ಎಂಬ ಕವನವನ್ನು ವಾಚಿಸಿದರು.



ನಂಜನಗೂಡು ತಾಲೂಕಿನ ಹೆಡತಲೆ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ರಾಜ್ಯ ರೈತ ಮತ್ತು ಹಸಿರು ಸೇನೆ ಗ್ರಾಮ ಘಟಕದಿಂದ ನೋಟ್‌ಬುಕ್ ಮತ್ತು ಪೆನ್ನುಗಳನ್ನು ವಿತರಿಸಲಾಯಿತು. ಈ ವೇಳೆ ತಾಲೂಕು ಘಟಕದ ಅಧ್ಯಕ್ಷ ಸತೀಶ್ ರಾವ್, ಗ್ರಾಪಂ ಅಧ್ಯಕ್ಷೆ ಗೀತಾ, ಉಪಾಧ್ಯಕ್ಷ ಮಣಿಕಂಠ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಘು, ಹೋಬಳಿ ಅಧ್ಯಕ್ಷ ಶಂಕರ್ ನಾಯಕ್, ಗ್ರಾಮ ಘಟಕದ ಅಧ್ಯಕ್ಷ ಮಹದೇವನಾಯಕ, ಎಸ್‌ಡಿಎಂಸಿ ಅಧ್ಯಕ್ಷ ಸಿ.ಮಾದೇಶ, ಮುಖ್ಯಶಿಕ್ಷಕ ಬೆಳ್ಳೀಗೌಡ, ರಂಗಸ್ವಾಮಿನಾಯಕ, ಬಸವಣ್ಣ, ಗೋವಿಂದನಾಯಕ ಮತ್ತು ಗ್ರಾಮದ ರೈತ ಮುಖಂಡರು ಹಾಜರಿದ್ದರು.

## ಅಭಿವೃದ್ಧಿ ಕಾರ್ಯಗಳಿಗೆ ನನ್ನೊಂದಿಗೆ ಕೈಜೋಡಿಸಿ: ಅಶ್ವಿನ್

### 1.74 ಕೋಟಿ ರೂ.ಗಳ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ತಿ.ನರಸೀಪುರ, ಸೆ.28– ಶಾಸಕನಾಗಿರುವ ಅವಧಿಯಲ್ಲಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶಕ್ತಿ ಮೀರಿ ಪ್ರಯತ್ನಪಡುತ್ತೇನೆ. ಗ್ರಾಮಸ್ಥರು ಅಭಿವೃದ್ಧಿ ಕಾರ್ಯಗಳಿಗೆ ನನ್ನೊಂದಿಗೆ ಸಹಕರಿಸಿ ಉತ್ತಮ ಗುಣಮಟ್ಟದ ರಸ್ತೆ ನಿರ್ಮಿಸಲು ಕಾರಣೀಭೂತರಾಗುವಂತೆ ಶಾಸಕ ಎಂ. ಅಶ್ವಿನ್ ಕುಮಾರ್ ಮನವಿ ಮಾಡಿದರು.

ತಿ.ನರಸೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೊಳಪಡುವ ವಿವಿಧ ಗ್ರಾಮಗಳಲ್ಲಿ ಶಾಸಕರ ವಿಶೇಷ ಅನುದಾನದಡಿ 1.74 ಕೋಟಿ ರೂ.ಗಳ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಶಾಸಕರ ವಿಶೇಷ ಅನುದಾನದಡಿ ಕೆಆರ್‌ಐಡಿಎಲ್ ಹಾಗೂ ಪಿಆರ್‌ಇಡಿ ಇಲಾಖೆ ವತಿಯಿಂದ 1.74 ಕೋಟಿ ರೂ.ಗಳ ವೆಚ್ಚದ ಡಾಂಬರು ಹಾಗೂ ಕಾಂಕ್ರೀಟ್ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಪಿಡಬ್ಲ್ಯೂಡಿ, ಎಸ್‌ಎಫ್‌ಸಿ ಹಾಗೂ ಆರ್‌ಡಿಪಿಆರ್ ಇಲಾಖೆ ವತಿಯಿಂದ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುತ್ತದೆ. ಗ್ರಾಮಸ್ಥರ ಕೋರಿಕೆಯ ಮೇರೆಗೆ ಜನರಲ್ ರಸ್ತೆಗಳನ್ನು ಅಭಿವೃದ್ಧಿಪಡಿಸಿ ಕ್ಷೇತ್ರದ ಜನತೆಯು ಸರಾಗವಾಗಿ ಓಡಾಡಲು ಅನುಕೂಲ ಕಲ್ಪಿಸಿಕೊಡಲಾಗುತ್ತದೆ ಎಂದು ಅವರು ತಿಳಿಸಿದರು.

ಕ್ಷೇತ್ರದ ಪ್ರತಿಯೊಂದು ಗ್ರಾಮ,ಗ್ರಾಮದ ಪ್ರತಿ ಕಾಲೋನಿಗಳ ರಸ್ತೆಯು ಉತ್ತಮವಾಗಿರಬೇಕೆಂಬ ದೃಷ್ಟಿಯಿಂದ ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡಲು ಆದ್ಯತೆ ನೀಡಲಾಗುತ್ತಿದೆ. ರಸ್ತೆಗಳು ಗ್ರಾಮದ ಜನತೆಯ ಆರ್ಥಿಕಾಭಿವೃದ್ಧಿಗೆ ಸಹಕಾರಿಯಾದ್ದರಿಂದ ಉತ್ತಮ ರಸ್ತೆ ಪರಿಕಲ್ಪನೆಯಡಿ ಕೆಲಸ ಮಾಡಲಾಗುತ್ತಿದೆ ಎಂದರು.

ಇದೇ ವೇಳೆ ಶಾಸಕರು ಶಂಭುದೇವನಪುರ ಗ್ರಾಮದಲ್ಲಿ 30 ಲಕ್ಷ ರೂ.ಗಳ ವೆಚ್ಚದ ಕಾಂಕ್ರೀಟ್ ರಸ್ತೆ ಹಾಗೂ ಕೂರಬಾಳನಹುಂಡಿ ಗ್ರಾಮದಲ್ಲಿ 45 ಲಕ್ಷ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವ ಡಾಂಬರ್ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ಮಾಡಿದರು.

ಕೆಆರ್‌ಐಡಿಎಲ್ ಇಲಾಖೆಯಡಿ ಟಿ.ದೊಡ್ಡಪುರ, ಹಿರಿಯೂರು ಹಾಗೂ ಅಕ್ಕೂರು ಗ್ರಾಮದಲ್ಲಿ ತಲಾ 15 ಲಕ್ಷ, ನೀಲಸೋಗೆ ಗ್ರಾಮದಲ್ಲಿ 20 ಲಕ್ಷ, ಹೆಮ್ಮಿಗೆ ಗ್ರಾಮದಲ್ಲಿ 5 ಲಕ್ಷ ಪಿಆರ್‌ಇಡಿ ಇಲಾಖೆಯಡಿ ಮೇದನಿ ಗ್ರಾಮದಲ್ಲಿ 20 ಲಕ್ಷ ಹಾಗೂ ಹೆಮ್ಮಿಗೆ ಬಿ ಗ್ರಾಮದಲ್ಲಿ 5 ಲಕ್ಷ ರೂ.ಗಳ ವೆಚ್ಚದ ರಸ್ತೆ ಕಾಮಗಾರಿಗೆ ಶಾಸಕರು ಭೂಮಿಪೂಜೆ ನೆರವೇರಿಸಿದರು. ಹೆಮ್ಮಿಗೆ ಗ್ರಾಪಂ ಮಾಜಿ ಅಧ್ಯಕ್ಷ ರಾಜಶೇಖರ್, ಕ್ಷೇತ್ರ ಜೆಡಿಎಸ್ ಅಧ್ಯಕ್ಷ ಚಿನ್ನಸ್ವಾಮಿ, ಗ್ರಾಪಂ ಸದಸ್ಯರಾದ ಎಚ್.ಸಿ ಶಿವಕುಮಾರ್, ಬಿ.ಮಹದೇವ್, ದೇವರಾಜ್, ಮಹದೇವಪ್ಪ, ವೆಂಕಟೇಶ್, ಸಿ.ಎಸ್. ರವಿಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಶಂಭುದೇವನಪುರ ರಮೇಶ್, ಸೋಸಲೆ ರಾಜೇಶ್, ರಾಜಣ್ಣ, ಮಾದೇಶ್, ಯುವ ಮುಖಂಡ ದೀಪ ದರ್ಶನ್, ಮೂಗೂರು ಶಿವಮೂರ್ತಿ, ಸಿದ್ದಪ್ಪ ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ಜಿಪಂ ಎಇಇ ಲಕ್ಷ್ಮಣರಾವ್, ರಾಜು ನಾಯಕ್, ಕೆಆರ್ ಡಿಎಲ್‌ನ ದಿಲೀಪ್ ಮತ್ತಿತರರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 10ರಲ್ಲಿ



## ಡಿಆರ್‌ಸಿ ಸಿನಿಮಾಸ್

ದೂ : 4240422/4241800

| | |
|---|---|
| ಸ್ಕ್ರೀನ್ 1 | ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.10.05ಕ್ಕೆ, ಮ.1.05ಕ್ಕೆ, ಕೃಷ್ಣ ವ್ರಿಂದ ವಿಹಾರಿ (ತೆ): ಸಂ.4.20ಕ್ಕೆ, ಅವತಾರ್ (3ಡಿ)(ಇಂ): ರಾ.7ಕ್ಕೆ, ರಾ.10.05ಕ್ಕೆ. |
| ಸ್ಕ್ರೀನ್ 2 | ಚುಪ್ (ಹಿಂ): ಬೆ.10.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಲಕ್ಕಿಮ್ಯಾನ್ (ಕ): ಮ.1.15ಕ್ಕೆ, ಸಂ.4.15ಕ್ಕೆ. |
| ಸ್ಕ್ರೀನ್ 3 | ರಾಜ ರಾಣಿ ರೋರರ್ ರ್‍ಯಾಕೆಟ್ (ಕ): ಬೆ.11.30ಕ್ಕೆ, ಮಾನ್ಸೂನ್ ರಾಗ (ಕ): ಮ.1.50ಕ್ಕೆ, ದೊಂಗಲುನ್ನಾರು ಜಾಗ್ರತ (ತೆ): ಸಂ.5ಕ್ಕೆ, ಧೋಕಾ ರೌಂಡ್ ಡಿ ಕಾರ್ನರ್ (ಹಿಂ): ರಾ.7.20ಕ್ಕೆ, ರಾ.9.50ಕ್ಕೆ. |
| ಸ್ಕ್ರೀನ್ 4 | ಗುರುಶಿಷ್ಯರು (ಕ): ಬೆ.9.55ಕ್ಕೆ, ಸಂ.4ಕ್ಕೆ, ರಾ.7.05ಕ್ಕೆ, ಟ್ರಿಗರ್ (ತ): ಮ.1.10ಕ್ಕೆ, ಬ್ರಹ್ಮಾಸ್ತ್ರ (3ಡಿ) (ಹಿಂ): ರಾ.10.10ಕ್ಕೆ. |

## ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಚುಪ್ (ಹಿಂ): ಬೆ.10.10ಕ್ಕೆ, ಧೋಕಾ ರೌಂಡ್ ಡಿ ಕಾರ್ನರ್ (ಹಿಂ): ಮ.1ಕ್ಕೆ, ಅವತಾರ್ (3ಡಿ)(ಇಂ): ಮ.3.25ಕ್ಕೆ, ರಾ.10ಕ್ಕೆ, ಲಕ್ಕಿಮ್ಯಾನ್ (ಕ): ಸಂ.6.50ಕ್ಕೆ, |
| ಸ್ಕ್ರೀನ್ 2 | ಗುರುಶಿಷ್ಯರು (ಕ): ಬೆ.9.30ಕ್ಕೆ, ಮ.12.50ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಚುಪ್ (ಹಿಂ): ಸಂ.4.10ಕ್ಕೆ. |
| ಸ್ಕ್ರೀನ್ 3 | ಟ್ರಿಗರ್ (ತ): ಬೆ.11ಕ್ಕೆ, ದೊಂಗಲುನ್ನಾರು ಜಾಗ್ರತ (ತೆ): ಮ.1.45ಕ್ಕೆ, ಕೃಷ್ಣ ವ್ರಿಂದ ವಿಹಾರಿ (ತೆ): ರಾ.7.15ಕ್ಕೆ, ಗುರುಶಿಷ್ಯರು (ಕ): ಮ.3.55ಕ್ಕೆ, ಚುಪ್ (ಹಿಂ): ರಾ.10.10ಕ್ಕೆ. |
| ಸ್ಕ್ರೀನ್ 4 | ಬ್ರಹ್ಮಾಸ್ತ್ರ (3ಡಿ)(ಹಿಂ): ರಾ.10.05ಕ್ಕೆ, ಸಂ.4.40ಕ್ಕೆ, ರಾ.10.30ಕ್ಕೆ, ಲಕ್ಕಿಮ್ಯಾನ್ (ಕ): ಮ.1.30ಕ್ಕೆ, ಧೋಕಾ ರೌಂಡ್ ಡಿ ಕಾರ್ನರ್ (ಹಿಂ): ರಾ.8.05ಕ್ಕೆ. |

## ಮೈಸೂರು ವಿಷನ್ ಸಿನಿಮಾ

ದೂ : 0821–2973519

| | |
|---|---|
| ಸ್ಕ್ರೀನ್ 1 | ಸ್ವಚ್ಛ ಕರ್ನಾಟಕ (ಕ): ಬೆ.11ಕ್ಕೆ, ಮಾನ್ಸೂನ್ ರಾಗ (ಕ): ಮ.1.30ಕ್ಕೆ, ಸಂ.4.30ಕ್ಕೆ, ಕೊಟ್ಟು (ಮ): ರಾ.7.45ಕ್ಕೆ. |
| ಸ್ಕ್ರೀನ್ 2 | ಗುರುಶಿಷ್ಯರು (ಕ): ಬೆ.10.30ಕ್ಕೆ, ಮ.1.35ಕ್ಕೆ, ರಾ.7.45ಕ್ಕೆ, ಲಕ್ಕಿಮ್ಯಾನ್ (ಕ): ಸಂ.4.45ಕ್ಕೆ. |
| ಸ್ಕ್ರೀನ್ 3 | ಬ್ರಹ್ಮಾಸ್ತ್ರ (3ಡಿ)(ಹಿಂ): ಮ.1.15ಕ್ಕೆ, ರಾ.7.45ಕ್ಕೆ, ಬ್ರಹ್ಮಾಸ್ತ್ರ (3ಡಿ)(ಕ): ಸಂ.4.30ಕ್ಕೆ. |
| ಸ್ಕ್ರೀನ್ 4 | ಲಕ್ಕಿಮ್ಯಾನ್ (ಕ): ಬೆ.10.30ಕ್ಕೆ, ಮ.1.35ಕ್ಕೆ, ರಾ.7.45ಕ್ಕೆ, ಗುರುಶಿಷ್ಯರು (ಕ): ಸಂ.4.35ಕ್ಕೆ. |

## ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲಕ್ಕಿಮ್ಯಾನ್ (ಕ): ಬೆ.11.30ಕ್ಕೆ, ಮ.3.50ಕ್ಕೆ, ಸಂ.6.15ಕ್ಕೆ, ಮಾನ್ಸೂನ್ ರಾಗ (ಕ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಬ್ರಹ್ಮಾಸ್ತ್ರ (3ಡಿ)(ಹಿಂ): ಮ.12ಕ್ಕೆ, ಮ.2.45ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ವೆಂದು ತನಿಂದದು ಕಾಡು (ತ): ಬೆ.10.05ಕ್ಕೆ, ಬೆ.11.30ಕ್ಕೆ, ಮ.3.05ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ವೇರ್ ದಿ ಕ್ರೌಡಾಡ್ಸ್ ಸಿಂಗ್ (ಇಂ): ಮ.1.40ಕ್ಕೆ, ರಾ.9.45ಕ್ಕೆ, ನೇನು ಮೀಕು ಭಾಗ ಕಾವಾಲ್ಸಿನವಾಡಿನಿ (ತೆ): ರಾ.7.30ಕ್ಕೆ, ಆ ಅಮ್ಮಾಯಿ ಗುರಿಂಚಿ ಮೀಕು ಚೆಪ್ಪಾಲಿ (ತೆ): ಸಂ.4.25ಕ್ಕೆ, ರಾ.10.20ಕ್ಕೆ, ಜಹಾನ್ ಚಾರ್ ಯಾರ್ (ಹಿಂ): ಮ.1.05ಕ್ಕೆ, ಸಿಯಾ (ಹಿಂ): ರಾ.7.05ಕ್ಕೆ.

**ಸೂಚನೆ :** ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ನಾನೇ ಒರುವೇನ್ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಲಕ್ಕಿಮ್ಯಾನ್ (ಕ) | 4 ಪ್ರದರ್ಶನಗಳು |
| **ಉಮಾ ಚಿತ್ರಮಂದಿರ** | (ದೂ: 2520009) |
| ಮಿಸ್ ಮಲ್ಲಿಗೆ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಶಂಶೀರ (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಗುರುಶಿಷ್ಯರು (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಮರ್ದಿನಿ (ಕ) | 4 ಪ್ರದರ್ಶನಗಳು |
| **ರಾಜ್‌ಕಮಲ್** | |
| ಟ್ರಿಗರ್ (ತ) | 4 ಪ್ರದರ್ಶನಗಳು |
| **ಸಂಗಂ** | |
| ಮಾನ್ಸೂನ್ ರಾಗ (ಕ) | 4 ಪ್ರದರ್ಶನಗಳು |
| **ಲಿಡೋ** | |
| ರಾಜಾ ರಾಣಿ ರೋರರ್ ರಾಕೆಟ್ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಗುರುಶಿಷ್ಯರು (ಕ) | 4 ಪ್ರದರ್ಶನಗಳು |
| **ಪ್ರಭಾ** | |
| ಗಾಳಿಪಟ–2 (ಕ) | 4 ಪ್ರದರ್ಶನಗಳು |

## ಮೈಸೂರು ರೇಸುಗಳು–2022



10ನೇ ದಿನ, ಗುರುವಾರ 29–9–2022

**ಇಂದಿನ ರೇಸಿಗೆ ನಮ್ಮ ಆಯ್ಕೆ**

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಬೇಲೂರ್ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಸಿ ಬ್ಲುಶ್ 2. ಡಾನ್ ರೈಸಿಂಗ್ 3. ಡಿ ಅಡ್ಮಿರಲ್

II. ಲೋಕಪಾವನಿ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). ಮ.2.30ಕ್ಕೆ
1. ಮೈ ಒನ್ ಅಂಡ್ ಒನ್ಲಿ 2. ಅನ್ ಇಮ್ಯಾಜಿನಬಲ್ 3. ಪ್ರಿನ್ಸ್ ಕಾರ್ಪೊರೇಟ್

III. ಡೂಪಾಂಟ್ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. (ಮೈಸೂರ್ ಬೇಸ್ಡ್ ಹಾರ್ಸ್). ಮ.3.00ಕ್ಕೆ
1. ದೃಶಿಲ್ಲಾ 2. ಸ್ಯಾಂಟೋರಿನಿ 3. ಅಚೂಕ್

IV. ಹೋಟೆಲ್ RRR ಟ್ರೋಫಿ–1600 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). ಮ.3.30ಕ್ಕೆ
1. ಕೊಂಟೊಟ್ ಗರ್ಲ್ 2. ಲಕ್ಕಿಲೂಸಿಯಾನ 3. ಆ್ಯಂಟಿನೋರಿ

V. ಚೀಫ್ ಮಿನಿಸ್ಟರ್ಸ್ ಟ್ರೋಫಿ– 1400 ಮೀ. ರೇಟೆಡ್ 60 ರಿಂದ 85. ಸಂ.4.00ಕ್ಕೆ
1. ಸ್ಯೆಜಿ ಪೆರಿಲೋಸ್ 2. ವಿಝೂ 3. ಅಬೆರ್‌ಲೂರ್

VI. ಮಂಡ್ಯ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಟೈಗರ್ ರಿಟರ್ನ್ಸ್ 2. ಅನಾಕಿನ್ 3. ಪೋರ್ಟ್ ಆಫ್ ಬ್ಯೂಟಿ

VII. ಕಾರಪುರ್ ಪ್ಲೇಟ್–1200 ಮೀ. ರೇಟೆಡ್ 40 ರಿಂದ 65. ಸಂ.5.00ಕ್ಕೆ
1. ಡೆಲ್‌ಮಾರ್ 2. ಎಕ್ಸ್ಟ್ರಾಡಿನರಿ 3. ಕೋಸ್ಟಲ್ ಕ್ರೂಸಿ

| | |
|---|---|
| ದಿನದ ಅತ್ಯುತ್ತಮ.............................. | : ಸ್ಯೆಜಿ ಪೆರಿಲೋಸ್ |
| ಡಬ್ಬಲ್.............................. | : ಸಿ ಬ್ಲುಶ್, ಡೆಲ್‌ಮಾರ್ |
| ಜಾಕ್‌ಪಾಟ್.............................. | : 3, 4, 5, 6 ಮತ್ತು 7 |
| I ಟ್ರಿಬಲ್.............................. | : 2, 3 ಮತ್ತು 4 |
| II ಟ್ರಿಬಲ್.............................. | : 5, 6 ಮತ್ತು 7 |
| ಎಕ್ಸ್‌ಆಕ್ಟ್.............................. | : 6 ಮತ್ತು 7 |

ಟಿಪ್ ಸ್ಟರ್ ಪಿಜೆಸಿ

## ರವಿಕುಮಾರ್ ನಿಧನ



ಸರಗೂರು, ಸೆ28– ಪಟ್ಟಣದ 9ನೇ ವಾರ್ಡ್ ನಿವಾಸಿ ಸಿ.ರವಿಕುಮಾರ್ (48) ಬುಧವಾರ ನಿಧನರಾಗಿದ್ದಾರೆ. ಮೃತರು ತಾಯಿ, ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಶಾಸಕ ಅನಿಲ್ ಚಿಕ್ಕಮಾದು, ಜೈಪ್ರಕಾಶ್, ಚಿಕ್ಕವೀರನಾಯಕ, ಪಿ. ರವಿ, ಬಸವರಾಜು, ಶ್ರೀನಿವಾಸ್, ಮೃತರ ಅಂತಿಮ ದರ್ಶನ ಪಡೆದರು. ನಾಯಕರ ಸಮಾಜದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.

# ತಮ್ಮ ಕೊಲೆ ಯತ್ನ ಪ್ರಕರಣದ ಮರು ತನಿಖೆಗೆ ತನ್ವೀರ್ ಆಗ್ರಹ



- ಸದ್ಯದಲ್ಲೇ ಕಾನೂನು ಸಚಿವರ ಭೇಟಿಯಾಗುವುದಾಗಿ ಹೇಳಿಕೆ
- ಪಿಎಫ್ಐ ಸಂಘಟನೆ ನಿಷೇಧ ಬರೀ ಚುನಾವಣಾ ಗಿಮಿಕ್

ಮೈಸೂರು, ಸೆ. 28– ಕೇಂದ್ರ ಸರ್ಕಾರ ಪಿಎಫ್ಐ ಸಂಘಟನೆಯನ್ನು ನಿಷೇಧಿಸಿರುವುದು ಚುನಾವಣಾ ಗಿಮಿಕ್ ಎಂದು ಅಭಿಪ್ರಾಯಪಟ್ಟಿರುವ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್, ತನ್ನ ಮೇಲೆ (ತನ್ವೀರ್ ಸೇಠ್) ನಡೆದ ಕೊಲೆ ಯತ್ನ ಪ್ರಕರಣದ ಮರುತನಿಖೆಗಾಗಿ ಸದ್ಯದಲ್ಲೇ ಕಾನೂನು ಸಚಿವರನ್ನು ಭೇಟಿ ಮಾಡಲಿರುವುದಾಗಿ ತಿಳಿಸಿದರು.

ಸದ್ಯದಲ್ಲೇ ನಡೆಯಲಿರುವ ಗುಜರಾತ್ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ರಾಜಕೀಯ ಒತ್ತಡದಿಂದ ಕೇಂದ್ರ ಸರ್ಕಾರ ತರಾತುರಿಯಲ್ಲಿ ಪಿಎಫ್ಐ ಸಂಘಟನೆಯನ್ನು 5 ವರ್ಷ ಕಾಲ ನಿಷೇಧಿಸಿರುವುದಾಗಿ ಹೇಳಿದೆ. ಆದರೆ ಈ ನಿಷೇಧವು ಕ್ರಮಬದ್ಧವಾಗಿಲ್ಲ. ಕೇಂದ್ರ ಸರ್ಕಾರ ಹೇಳುತ್ತಿರುವಂತೆ ಪಿಎಫ್ಐ ಭಯೋತ್ಪಾದನಾ ಸಂಘಟನೆಯಾಗಿದ್ದರೆ, ಅದರ ಬಗ್ಗೆ ಕುಲಂಕಷವಾದ ತನಿಖೆ ನಡೆಸಿ ಸಂಬಂಧಪಟ್ಟ ಅನೇಕರನ್ನು ಬಂಧಿಸುವ ಕಾರ್ಯ ಆಗಬೇಕಾಗಿತ್ತು. ಆದರೆ ಎನ್ಐಎ ದಾಳಿ ನಡೆಸಿ 4 ದಿನದಲ್ಲೇ ಸಂಘಟನೆಯನ್ನು ಕೇವಲ 5 ವರ್ಷ ಕಾಲ ನಿಷೇಧಿಸಲಾಗಿದೆ. ನಿಜಕ್ಕೂ ಭಯೋತ್ಪಾದನಾ ಸಂಘಟನೆಯಾಗಿದ್ದರೆ, ಕೇವಲ 5 ವರ್ಷ ಮಾತ್ರ ನಿಷೇಧ ಎಂಬುದು ಎಷ್ಟರ ಮಟ್ಟಿಗೆ ಸರಿ? ಈ ಸಂಘಟನೆ ಭಯೋತ್ಪಾದನೆಯಲ್ಲಿ ತೊಡಗಿದೆ ಎಂಬುದರ ಬಗ್ಗೆ ಸಮಗ್ರವಾದ ತನಿಖೆ ನಡೆಸಿ ಸಂಬಂಧಿಸಿದ ಎಲ್ಲರನ್ನೂ ಬಂಧಿಸಬೇಕಾಗಿತ್ತು ಅಲ್ಲವೇ? ಎಂದು ಪ್ರಶ್ನಿಸಿದರು.

ನನ್ನ (ತನ್ವೀರ್) ಕೊಲೆ ಯತ್ನ ಪ್ರಕರಣದಲ್ಲಿ ಪಿಎಫ್ಐ ಕೈವಾಡ ಇದೆ ಎಂದು ಕಳೆದ ನಾಲ್ಕು ದಿನಗಳಿಂದ ಮುಖ್ಯಮಂತ್ರಿಗಳು, ಗೃಹ ಸಚಿವರು ಹಾಗೂ ಬಿಜೆಪಿ ಮುಖಂಡರು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಆದರೆ, ಈ ಪ್ರಕರಣದಲ್ಲಿ ಪೊಲೀಸರು ತನಿಖೆ ನಡೆಸಿ ನೀಡಿರುವ ವರದಿಯನ್ನು ಯಾವುದೇ ಸಂಘಟನೆಯ ಉಲ್ಲೇಖವೇ ಇಲ್ಲ. ಹೀಗಿರುವಾಗ ಈ ಪ್ರಕರಣದಲ್ಲಿ ಪಿಎಫ್ಐ ಕೈವಾಡ ಇದೆ ಎಂದು ಹೇಳುತ್ತಿರುವ ಮುಖ್ಯಮಂತ್ರಿಗಳ ಬಳಿ ಇರುವ ಮಾಹಿತಿ ಏನು? ಎಂಬುದು ಗೊತ್ತಾಗ ಬೇಕಲ್ಲವೇ ಈ ಕಾರಣದಿಂದಾಗಿ ಪ್ರಕರಣದ ಮರು ತನಿಖೆ ನಡೆಸುವುದರ ಬಗ್ಗೆ ಸದ್ಯದಲ್ಲೇ ಕಾನೂನು ಸಚಿವರನ್ನು ಭೇಟಿಯಾಗಲಿರುವುದಾಗಿ ತನ್ವೀರ್ ಸೇಠ್ ಹೇಳಿದರು.

ನನ್ನನ್ನು ಕೊಲ್ಲಲು ಯತ್ನಿಸಿದ ಪ್ರಕರಣದಲ್ಲಿ ನೇರವಾಗಿ ಕೃತ್ಯದಲ್ಲಿ ಭಾಗಿಯಾದ್ದವನನ್ನು ಹೊರತುಪಡಿಸಿ, ಉಳಿದ 7 ಮಂದಿ ಆರೋಪಿಗಳೂ ಜೈಲಿನಿಂದ ಹೊರಬಂದಿದ್ದಾರೆ. ನನ್ನನ್ನು ಕೊಲ್ಲಲು ಯತ್ನಿಸಿದವರು ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದಿದ್ದರಿಂದ ಹಾಗೂ ವಿಡಿಯೋ ಸಾಕ್ಷ್ಯ ಇರುವುದರಿಂದ ಮಾತ್ರ ಆತ ಜೈಲಿನಲ್ಲಿದ್ದಾನೆ. ಇಲ್ಲದಿದ್ದರೆ ಅವನೂ ಬಿಡುಗಡೆಯಾಗಿ ಬಿಡುತ್ತಿದ್ದ ಎಂದ ಅವರು, ನಾನು ಸತತವಾಗಿ ಚುನಾವಣೆಯಲ್ಲಿ ಗೆಲ್ಲುತ್ತಾ ಬಂದಿರುವುದರಿಂದ ಬೇರೆಯವರಿಗೆ ಅವಕಾಶವಿಲ್ಲದಾಗಿದೆ. ಹೀಗಾಗಿ ಬೇರೆಯವರಿಗೆ ಅವಕಾಶ ದೊರೆಯಬೇಕೆಂಬ ಕಾರಣಕ್ಕಾಗಿ ನನ್ನನ್ನು ಹತ್ಯೆ ಮಾಡಲು ಪ್ರಯತ್ನಿಸಿದ್ದಾಗಿ ಪೊಲೀಸರು ಸಲ್ಲಿಸಿರುವ ತನಿಖಾ ವರದಿಯಲ್ಲಿ ತಿಳಿಸಲಾಗಿದೆ. ಆದರೆ, ಬೇರೆ ಯಾರಿಗೆ ಅವಕಾಶ ಸಿಗಲು ನನ್ನನ್ನು ಕೊಲ್ಲಲು ಪ್ರಯತ್ನಿಸಿದರು ಎಂಬುದರ ಬಗ್ಗೆ ಉಲ್ಲೇಖವೇ ಇಲ್ಲ. ನನ್ನ ಕೊಲೆ ಯತ್ನದಲ್ಲಿ ಯಾವುದಾದರೂ ಸಂಘಟನೆಯ ಕೈವಾಡವಿತ್ತೇ ಎಂಬುದರ ಬಗ್ಗೆಯೂ ಕೂಡ ಉಲ್ಲೇಖಿಸಿಲ್ಲ ಎಂದ ಅವರು, ಓರ್ವ ಶಾಸಕನ ಕೊಲೆ ಯತ್ನ ಪ್ರಕರಣದ ತನಿಖೆಯೇ ಸಮರ್ಪಕವಾಗಿ ನಡೆದಿಲ್ಲ ಎಂದು ತನ್ವೀರ್ ಸೇಠ್ ಬೇಸರ ವ್ಯಕ್ತಪಡಿಸಿದರು.





## ಇಂದಿನಿಂದ ಭಾರತೀಯ ವಿದ್ಯಾಭವನದಲ್ಲಿ ಪುಸ್ತಕ ಪ್ರದರ್ಶನ, ಮಾರಾಟ

ಮೈಸೂರು, ಸೆ.28–ಭಾರತೀಯ ವಿದ್ಯಾಭವನದ (ಬಿವಿಬಿ)ಒಂದು ವಿಭಾಗ, ಭವನದ ಪ್ರಕಾಶನ ಪುಸ್ತಕ ಭಾರತಿಯು, ಪುಸ್ತಕ ಪ್ರದರ್ಶನ–ಮಾರಾಟವನ್ನು ನಾಳೆಯಿಂದ ಅ.3 ಮತ್ತು ಅ.7, 8ರಂದು ಬೆಳಗ್ಗೆ 10 ರಿಂದ ಸಂಜೆ 4 ಗಂಟೆವರೆಗೆ ಮೈಸೂರು ವಿಜಯನಗರ ಮೊದಲ ಹಂತದಲ್ಲಿನ ಬಿವಿಬಿಯಲ್ಲಿ ಏರ್ಪಡಿಸಿದೆ. ಪುಸ್ತಕ ಪ್ರೇಮಿಗಳಿಗೆ ಶೇ.75ರವರೆಗೆ ರಿಯಾಯ್ತಿ ಲಭ್ಯವಿದೆ.

ಭಾರತೀಯ ಸಂಸ್ಕೃತಿ, ಇತಿಹಾಸ, ಶಾಸ್ತ್ರೀಯ, ಕಾವ್ಯಗಳು, ಜೀವನ ಚರಿತ್ರೆ, ಮಹಾಭಾರತ, ರಾಮಾಯಣ, ಉಪನಿಷದ್ ಸಂದೇಶಗಳು, ಕುಲಪತಿ ಕೆ.ಎಂ.ಮುನ್ಷಿ ಬರೆದಿರುವಂತಹ ಪುಸ್ತಕಗಳು, ಸಿಡಿಗಳು ಕ್ಯಾಸೆಟ್‌ಗಳು, ಪತ್ರಿಕೆಗಳು ಇತ್ಯಾದಿಗಳು ಪ್ರದರ್ಶನದಲ್ಲಿ ಮಾರಾಟಕ್ಕಿವೆ. ಇಲ್ಲಿಗೆ ಪ್ರವೇಶ ಶುಲ್ಕವಿರುವುದಿಲ್ಲ.

ನೂತನ ಸಂಪುಟಗಳು ಸಹ ಕೈಗೆಟುಕುವ ದರ (ಶೇ.50 ರಿಯಾಯಿತಿ)ದಲ್ಲಿ ಲಭ್ಯವಿದೆ. ಹೆಚ್ಚಿನ ಮಾಹಿತಿಗೆ ಫೋನ್: 0821–2412141 ಅಥವಾ 2416106 ಇಲ್ಲವೆ ಇ–ಮೇಲ್: bvbmysore@gmail.com ಸಂಪರ್ಕಿಸಬಹುದು.

## ಬ್ಯಾಂಕ್ ಅಕೌಂಟ್ ಅಪ್‌ಡೇಟ್ ನೆಪದಲ್ಲಿ ಓಟಿಪಿ ಪಡೆದು ಸರ್ಕಾರಿ ಅಧಿಕಾರಿಗೆ 2.25 ಲಕ್ಷ ವಂಚನೆ

### ಪಾರ್ಟ್ ಟೈಂ ಕೆಲಸದ ನೆಪದಲ್ಲಿ ಗೃಹಿಣಿಗೆ 1.55 ಲಕ್ಷ ಪಂಗನಾಮ

ಮೈಸೂರು, ಸೆ.28–ಬ್ಯಾಂಕ್ ಅಕೌಂಟ್ ಅಪ್‌ಡೇಟ್ ಮಾಡಬೇಕೆಂದು ಸಂದೇಶ ಕಳುಹಿಸಿ, ಓಟಿಪಿ ಪಡೆದು ಸರ್ಕಾರಿ ಅಧಿಕಾರಿಯೊಬ್ಬರಿಗೆ 2.25 ಲಕ್ಷ ರೂ. ವಂಚಿಸಲಾಗಿದೆ.

ಮೈಸೂರಿನ ವಿಜಯನಗರ 3ನೇ ಹಂತದ ನಿವಾಸಿ ತಾಂಡವಮೂರ್ತಿ(54) ವಂಚನೆಗೊಳಗಾದವರಾಗಿದ್ದು, ಇವರ ಬ್ಯಾಂಕ್ ಅಕೌಂಟ್ ಅಪ್‌ಡೇಟ್ ಮಾಡಬೇಕೆಂದು ಮೊಬೈಲ್‌ಗೆ ಸಂದೇಶ ಕಳುಹಿಸಿದ ನಂತರ ಕರೆ ಮಾಡಿದ ವ್ಯಕ್ತಿ ಬ್ಯಾಂಕ್ ಅಕೌಂಟ್‌ನ ಓಟಿಪಿ ಪಡೆದಿದ್ದಾನೆ. ತಕ್ಷಣವೇ ಅವರ ಖಾತೆಯಿಂದ 2.25 ಲಕ್ಷ ರೂ. ಅಕ್ರಮವಾಗಿ ವರ್ಗಾವಣೆಯಾಗಿದೆ.

ಮತ್ತೊಂದು ಪ್ರಕರಣದಲ್ಲಿ ಪಾರ್ಟ್ ಟೈಮ್ ಜಾಬ್ ನೀಡುವುದಾಗಿ ನಂಬಿಸಿ ಗೃಹಿಣಿಯೊಬ್ಬರಿಗೆ 1.55 ಲಕ್ಷ ರೂ. ವಂಚಿಸಲಾಗಿದೆ. ಮೇಟಗಳ್ಳಿ ನಿವಾಸಿ ಡಿ.ಕೆ. ಪೂಜಾ (24) ಅವರು ಇನ್‌ಸ್ಟಾಗ್ರಾಂನಲ್ಲಿ ಪಾರ್ಟ್ ಟೈಮ್ ಜಾಬ್ ಹುಡುಕುತ್ತಿದ್ದಾಗ ವಾಟ್ಸಾಪ್ ಪೇಜ್ ಓಪನ್ ಆಗಿದೆ. ನಂತರ ವಾಟ್ಸಾಪ್‌ನಲ್ಲಿ ಲಿಂಕ್ ವೊಂದನ್ನು ಕಳುಹಿಸಿದ್ದು, ಟಾಸ್ಕ್‌ಗಳನ್ನು ಕಂಪ್ಲೀಟ್ ಮಾಡಿದರೆ ಪಾರ್ಟ್ ಟೈಮ್ ಜಾಬ್ ದೊರೆಯುತ್ತದೆ ಎಂದು ನಂಬಿಸಲಾಗಿದೆ. ಟಾಸ್ಕ್‌ಗಳಿಗೆ ಹಣ ಪಾವತಿಸಬೇಕೆಂದು ತಿಳಿಸಲಾಗಿದ್ದು, ಪೂಜಾ ಅವರು ಆನ್‌ಲೈನ್ ಮೂಲಕ 1,55,825 ರೂ. ವರ್ಗಾವಣೆ ಮಾಡಿದ್ದಾರೆ. ಆದರೆ ಅವರಿಗೆ ಜಾಬ್ ದೊರೆಯಲಿಲ್ಲ. ಅವರು ಪಾವತಿಸಿದ ಹಣವೂ ಹಿಂತಿರುಗಿಸಿಲ್ಲ. ಇವೆರಡೂ ಪ್ರಕರಣಗಳೂ ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿದೆ.







### ಭಾರತೀಯ ಸ್ವಚ್ಛತಾ ಲೀಗ್ ಪ್ರಶಸ್ತಿ ಪ್ರಕಟ

## ಮೈಸೂರು ಸ್ವಚ್ಛತೆಗೆ ವಿಶೇಷ ಮನ್ನಣೆ



ಮೈಸೂರು, ಸೆ.28(ಆರ್‌ಕೆ)–2022ರ ಭಾರತೀಯ ಸ್ವಚ್ಛತಾ ಲೀಗ್‌ನಲ್ಲಿ ಭಾಗವಹಿಸಿದ್ದ ಮೈಸೂರು ನಗರಕ್ಕೆ ವಿಶೇಷ ಮನ್ನಣೆಗೆ (Special Mention) ಪಾತ್ರವಾಗಿದೆ.

ಕೇಂದ್ರ ನಗರಾಭಿವೃದ್ಧಿ ಸಚಿವಾಲಯದಿಂದ ನಡೆದ ಸ್ವಚ್ಛ ಸರ್ವೇಕ್ಷಣ ಭಾಗವಾಗಿ ಮೂರು ತಿಂಗಳ ಹಿಂದೆ ಏರ್ಪಡಿಸಿದ್ದ ಸ್ವಚ್ಛತಾ ಲೀಗ್‌ನಲ್ಲಿ ಮೈಸೂರು ಮಹಾನಗರ ಪಾಲಿಕೆಯು ಪಾಲ್ಗೊಂಡು ಸ್ವಚ್ಛತೆ ಸಂಬಂಧ ಮಾಹಿತಿ, ಫೋಟೋ ಮತ್ತು ವಿಡಿಯೋಗಳನ್ನು ಅಪ್‌ಲೋಡ್ ಮಾಡಲಾಗಿತ್ತು. ಇದೀಗ ಸಚಿವಾಲಯದ ಜಂಟಿ ಕಾರ್ಯದರ್ಶಿ ರೂಪಾ ಮಿಶ್ರಾ ಅವರು ಫಲಿತಾಂಶ ಪ್ರಕಟಿಸಿದ್ದು, ಕರ್ನಾಟಕ ರಾಜ್ಯದ ಮೈಸೂರು, ಹೊಳಲ್ಕೆರೆ, ಮಂಗಳೂರು ಹಾಗೂ ಕಾರವಾರ ನಗರಗಳು ವಿಶೇಷ ಗೌರವಕ್ಕೆ ಪಾತ್ರವಾಗಿವೆ ಎಂದು ತಿಳಿಸಿದ್ದಾರೆ.

ಸೆಪ್ಟೆಂಬರ್ 29 ರಿಂದ ಅಕ್ಟೋಬರ್ 1ರವರೆಗೆ ನವದೆಹಲಿಯ ತಲ್ಕಾತೊರಾ ಸ್ಟೇಡಿಯಂನಲ್ಲಿ ನಡೆಯಲಿರುವ ಸ್ವಚ್ಛ ಶಹರ್ ಸಂವಾದ್ ಮತ್ತು ತಂತ್ರಜ್ಞಾನ ವಸ್ತು ಪ್ರದರ್ಶನದ ಸಮಾರೋಪ ಸಮಾರಂಭದಲ್ಲಿ ಗೌರವ ಪುರಸ್ಕಾರ ನೀಡಲಾಗುವುದು. ಮೈಸೂರು ಮೇಯರ್ ಶಿವಕುಮಾರ್, ಉಪ ಮೇಯರ್ ಡಾ. ಆರ್.ರೂಪಾ, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ, ಹಿರಿಯ ಆರೋಗ್ಯಾಧಿಕಾರಿ ಡಾ. ಡಿ.ಜಿ.ನಾಗರಾಜು ಅಕ್ಟೋಬರ್ 1 ರಂದು ಪುರಸ್ಕಾರ ಸ್ವೀಕರಿಸುವರು.

ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಮೇಯರ್ ಶಿವಕುಮಾರ್, ಭಾರತ ಸ್ವಚ್ಛ ಸರ್ವೇಕ್ಷಣೆ ಸ್ಪರ್ಧೆಯಲ್ಲಿ ನಿರಂತರವಾಗಿ ಭಾಗವಹಿಸುತ್ತಾ ಬಂದಿರುವ ಸಾಂಸ್ಕೃತಿಕ ನಗರಿ ಮೈಸೂರಿಗೆ ಈ ವರ್ಷವೂ ವಿಶೇಷ ಮನ್ನಣೆ ದೊರೆತಿರುವುದು ಸಂತಸ ತಂದಿದೆ. ಈ ಗೌರವಕ್ಕೆ ಕಾರಣರಾಗಿರುವ ಪಾಲಿಕೆ ಪೌರಕಾರ್ಮಿಕರು, ಆರೋಗ್ಯ ಶಾಖೆ ಅಧಿಕಾರಿಗಳು, ಪರಿಸರ ಇಂಜಿನಿಯರ್‌ಗಳು, ನಗರ ಪಾಲಿಕೆ ಸದಸ್ಯರು, ಜನಪ್ರತಿನಿಧಿಗಳು, ನಾಗರಿಕರು ಹಾಗೂ ಮಾಧ್ಯಮದವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಮೈಸೂರು ನಗರದಲ್ಲಿ ಉತ್ತಮ ರೀತಿಯಲ್ಲಿ ಕಸ ಸಂಗ್ರಹ, ವಿಲೇವಾರಿ ನಡೆಯುತ್ತಿದೆ. ಹಸಿ ಕಸ, ಒಣ ಕಸ ಹಾಗೂ ಕಟ್ಟಡ ತ್ಯಾಜ್ಯವನ್ನು ಬೇರ್ಪಡಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿದೆಯಾದರೂ ವಿದ್ಯಾರಣ್ಯ ಪುರಂನ ಸೂಯೆಜ್ ಫಾರಂನಲ್ಲಿರುವ ಕಸದ ರಾಶಿಯಿಂದಾಗಿ ಮೈಸೂರಿಗೆ ಪ್ರಥಮ ಸ್ವಚ್ಛ ನಗರ ಪ್ರಶಸ್ತಿ ಕೈತಪ್ಪುತ್ತಿದೆ. ಮುಂದಿನ ದಿನಗಳಲ್ಲಿ ಅದನ್ನು ತೆರವು ಗೊಳಿಸಲು ಯೋಜನೆ ರೂಪಿಸಲಾಗುವುದು ಎಂದು ಶಿವಕುಮಾರ್ ನುಡಿದರು. 3 ರಿಂದ 10 ಲಕ್ಷ ಜನಸಂಖ್ಯೆ ಇರುವ ನಗರಗಳ ವರ್ಗದಲ್ಲಿ ಹೊಳಲ್ಕೆರೆ ಮತ್ತು ಮೈಸೂರು ನಗರಗಳು ವಿಶೇಷ ಮನ್ನಣೆಗೆ ಪಾತ್ರವಾಗಿದ್ದು, ಮುಂದಿನ ವರ್ಷ ಸ್ವಚ್ಛತೆಗೆ ಆದ್ಯತೆ ನೀಡಿ ಸ್ವಚ್ಛ ಸರ್ವೇಕ್ಷಣೆಯಲ್ಲಿ ಪ್ರಥಮ ಸ್ವಚ್ಛ ನಗರ ಹೆಗ್ಗಳಿಕೆಗೆ ಪತ್ರವಾಗುವಂತೆ ಮಾಡಲಾಗುವುದು ಎಂದು ತಿಳಿಸಿದರು.



## ಮೈಸೂರಿನಲ್ಲಿ ಹೆಸರಾಂತ ಬ್ರಾಂಡುಗಳ ರೆಡಿಮೇಡ್ ಗಾರ್ಮೆಂಟ್ಸ್ ಮಾರಾಟ

ಮೈಸೂರು, ಸೆ.28– ಮೈಸೂರು ವಿನೋಬಾ ರಸ್ತೆಯಲ್ಲಿರುವ ಹೋಟೆಲ್ ಸದರ್ನ್ ಸ್ಟಾರ್ (ಹೋಟೆಲ್ ರಿಗಾಲೀಸ್)ನಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಸಿದ್ಧ ಬ್ರಾಂಡುಗಳ ರೆಡಿಮೇಡ್ ಉಡುಪುಗಳ ಬೃಹತ್ ಮಾರಾಟ, ಪ್ರದರ್ಶನ ಏರ್ಪಡಿಸಲಾಗಿದೆ.



ಮೈಸೂರಿನ ಇತಿಹಾಸದಲ್ಲೇ ಪ್ರಪ್ರಥಮ ಬಾರಿಗೆ 75,000 ಕ್ಕಿಂತಲೂ ಹೆಚ್ಚಿನ ವೆರೈಟಿಯ ಲೇಡಿಸ್, ಜಂಟ್ಸ್, ಮಕ್ಕಳ ಜೀನ್ಸ್, ಪ್ಯಾಂಟ್, ಕಾಟನ್ ಪ್ಯಾಂಟ್, ಫಾರ್ಮಲ್ ಪ್ಯಾಂಟ್, ಕ್ಯಾಷ್ಯುಲ್ ಶರ್ಟ್ಸ್, ಆಫೀಸ್–ಪಾರ್ಟಿವೇರ್ ಶರ್ಟ್ಸ್, ಟೀ–ಶರ್ಟ್ಸ್, ಲೋವರ್ ಬರ್ಮುಡಾಸ್, ಶಾರ್ಟ್ಸ್, ಟಾಪ್ಸ್, ಕುರ್ತೀಸ್, ಪುಲ್ಲೋವರ್, ಜಾಕೆಟ್‌ಗಳು ಖರೀದಿಸಲು ಸದವಕಾಶವನ್ನು ಗ್ರಾಹಕರಿಗೆ ಕಲ್ಪಿಸಲಾಗಿದೆ.

ಪುರುಷರ ರೆಡಿಮೇಡ್ ಗಾರ್ಮೆಂಟ್ಸ್‌ನ ಪ್ರತಿಷ್ಠಿತ ಬ್ರಾಂಡ್ಸ್ – ಹೈಲೇಂಡರ್, ಪೆಪೆ ಜೀನ್ಸ್, ಬೋಸ್ಟನ್ ಐವಿ, ನೆಟ್‌ಪ್ಲೇ, ಬೇರ್, ಸ್ಟೈಕರ್, ಇಕೊಅನ್‌ಲಿಮಿಟೆಡ್ ಇತ್ಯಾದಿಗಳ ವಿವಿಧ ಪ್ರಕಾರದ ಕಾಟನ್ ಪ್ಯಾಂಟ್, ಜೀನ್ಸ್ ಪ್ಯಾಂಟ್, ಫಾರ್ಮಲ್ ಪ್ಯಾಂಟ್, ಶರ್ಟ್ಸ್, ಟೀ–ಶರ್ಟ್ಸ್, ಲೋವರ್, ಪುಲ್ಲೋವರ್ ಕೇವಲ ರೂ. 499 ರಿಂದ 999ಕ್ಕೆ ಬಿಕರಿಯಾಗುತ್ತಿದೆ. ಅಲ್ಲದೇ, ಬ್ರಾಂಡೆಡ್ ಲೇಡಿಸ್ ಕುರ್ತೀಸ್ ಮೇಳ ಸಹ ಆಯೋಜಿಸಲಾಗಿದ್ದು, ಪಾಶ್ಚಿಮಾತ್ಯ ಬ್ರಾಂಡ್‌ಗಳ – ವಿರೋ ಮೊಡಾ, ಓನ್ಲಿ, ಅಜಿವೊ, ಜಾಕ್& ಜಾನ್ಸ್, ಅಬೋಫ್, ಟೀಮ್ ಸ್ಪಿರಿಟ್ ಇವುಗಳ ಲಾಂಗ್ ಕುರ್ತೀಸ್, ಪ್ಲಾಜೋ, ಶಾರ್ಟ್ ಕುರ್ತೀಸ್, ಹೆವಿ ರಯಾನ್, ಕಂಪ್ಯೂಟ್ ವರ್ಕ್, ಲೇಡಿಸ್ ಜೀನ್ಸ್ ಪ್ಯಾಂಟ್, ಜ್ಯಾಕೆಟ್‌ಗಳ ವಿಫುಲ ಸಂಗ್ರಹವಿದೆ. ಬ್ರಾಂಡೆಡ್ ಜೀನ್ಸ್ ಶೂ, ಲೇಡಿಸ್ ಚಪ್ಪಲಿ ಮತ್ತು ಸ್ಯಾಂಡಲ್ಸ್, ರಾಯಲ್ ರಾಜಸ್ಥಾನಿ ಪ್ರಿಂಟೆಡ್ ಬೆಡ್‌ಶೀಟ್ಸ್, ಪಿಲ್ಲೋಕವರ್, ಸೋಫಾ ಕವರ್ ಗ್ರಾಹಕರಿಗೆ ದೊರೆಯುತ್ತವೆ. ಗ್ರಾಹಕರಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ.